ಸಂಪುಟ 6, ಸಂಚಿಕೆ 23
ಜೂನ್ 1-15, 2026

# ನ್ಯೂ ಇಂಡಿಯಾ ಸಮಾಚಾರ

ಉಚಿತ ವಿತರಣೆಗಾಗಿ

Follow Us @NISPIBIndia

12 ವರ್ಷಗಳು



## ಅಭಿವೃದ್ಧಿಯ ದೃಷ್ಟಿಕೋನ ರಾಷ್ಟ್ರಕ್ಕಾಗಿ ಅಭಿಯಾನ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 12 ವರ್ಷಗಳ ಅಧಿಕಾರಾವಧಿಯು ಸೇವೆ, ಉತ್ತಮ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸುವ ಮೂಲಕ ಛಾಪು ಮೂಡಿಸಿದೆ. ಈ ಅವಧಿಯಲ್ಲಿ, ರಾಷ್ಟ್ರವು ಸ್ವಾವಲಂಬನೆ, ಡಿಜಿಟಲ್ ಕ್ರಾಂತಿ, ಮೂಲಸೌಕರ್ಯಗಳ ವಿಸ್ತರಣೆ ಮತ್ತು ಜಾಗತಿಕ ವೇದಿಕೆಯಲ್ಲಿ ಬಲವಾದ ಅಸ್ಮಿತೆಯ ಸಾಕಾರಕ್ಕೆ ಸಾಕ್ಷಿಯಾಗಿದೆ.

ಇ-ಪ್ರತಿಗಾಗಿ

**ವಿಶ್ವ ಪರಿಸರ ದಿನ - ಜೂನ್ 5**

# ಪ್ರಕೃತಿ ಮತ್ತು ಪ್ರಗತಿ ಎರಡೂ ಭಾರತದ ಸಂಸ್ಕೃತಿಯ ಅವಿಭಾಜ್ಯ ಅಂಗ

*ಭಾರತದ ಸಹಸ್ರಮಾನಗಳಷ್ಟು ಪುರಾತನ ಸಂಸ್ಕೃತಿಯಲ್ಲಿ, ಪ್ರಗತಿಯು ಪ್ರಕೃತಿಯೊಂದಿಗೆ ಸಾಮರಸ್ಯ, ಸಹಬಾಳ್ವೆಯಿಂದ ಸಾಗುತ್ತಿದೆ. ನಮ್ಮ ಪೂರ್ವಜರ ಆಕಾಂಕ್ಷೆ: पृथ्वीः पूः च उर्वी भव।— ಅಂದರೆ, ಸಂಪೂರ್ಣ ಭೂಮಿ, ಸಂಪೂರ್ಣ ಪರಿಸರ ನಮ್ಮೆಲ್ಲರಿಗೂ ಅನುಕೂಲಕರವಾಗಲಿ ಮತ್ತು ನಮ್ಮ ಕನಸುಗಳಿಗೆ ಅವಕಾಶ ನೀಡಲಿ ಎಂಬುದಾಗಿದೆ. ಹವಾಮಾನ ಬದಲಾವಣೆಯ ಭೀತಿಯನ್ನು ಎದುರಿಸಲು ಪ್ರಸ್ತುತ ನಡೆಯುತ್ತಿರುವ ಜಾಗತಿಕ ಪ್ರಯತ್ನಗಳ ನಡುವೆ, ಭಾರತವು ಭರವಸೆಯ ದಾರಿದೀಪವಾಗಿ ಹೊರಹೊಮ್ಮಿದೆ. ಹವಾಮಾನ ಮತ್ತು ಪರಿಸರವನ್ನು ರಕ್ಷಿಸಲು ಸಮರ್ಪಿತವಾದ ರಾಷ್ಟ್ರ ಮತ್ತು ಅದರ ನಾಗರಿಕರ ಸಂಘಟಿತ ಪ್ರಯತ್ನಗಳ ಫಲದಿಂದ ಮಾತ್ರ ನಾವು ಭವಿಷ್ಯದ ಪೀಳಿಗೆಗೆ ಸುರಕ್ಷಿತ ಪರಿಸರವನ್ನು ಹಸ್ತಾಂತರಿಸಲು ಸಾಧ್ಯವಾಗುತ್ತದೆ.*

> **ಅಭಿವೃದ್ಧಿ ಮತ್ತು ಪರಿಸರದ ನಡುವಿನ ಸಮತೋಲನವು ನಮ್ಮ ಪ್ರಾಚೀನ ಸಂಪ್ರದಾಯದ ಅವಿಭಾಜ್ಯ ಅಂಗವಾಗಿದೆ. ಈ ಸಂಪ್ರದಾಯವನ್ನು ನಾವು ಈಗ 'ಆತ್ಮನಿರ್ಭರ ಭಾರತ'ಕ್ಕೆ ಶಕ್ತಿಯ ಮೂಲವಾಗಿ ಪರಿವರ್ತಿಸುತ್ತಿದ್ದೇವೆ. ನಮ್ಮ ಧರ್ಮಗ್ರಂಥಗಳು ಜೀವಿಗಳು ಮತ್ತು ಪ್ರಕೃತಿಯ ನಡುವಣ ಸಂಬಂಧದಲ್ಲಿ, ವ್ಯಕ್ತಿ ಮತ್ತು ಸಾಮೂಹಿಕ ಸಂಬಂಧಗಳ ನಡುವೆ, ಆತ್ಮ ಹಾಗೂ ದೈವತ್ವದ ನಡುವಣ ಸಂಬಂಧದಲ್ಲಿ ಸಮತೋಲನವನ್ನು ನಮಗೆ ಸದಾ ಕಲಿಸಿವೆ. ನಮಗಾಗಿ ನಾವು ಮಾಡುವ ಪ್ರತಿಯೊಂದು ಕೆಲಸವೂ ನಮ್ಮ ಪರಿಸರದ ಮೇಲೂ ನೇರ ಪರಿಣಾಮ ಬೀರುತ್ತದೆ. ಆದ್ದರಿಂದ, ಭಾರತವು ತನ್ನ ಸಂಪನ್ಮೂಲಗಳ ಸಮರ್ಥ ಬಳಕೆಯ ಕಡೆಗೆ ತನ್ನ ಪ್ರಯತ್ನಗಳನ್ನು ಹೆಚ್ಚು ಸಕ್ರಿಯಗೊಳಿಸುತ್ತಿದೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*



# ನ್ಯೂ ಇಂಡಿಯಾ ಸಮಾಚಾರ

ಸಂಪುಟ 6, ಸಂಚಿಕೆ 23 | ಜೂನ್ 1-15, 2026



ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

## ಒಳ ಪುಟಗಳಲ್ಲಿ...





12 ವರ್ಷಗಳ ಸಂಕಲ್ಪದ ಪಯಣ

**ವಿಕಸಿತ ಭಾರತದತ್ತ ಪ್ರಯಾಣದಲ್ಲಿ ಹೊಸ ಯುಗ**

2014 ರಿಂದ 2026ರ ಕಾಲಾವಧಿಯು ರಾಷ್ಟ್ರೀಯ ಸಂಕಲ್ಪಗಳನ್ನು ಪೂರ್ಣಗೊಳಿಸುವ ಹೊಸ ಅಧ್ಯಾಯವನ್ನು ಬರೆದಿದೆ. ಈ ಕಾಲಘಟ್ಟವು ದೊಡ್ಡ ದೊಡ್ಡ ಬದಲಾವಣೆಗಳನ್ನು ತಂದಿದೆ ಮತ್ತು ಇಂದು ದೇಶದ ಪ್ರತಿಯೊಬ್ಬ ನಾಗರಿಕನೂ ಈ ಬದಲಾವಣೆಯಲ್ಲಿ ಭಾಗಿಯಾಗಿದ್ದಾರೆ. |8-26

ಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕೆ 75 ವರ್ಷ

**ಸೋಮನಾಥ ಅಮೃತ ಮಹೋತ್ಸವ ಭಾರತದ ಅಚಲ ಸ್ಫೂರ್ತಿಯ ಆಚರಣೆ**



ಪ್ರಧಾನ ಮಂತ್ರಿ ಮೋದಿ ಅವರು ತಮ್ಮ ಗುಜರಾತ್ ಭೇಟಿಯ ಸಂದರ್ಭದಲ್ಲಿ ವಡೋದರಾದಲ್ಲಿ ಸರ್ದಾರ್ ಧಾಮ್ ಹಾಸ್ಟೆಲ್ ಅನ್ನು ಉದ್ಘಾಟಿಸಿದರು. |72-74

**ವ್ಯಕ್ತಿತ್ವ: ದಾಮೋದರ್ ಮೆನನ್**
ಸ್ವಾತಂತ್ರ್ಯಕ್ಕಾಗಿ ಹೋರಾಡಲು ಲೇಖನಿಯ ಶಕ್ತಿಯನ್ನು ಬಳಸಿದ ಪತ್ರಕರ್ತ |4

**ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆ, ಎರಡು ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ**
ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಹಲವು ಪ್ರಮುಖ ನಿರ್ಣಯಗಳು | 5-7

**ಬೆಂಗಳೂರು ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಹೆಚ್ಚಿಸುತ್ತದೆ**
ಆರ್ಟ್ ಆಫ್ ಲಿವಿಂಗ್ ಸಂಸ್ಥಾಪನಾ ದಿನಾಚರಣೆಯಲ್ಲಿ ಪ್ರಧಾನ ಮಂತ್ರಿ ಮೋದಿ ಭಾಗಿ |69

**ಆಧುನಿಕ ಮೂಲಸೌಕರ್ಯಗಳನ್ನು ನಿರ್ಮಿಸಿದ ಭಾರತ**




ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೇ 10ರಂದು ತೆಲಂಗಾಣದ ಹೈದರಾಬಾದ್ ನಲ್ಲಿ ಸುಮಾರು 9,400 ಕೋಟಿ ರೂ.ಗಳ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು | 70-71



**Published:** Kanchan Prasad, Director General, on behalf of Central Bureau of Communication
**Communication Address :** Room No–1077, Soochna Bhawan, CGO Complex, New Delhi -110003.
**E-Mail : response-nis@pib.gov.in, RNI No. :** DELENG/2020/78811

# ಸಂಪಾದಕೀಯ

## ಸಮಗ್ರ-ಎಲ್ಲವನ್ನೂ ಒಳಗೊಂಡ - ಸರ್ವಾಂತರ್ಗತ

### 12 ವರ್ಷಗಳ ಸಾರ್ವಜನಿಕ ಸೇವೆ, ಸಾರ್ವಜನಿಕ ನಂಬಿಕೆ ಮತ್ತು ಸಾರ್ವಜನಿಕ ಕಲ್ಯಾಣ

*ಶುಭಾಶಯಗಳು!*

ನರೇಂದ್ರ ಮೋದಿ ಅವರು ಮೇ 26, 2014ರ ಸಂಜೆ ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ಮೊದಲ ಬಾರಿಗೆ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದಾಗ ಭಾರತೀಯ ಪ್ರಜಾಪ್ರಭುತ್ವದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಲಾಯಿತು. ನರೇಂದ್ರ ಮೋದಿ ಅವರು ಸತತ ಮೂರನೇ ಬಾರಿಗೆ ಜೂನ್ 9, 2024 ರಂದು ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಅವರ ನಾಯಕತ್ವದಲ್ಲಿ ಕೇಂದ್ರ ಸರ್ಕಾರ 12 ವರ್ಷಗಳನ್ನು ಪೂರೈಸಿದೆ. ಇದು ಕೇವಲ ರಾಜಕೀಯ ಪಯಣವಷ್ಟೇ ಅಲ್ಲ, ಜೊತೆಗೆ 'ನವ ಭಾರತ' ನಿರ್ಮಾಣದ ಸಮಗ್ರ ಅಭಿಯಾನವಾಗಿದೆ. ಈ ವರ್ಷಗಳಲ್ಲಿ, ದೇಶದ ನಾಗರಿಕರು ಸದಾ ಆಡಳಿತದ ಕೇಂದ್ರವಾಗಿದ್ದು, ಬಡವರು, ಯುವಕರು, ರೈತರು ಮತ್ತು ಮಹಿಳೆಯರನ್ನು ಅಭಿವೃದ್ಧಿಯ ಶ್ರೇಷ್ಠ ಶಕ್ತಿಗಳೆಂದು ಗುರುತಿಸಲಾಗಿದೆ. ಸರ್ಕಾರವು ತನ್ನ ಯೋಜನೆಗಳು ಕೇವಲ ಘೋಷಣೆಗಳಿಗೆ ಸೀಮಿತವಾಗದೆ, ಅವುಗಳ ಪ್ರಯೋಜನಗಳು ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ನೋಡಿಕೊಂಡಿದ. 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಈ ಬದ್ಧತೆಗೆ ಒಂದು ಪ್ರಮುಖ ಉದಾಹರಣೆಯಾಗಿದೆ.

ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ದೃಷ್ಟಿಕೋನದಿಂದಲೂ, ಈ ಅವಧಿಯು ಐತಿಹಾಸಿಕವಾಗಿದೆ. ಭಾರತದ ಪ್ರಾಚೀನ ಯೋಗ ಸಂಪ್ರದಾಯವು ಅಂತಾರಾಷ್ಟ್ರೀಯ ಯೋಗ ದಿನದ ಮೂಲಕ ಜಾಗತಿಕ ಮನ್ನಣೆಯನ್ನು ಗಳಿಸಿದೆ - ಈ ಆಚರಣೆಯನ್ನು ಈಗ ಇಡೀ ಜಗತ್ತು ಸ್ವೀಕರಿಸಿದೆ.

ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ, ಸರ್ಕಾರವು ಹಲವಾರು ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡಿದೆ. ಉದ್ಯೋಗ ಮತ್ತು ಉದ್ಯಮಶೀಲತೆಯಲ್ಲಿ ಭಾರತ ತನ್ನದೇ ಆದ ಹೊಸ ಅಸ್ಮಿತೆಯನ್ನು ಮೂಡಿಸಿದೆ. ದೇಶದ ಯುವಕರು ಈಗ ಕೇವಲ ಉದ್ಯೋಗಾಕಾಂಕ್ಷಿಗಳಾಗಿ ಅಷ್ಟೇ ಉಳಿದಿಲ್ಲ; ಅವರು ಉದ್ಯೋಗ ಸೃಷ್ಟಿಕರ್ತರಾಗುತ್ತಿದ್ದಾರೆ. ಇಂದು, ಭಾರತವು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ ಮತ್ತು ಮೊಬೈಲ್ ಉತ್ಪಾದನೆಯಲ್ಲಿ ಜಾಗತಿಕವಾಗಿ ಎರಡನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ. 'ಡಿಜಿಟಲ್ ಇಂಡಿಯಾ' ಉಪಕ್ರಮ ಆಡಳಿತವನ್ನು ಪಾರದರ್ಶಕ ಮತ್ತು ಪ್ರವೇಶಾರ್ಹವಾಗಿ ಮಾಡಿದೆ. ಪ್ರಸ್ತುತ, ಭಾರತವು ವೇಗವಾಗಿ ನೈಜ-ಸಮಯದ ಡಿಜಿಟಲ್ ಪಾವತಿಗಳನ್ನು ಹೊಂದಿರುವ ದೇಶವಾಗಿ ನಿಂತಿದೆ. ಇದಲ್ಲದೆ, ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರೆದಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಹಲವಾರು ರಾಷ್ಟ್ರಗಳಿಂದ ಅತ್ಯುನ್ನತ ನಾಗರಿಕ ಗೌರವಗಳನ್ನು ನೀಡಿ ಗೌರವಿಸಲಾಗಿದೆ, ಇದು ಜಾಗತಿಕ ವೇದಿಕೆಯಲ್ಲಿ ಭಾರತದ ಹೆಚ್ಚುತ್ತಿರುವ ಸ್ಥಾನಮಾನಕ್ಕೆ ಸಾಕ್ಷಿಯಾಗಿದೆ.

ಕಳೆದ 12 ವರ್ಷಗಳಲ್ಲಿ, ಸರ್ಕಾರವು ಹಿಂದಿನ ನ್ಯೂನತೆಗಳನ್ನು ಸರಿಪಡಿಸಿರುವುದು ಮಾತ್ರವಲ್ಲದೆ, ವರ್ತಮಾನವನ್ನು ಬಲಪಡಿಸುವುದರ ಜೊತೆಗೆ, 'ವಿಕಸಿತ ಭಾರತ @ 2047'ರ ಸ್ಪಷ್ಟ ಸಂಕಲ್ಪವನ್ನು ರಾಷ್ಟ್ರದ ಮುಂದೆ ಇಟ್ಟಿದೆ. ಹೀಗಾಗಿ, ನಾಗರಿಕ ದೇವೋ ಭವಃ (ನಾಗರಿಕನೇ ದೇವರು) ಎಂಬ ಮನೋಭಾವವನ್ನು ಸಾಕಾರಗೊಳಿಸುತ್ತಾ, ಕೇಂದ್ರ ಸರ್ಕಾರವು ಸಾರ್ವಜನಿಕ ಸೇವೆ, ಸಾರ್ವಜನಿಕ ನಂಬಿಕೆ ಮತ್ತು ಸಾರ್ವಜನಿಕ ಕಲ್ಯಾಣದ ಹಾದಿಯಲ್ಲಿ ಸ್ಥಿರವಾಗಿ ಮುನ್ನಡೆಯುತ್ತಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 12 ವರ್ಷಗಳ ಪಯಣವು ಈ ಸಂಚಿಕೆಯ ಕೇಂದ್ರ ಪ್ರಮುಖ ವಸ್ತುವಿಷಯವಾಗಿದೆ - ನಮ್ಮ ಮುಖಪುಟ ಲೇಖನ.

ಇನ್ನು ವ್ಯಕ್ತಿತ್ವ ವಿಭಾಗದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಲೇಖನಿಯ ಶಕ್ತಿಯನ್ನು ಬಳಸಿದ ದಾಮೋದರ್ ಮೆನನ್ ಮತ್ತು ಕೇಂದ್ರ ಸಚಿವ ಸಂಪುಟವು ತೆಗೆದುಕೊಂಡ ಪ್ರಮುಖ ನಿರ್ಣಯಗಳು ಸೇರಿದಂತೆ ಕಳೆದ ಹದಿನೈದು ದಿನಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಕಾರ್ಯಕ್ರಮಗಳ ಸಮಗ್ರ ಅವಲೋಕನ ಮಾಡಲಾಗಿದೆ.

ಉಳಿದಂತೆ ನಿಯತಕಾಲಿಕದ ರಕ್ಷಾಪುಟದ ಒಳ ಪುಟವು ವಿಶ್ವ ಪರಿಸರ ದಿನಕ್ಕೆ (ಜೂನ್ 5 ರಂದು ಆಚರಿಸಲಾಗುತ್ತದೆ) ಮೀಸಲಾಗಿರುವ ವಿಶೇಷ ವಸ್ತು ವಿಷಯವನ್ನು ಒಳಗೊಂಡಿದೆ, ರಕ್ಷಾಪುಟದ ಹಿಂಭಾಗದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರೀಯ ಹಿತಾಸಕ್ತಿಗಾಗಿ ಮಾಡಿದ ಏಳು ಮನವಿಗಳನ್ನು ಎತ್ತಿ ತೋರಿಸಲಾಗಿದೆ.

***ನಿಮ್ಮ ಅಮೂಲ್ಯವಾದ ಸಲಹೆಗಳನ್ನು ನಮಗೆ ಕಳುಹಿಸುವುದನ್ನು ಮುಂದುವರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.***



**(ಧೀರೇಂದ್ರ ಓಝಾ)**

**ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.**
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ






### ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ತಾಜಾ ಮಾಹಿತಿ ಪಡೆಯಲು ಮಹತ್ವದ ಪತ್ರಿಕೆ

2026ರ ಏಪ್ರಿಲ್ 16-30ರ 'ನ್ಯೂ ಇಂಡಿಯಾ ಸಮಾಚಾರ' ಸಂಚಿಕೆಯಲ್ಲಿ 'ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮನವಿ'ಯನ್ನು ಓದುವುದು ಸ್ಫೂರ್ತಿದಾಯಕವಾಗಿತ್ತು. ದೇಶದ ನಾಗರಿಕರ ಆರೋಗ್ಯ, ಸಮೃದ್ಧಿ ಮತ್ತು ಅಭಿವೃದ್ಧಿಗಾಗಿ ಪ್ರಧಾನಮಂತ್ರಿಯವರು ಪ್ರತಿಯೊಂದು ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ ಮತ್ತು ಸೂಕ್ತ ಸಲಹೆಗಳ ಮೂಲಕ ನಮಗೆ ಮಾರ್ಗದರ್ಶನ ನೀಡಿದ್ದಾರೆ. ಇದು ನಿರ್ಣಾಯಕ ವಿಷಯವಾಗಿದೆ. ಸಂಪಾದಕೀಯ ವಿಭಾಗದಲ್ಲಿ, ಮೋದಿ ಸರ್ಕಾರದ ಪ್ರಮುಖ ಸಾಧನೆಯಾದ 'ಭಾರತದಲ್ಲಿ ಕೆಂಪು ಭಯೋತ್ಪಾದನೆಯ ಅಂತ್ಯ' ಬಗ್ಗೆ ವಿವರವಾದ ಮಾಹಿತಿಯನ್ನು ನಾನು ಪಡೆದಿದ್ದೇನೆ. ಸ್ವಾತಂತ್ರ್ಯ ನಂತರ, ನಿರಂತರ ನಕ್ಸಲೀಯ ದಾಳಿಗಳು ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯನ್ನು ನಿಲ್ಲಿಸಿದ್ದವು, ಸಾರ್ವಜನಿಕ ಸಂಪತ್ತಿನ ನಷ್ಟಕ್ಕೆ ಕಾರಣವಾಗಿದ್ದವು ಮತ್ತು ಹೆಚ್ಚಿನ ಸಂಖ್ಯೆಯ ಸೈನಿಕರ ಸಾವಿಗೆ ಕಾರಣವಾಗಿದ್ದವು. ಮೋದಿ ಸರ್ಕಾರವು ಸರಿಯಾದ ನಿರ್ಧಾರವನ್ನು ತೆಗೆದುಕೊಂಡಿತು, ಅಭಿಯಾನವನ್ನು ಪ್ರಾರಂಭಿಸಿತು ಮತ್ತು ಭಾರತವನ್ನು ನಕ್ಸಲ್ ವಾದದಿಂದ ಮುಕ್ತಗೊಳಿಸುವಲ್ಲಿ ಯಶಸ್ವಿಯಾಯಿತು. ಆದ್ದರಿಂದ, ದೇಶದ ಜನರು ಮೋದಿ ಸರ್ಕಾರದ ನೀತಿಗಳು ಮತ್ತು ನಿರ್ಧಾರಗಳಲ್ಲಿ ಹೆಚ್ಚಿನ ನಂಬಿಕೆಯನ್ನು ಬೆಳೆಸಿಕೊಂಡಿದ್ದಾರೆ.

birkhakd@gmail.com

### ಆರ್ಥಿಕ ನೀತಿಗಳ ವಿವರವಾದ ವ್ಯಾಪ್ತಿಯು ಹೆಚ್ಚು ತಿಳಿವಳಿಕೆಯಿಂದ ಕೂಡಿದೆ

ನ್ಯೂ ಇಂಡಿಯಾ ಸಮಾಚಾರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ರಾಷ್ಟ್ರೀಯ ಅಭಿವೃದ್ಧಿ, ಸರ್ಕಾರಿ ಯೋಜನೆಗಳು ಮತ್ತು ಆರ್ಥಿಕ ನೀತಿಗಳ ಬಗ್ಗೆ ನಿಯತಕಾಲಿಕದ ವಿವರವಾದ ಪ್ರಸಾರವು ಹೆಚ್ಚು ತಿಳಿವಳಿಕೆ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ನನ್ನ ವೃತ್ತಿಗೆ ಅತ್ಯಂತ ಪ್ರಸ್ತುತವಾಗಿದೆ ಎಂದು ನಾನು ಮನಗಂಡಿದ್ದೇನೆ. ವೃತ್ತಿಪರ ಸಮುದಾಯಕ್ಕೆ ಚೆನ್ನಾಗಿ ಮಾಹಿತಿ ನೀಡುವ ನಿಮ್ಮ ಪ್ರಯತ್ನಗಳಿಗೆ ಧನ್ಯವಾದಗಳು.

**ಧರ್ಮೇಶ್ ಬೆಳಡಿಯಾ**
dbeladiya32@gmail.com

### ಜನರಿಗೆ ಮಾಹಿತಿಯ ಅಮೂಲ್ಯ ಮೂಲ

ನ್ಯೂ ಇಂಡಿಯಾ ಸಮಾಚಾರ ಮೂಲಕ ಮಾಡಲಾಗುತ್ತಿರುವ ಅತ್ಯುತ್ತಮ ಕಾರ್ಯಕ್ಕಾಗಿ ನಾನು ನಿಮಗೆ ಮತ್ತು ನಿಮ್ಮ ಇಡೀ ತಂಡಕ್ಕೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಇದು ನಿಜವಾಗಿಯೂ ಭವ್ಯವಾದ ನಿಯತಕಾಲಿಕವಾಗಿದೆ, ಎಲ್ಲಾ ಭಾರತೀಯ ಭಾಷೆಗಳಲ್ಲಿ - ವಿಶೇಷವಾಗಿ ತಮಿಳಿನಲ್ಲಿ ಲಭ್ಯವಿರುವುದರಿಂದ ಇದು ಇನ್ನಷ್ಟು ವಿಶೇಷವಾಗಿದೆ. ಇದಕ್ಕೆ ಧನ್ಯವಾದಗಳು, ದೇಶಾದ್ಯಂತದ ಜನರು ನಮ್ಮ ಸರ್ಕಾರದ ಪ್ರಮುಖ ಉಪಕ್ರಮಗಳು, ಸಾಧನೆಗಳು ಮತ್ತು ದೃಷ್ಟಿಕೋನವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ಸಂಪರ್ಕಿಸಲು ಸಾಧ್ಯವಾಗಿದೆ. ನ್ಯೂ ಇಂಡಿಯಾ ಸಮಾಚಾರ ಮೂಲಕ ನಮ್ಮ ಪ್ರಧಾನ ಮಂತ್ರಿ ಮತ್ತು ಸರ್ಕಾರದ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲಾ ಪ್ರಮುಖ ಸುದ್ದಿಗಳನ್ನು ಒಂದೇ ವೇದಿಕೆಯಲ್ಲಿ ಸಂಗ್ರಹಿಸಲಾಗಿದೆ ಎಂಬ ಅಂಶವನ್ನು ನಾನು ವಿಶೇಷವಾಗಿ ಪ್ರಶಂಸಿಸುತ್ತೇನೆ. ಇದು ಸಾರ್ವಜನಿಕರಿಗೆ ಮಾಹಿತಿಯ ಅಮೂಲ್ಯ ಆಕರವಾಗಿದೆ. ರಾಷ್ಟ್ರಕ್ಕೆ ಅಧಿಕೃತ ಮತ್ತು ಸ್ಫೂರ್ತಿದಾಯಕ ಸುದ್ದಿಗಳನ್ನು ತಲುಪಿಸುವ ನಿಮ್ಮ ಸಮರ್ಪಣೆ ಮತ್ತು ಬದ್ಧತೆ ಅತ್ಯಂತ ಶ್ಲಾಘನೀಯ. ಮುಂಬರುವ ವರ್ಷಗಳಲ್ಲಿ ನೀವು ಮತ್ತು ನಿಮ್ಮ ಇಡೀ ತಂಡವು ಯಶಸ್ಸನ್ನು ಮುಂದುವರಿಸಬೇಕೆಂದು ನಾನು ಬಯಸುತ್ತೇನೆ.

**ಎಸ್.ರಾಜೇಶ್ ಖನ್ನಾ**
kisanmorcha.gs@gmail.com

### ಸರ್ಕಾರದ ಉಪಕ್ರಮಗಳ ಬಗ್ಗೆ ಮಾಹಿತಿ ಒದಗಿಸುವಲ್ಲಿ ಬಹು ಸಹಕಾರಿ

ನಾನು ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವನ್ನು ನಿಯಮಿತವಾಗಿ ಓದುತ್ತಿದ್ದೇನೆ. ಸರ್ಕಾರದ ನೀತಿಗಳು ಮತ್ತು ಉಪಕ್ರಮಗಳ ಬಗ್ಗೆ ಮಾಹಿತಿ ಪಡೆಯಲು ನಾನು ಈ ನಿಯತಕಾಲಿಕವನ್ನು ಓದಲು ತೀವ್ರ ಆಸಕ್ತಿ ಹೊಂದಿದ್ದೇನೆ. ನನ್ನ ಸುತ್ತಲಿನ ಎಲ್ಲರೊಂದಿಗೆ ನಾನು ನಿರಂತರವಾಗಿ ಮಾಹಿತಿಯನ್ನು ಹಂಚಿಕೊಳ್ಳುತ್ತೇನೆ.

**ಪಾರುಲ್ ಶರ್ಮಾ**
ps308616@gmail.com

### ನ್ಯೂ ಇಂಡಿಯಾ ಸಮಾಚಾರ ಒಂದು ಅತ್ಯುತ್ತಮ ನಿಯತಕಾಲಿಕವಾಗಿದೆ

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವು ಅತ್ಯುತ್ತಮವಾಗಿದೆ. ನಾವು ವಿಕಸಿತ ಭಾರತದತ್ತ ಸಾಗುತ್ತಿದ್ದೇವೆ. ಇದು ಪ್ರತಿಯೊಬ್ಬ ಭಾರತೀಯ ನಾಗರಿಕನಿಗೂ ಹೆಮ್ಮೆಯ ವಿಷಯವಾಗಿದೆ.

**ಓಂ ಲತಾ ಅಖೌರಿ**
omlata.akhouri@gmail.com

Communication Address : Room No–1077, Soochna Bhawan, CGO Complex, New Delhi -110003

E-Mail: response-nis@pib.gov.in



# ಸ್ವಾತಂತ್ರ್ಯಕ್ಕಾಗಿ ಹೋರಾಡಲು ಲೇಖನಿಯ ಶಕ್ತಿಯನ್ನು ಬಳಸಿದ ಧೈರ್ಯಶಾಲಿ ಪತ್ರಕರ್ತ

**ಜನನ: ಜೂನ್ 10, 1906 | ಮರಣ: ನವೆಂಬರ್ 1, 1980**

***ಖ್ಯಾತ ಭಾರತೀಯ ಪತ್ರಕರ್ತ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸೇವಕ ಕೆ.ಎ.ದಾಮೋದರ್ ಮೆನನ್ ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದರು ಮತ್ತು ಬ್ರಿಟಿಷ್ ಆಡಳಿತದ ವಿರುದ್ಧ ಪ್ರಬಲ ಧ್ವನಿ ಎತ್ತಿದರು. ಮಾತೃಭೂಮಿ ಪತ್ರಿಕೆಯೊಂದಿಗಿನ ಅವರ ಸುದೀರ್ಘ ಒಡನಾಟದ ಅವಧಿಯಲ್ಲಿ, ಅವರು ವಿವಿಧ ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಪ್ರಭಾವಶಾಲಿ ಬರಹಗಳನ್ನು ಬರೆದಿದ್ದಾರೆ. ನಿರ್ಭೀತಿ, ಸಮಗ್ರತೆ, ನಿಷ್ಪಕ್ಷಪಾತತೆ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಆಳವಾದ ಬದ್ಧತೆ ಅವರ ಪತ್ರಿಕೋದ್ಯಮದ ಲಕ್ಷಣಗಳಾಗಿದ್ದವು. ಅವರು ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಈ ಗುಣಲಕ್ಷಣಗಳನ್ನು ಅಸಾಧಾರಣ ಅಸ್ತ್ರಗಳನ್ನಾಗಿ ಪರಿವರ್ತಿಸಿದರು. ಸ್ವಾತಂತ್ರ್ಯದ ನಂತರ, ಸಾರ್ವಜನಿಕ ಸೇವೆಯ ಉದಾತ್ತ ಉದ್ದೇಶದಿಂದ ಪ್ರೇರಿತರಾದ ದಾಮೋದರ್ ಮೆನನ್ ಸಾರ್ವಜನಿಕ ಜಾಗೃತಿ, ಶಿಕ್ಷಣ ಮತ್ತು ಸಮಾಜ ಸುಧಾರಣೆಗೆ ಗಮನಾರ್ಹ ಕೊಡುಗೆಗಳನ್ನು ನೀಡಿದರು.***


ಅವರು ನಿಷ್ಪಕ್ಷಪಾತವಾಗಿ ಉಳಿದರು ಮತ್ತು ಬ್ರಿಟಿಷರ ದೌರ್ಜನ್ಯದ ನಡುವೆಯೂ ನಿರ್ಭೀತ ಪತ್ರಿಕೋದ್ಯಮವನ್ನು ಪ್ರದರ್ಶಿಸಿದರು. ಜೂನ್ 10, 1906 ರಂದು ಕೇರಳದ ಕರುಮಲ್ಲೂರಿನಲ್ಲಿ (ಈಗ ಕೇರಳಂ ಎಂದು ಕರೆಯಲ್ಪಡುತ್ತದೆ) ಜನಿಸಿದ ಮೆನನ್ ಅವರ ಜೀವನವು ಸತ್ಯ, ಸಮಗ್ರತೆ ಮತ್ತು ಸೇವೆಯ ಮೌಲ್ಯಗಳ ಜೀವಂತ ಸಾಕಾರವಾಗಿ ಎದ್ದು ಕಾಣುತ್ತದೆ. ಅವರು ತಿರುವನಂತಪುರಂನ ಮಹಾರಾಜ ಕಾಲೇಜು ಮತ್ತು ಬರ್ಮಾದ ರಂಗೂನ್ ವಿಶ್ವವಿದ್ಯಾಲಯದಲ್ಲಿ (ಇಂದಿನ ಮ್ಯಾನ್ಮಾರ್) ಶಿಕ್ಷಣವನ್ನು ಪಡೆದರು. ತರುವಾಯ, ಅವರು ತಿರುವನಂತಪುರದಿಂದ ಕಾನೂನು ಪದವಿ ಪಡೆದರು. ಅವರ ಶಿಕ್ಷಣದ ನಂತರ, ಸಾರ್ವಜನಿಕ ಸೇವೆ ಮತ್ತು ಪತ್ರಿಕೋದ್ಯಮದತ್ತ ಅವರ ಆಸಕ್ತಿಗಳು ಅಗಾಧವಾಗಿ ಬೆಳೆದವು. ಮಹಾತ್ಮ ಗಾಂಧಿಯವರಿಂದ ಸ್ಫೂರ್ತಿ ಪಡೆದ ಅವರು ನಂತರ ಸ್ವಾತಂತ್ರ್ಯ ಹೋರಾಟಕ್ಕೆ ಸೇರಿದರು. ಮಹಾತ್ಮಾ ಗಾಂಧಿ ಮತ್ತು ಅವರ ಆದರ್ಶಗಳು ದಾಮೋದರ್ ಮೆನನ್ ಅವರ ಜೀವನದ ಮೇಲೆ ಆಳವಾದ ಪ್ರಭಾವ ಬೀರಿದವು.

ಅವರು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆದ 'ಉಪ್ಪಿನ ಸತ್ಯಾಗ್ರಹ' ಮತ್ತು 'ಅಸಹಕಾರ ಚಳವಳಿ'ಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರ ಸಕ್ರಿಯ ಸ್ವಾತಂತ್ರ್ಯ ಹೋರಾಟಕ್ಕಾಗಿ ಅವರನ್ನು ಜೈಲಿಗೆ ಕಳುಹಿಸಲಾಯಿತು. ಬಳಿಕ, 'ಕ್ವಿಟ್ ಇಂಡಿಯಾ ಚಳವಳಿ'ಯಲ್ಲಿ ಭಾಗವಹಿಸಿ ಅದರ ಪ್ರಮುಖ ನಾಯಕರಲ್ಲಿ ಒಬ್ಬರಾಗಿ ಹೊರಹೊಮ್ಮಿದರು. ಇದೇ ಕಾರಣಕ್ಕಾಗಿಯೇ ಬ್ರಿಟಿಷ್ ಅಧಿಕಾರಿಗಳು ಅವರನ್ನು ಮತ್ತೊಮ್ಮೆ ಬಂಧಿಸಿದರು ಮತ್ತು ಅವರು 1942 ರಿಂದ 1945 ರವರೆಗೆ ಸೆರೆಮನೆಯಲ್ಲಿದ್ದರು.

ದಾಮೋದರ್ ಮೆನನ್ ಅವರು ಪ್ರಸಿದ್ಧ ಮಲಯಾಳಂ ದೈನಿಕ "ಮಾತೃಭೂಮಿ"ಯ ಸಂಪಾದಕರಾಗಿ ಅನೇಕ ಸಾರ್ವಜನಿಕ ಸಮಸ್ಯೆಗಳನ್ನು ಎತ್ತಿ ಜಾಗೃತಿ ಮೂಡಿಸಿದರು, ಅಲ್ಲಿ ಅವರು 1948 ರವರೆಗೆ ಕೆಲಸ ಮಾಡಿದರು. ಈ ಪತ್ರಿಕೆಯ ಮೂಲಕ ಅವರು ಬ್ರಿಟಿಷರು ಭಾರತೀಯರ ದಬ್ಬಾಳಿಕೆಯನ್ನು ಟೀಕಿಸಿದರು. ಇದಲ್ಲದೆ, ಅವರು ತಮ್ಮ ವೃತ್ತಿಜೀವನದಲ್ಲಿ "ಸಮದರ್ಶಿ", "ಸ್ವತಂತ್ರ", "ಕಹಲಮ್" ಮತ್ತು "ಪವರ್ ಶಕ್ತಿ" ಮುಂತಾದ ಪತ್ರಿಕೆಗಳನ್ನು ಸಂಪಾದಿಸಿದರು. ಭಾರತದ ಸ್ವಾತಂತ್ರ್ಯದ ನಂತರವೂ, ಅವರು ರಾಷ್ಟ್ರೀಯ ಹಿತಾಸಕ್ತಿಗಾಗಿ ದುಡಿಯುವುದನ್ನು ಮುಂದುವರಿಸಿದರು. ಅವರು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗೆ ಆಯ್ಕೆಯಾದರು. ಕೇರಳ ವಿಧಾನಸಭೆಗೆ ಆಯ್ಕೆಯಾದ ನಂತರ, ಅವರು ರಾಜ್ಯ ಸರ್ಕಾರದಲ್ಲಿ ಸಚಿವರಾದರು. ಅವರು ಉದಾರವಾದಿ ಆರ್ಥಿಕ ದೃಷ್ಟಿಕೋನಗಳನ್ನು ಪ್ರತಿಪಾದಿಸಿದರು. ಅವರು ಅಂತರ್ಜಾತಿ ವಿವಾಹಗಳಿಗೆ ಮಾತ್ರವಲ್ಲದೆ ಅಂತರ್ ಧರ್ಮ ವಿವಾಹಗಳಿಗೂ ಬೆಂಬಲಿಗರಾಗಿದ್ದರು. ಅವರು ನವೆಂಬರ್ 1, 1980 ರಂದು ನಿಧನಹೊಂದಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾರ್ಚ್ 18, 2022 ರಂದು "ಮಾತೃಭೂಮಿ" ಶತಮಾನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ದಾಮೋದರ್ ಮೆನನ್ ಅವರನ್ನು ಸ್ಮರಿಸಿ ಗೌರವ ನಮನ ಸಲ್ಲಿಸಿದರು.

ಕೇಂದ್ರ ಸಚಿವ ಸಂಪುಟ ನಿರ್ಣಯಗಳು

# ಮುಂಗಾರು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ
## ಮತ್ತು ಎರಡು ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ



*ದೇಶಾದ್ಯಂತ ರೈತರ ಹಿತಾಸಕ್ತಿಗಳನ್ನು ಕಾಪಾಡಲು ಮತ್ತು ಅವರ ಆದಾಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ನಿರಂತರವಾಗಿ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಈ ಪ್ರಯತ್ನಕ್ಕೆ ಅನುಗುಣವಾಗಿ, ಕೇಂದ್ರ ಸಚಿವ ಸಂಪುಟವು 2026ರ ಮುಂಗಾರು ಹಂಗಾಮಿಗೆ ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ) ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಈ ನಿರ್ಧಾರವು ರೈತರ ಆದಾಯವನ್ನು ಹೆಚ್ಚಿಸುವ, ಕೃಷಿಯನ್ನು ಹೆಚ್ಚು ಲಾಭದಾಯಕವಾಗಿಸುವ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಹೆಚ್ಚುವರಿಯಾಗಿ, ಇಂಡಿಯಾ ಸೆಮಿಕಂಡಕ್ಟರ್ ಮಿಷನ್ (ಐಎಸ್‌ಎಂ) ಅಡಿಯಲ್ಲಿ ಇನ್ನೂ ಎರಡು ಸೆಮಿಕಂಡಕ್ಟರ್ ಯೋಜನೆಗಳು ಸೇರಿದಂತೆ ಹಲವಾರು ಇತರ ಪ್ರಮುಖ ಪ್ರಸ್ತಾಪಗಳನ್ನು ಸಂಪುಟ ಅನುಮೋದಿಸಿದೆ.*

**ನಿರ್ಣಯ: 2026-27ರ ಮಾರುಕಟ್ಟೆ ಋತುವಿನಲ್ಲಿ 14 ಮುಂಗಾರು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಅನುಮೋದನೆ**

**ಪರಿಣಾಮ:** ರೈತರು ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು 2026-27ರ ಮಾರುಕಟ್ಟೆ ಋತುವಿನಲ್ಲಿ ಮುಂಗಾರು ಹಂಗಾಮಿನ ಬೆಳೆಗಳಿಗೆ ಎಂ.ಎಸ್.ಪಿ.ಯನ್ನು ಹೆಚ್ಚಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸೂರ್ಯಕಾಂತಿ ಬೀಜಗಳಿಗೆ (ಕ್ವಿಂಟಾಲ್ ಗೆ 622 ರೂ.), ಹತ್ತಿ (ಕ್ವಿಂಟಾಲ್ ಗೆ 557 ರೂ.), ಹುಚ್ಚೆಳ್ಳು ಬೀಜ (ಕ್ವಿಂಟಾಲ್ ಗೆ 515 ರೂ.) ಮತ್ತು ಎಳ್ಳು (ಪ್ರತಿ ಕ್ವಿಂಟಾಲ್ ಗೆ 500 ರೂ.) ಎಂ.ಎಸ್.ಪಿ ಹೆಚ್ಚಳಕ್ಕೆ ಅನುಮೋದಿಸಲಾಗಿದೆ.

**ನಿರ್ಣಯ: ಭಾರತೀಯ ಸೆಮಿಕಂಡಕ್ಟರ್ ಮಿಷನ್ (ಐಎಸ್‌ಎಂ) ಅಡಿಯಲ್ಲಿ ಇನ್ನೂ ಎರಡು ಯೋಜನೆಗಳಿಗೆ ಅನುಮೋದನೆ**

**ಪರಿಣಾಮ:** ಅನುಮೋದಿತ ಎರಡು ಪ್ರಸ್ತಾಪಗಳು ಗುಜರಾತ್ ನಲ್ಲಿ ಸೆಮಿಕಂಡಕ್ಟರ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಕಾರಣವಾಗುತ್ತವೆ, ಒಟ್ಟು ಸುಮಾರು 3,936 ಕೋಟಿ ರೂ. ಹೂಡಿಕೆ; ಈ ಉಪಕ್ರಮಗಳು ನುರಿತ ವೃತ್ತಿಪರರಿಗೆ 2,230 ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

- ಈ ಎರಡು ಅನುಮೋದನೆಗಳೊಂದಿಗೆ, ದೇಶದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯು ಗಮನಾರ್ಹ ಉತ್ತೇಜನವನ್ನು ಪಡೆಯುತ್ತದೆ, ಏಕೆಂದರೆ ಐಎಸ್‌ಎಂ ಅಡಿಯಲ್ಲಿ ಅನುಮೋದಿಸಲಾದ ಒಟ್ಟು ಯೋಜನೆಗಳ ಸಂಖ್ಯೆ 12 ಕ್ಕೆ ತಲುಪುತ್ತದೆ, ಇದು ಅಂದಾಜು 1.64 ಲಕ್ಷ ಕೋಟಿ ರೂ.ಗಳ ಸಂಚಿತ ಹೂಡಿಕೆಯನ್ನು ಪ್ರತಿನಿಧಿಸುತ್ತದೆ.
- ಈ ಯೋಜನೆಗಳು ದೇಶದ ಉದಯೋನ್ಮುಖ ವಿಶ್ವದರ್ಜೆಯ ಚಿಪ್ ವಿನ್ಯಾಸ ಸಾಮರ್ಥ್ಯಗಳಲ್ಲಿ ಪೂರಕ ಪಾತ್ರವನ್ನು ವಹಿಸುತ್ತವೆ. 315 ಶೈಕ್ಷಣಿಕ ಸಂಸ್ಥೆಗಳು ಮತ್ತು 104 ಸ್ಟಾರ್ಟ್ ಅಪ್ ಗಳಿಗೆ ಸರ್ಕಾರವು ಒದಗಿಸಿದ ವಿನ್ಯಾಸ ಮೂಲಸೌಕರ್ಯ ಬೆಂಬಲದ ಮೂಲಕ ಈ ಉಪಕ್ರಮವು ವೇಗವನ್ನು ಪಡೆದುಕೊಂಡಿದೆ.

- ಭಾರತದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯೊಳಗಿನ ಆವೇಗವು ವೇಗಗೊಳ್ಳುತ್ತಿದೆ, ಹತ್ತು ಅನುಮೋದಿತ ಯೋಜನೆಗಳು ಈಗಾಗಲೇ ಅನುಷ್ಠಾನದ ವಿವಿಧ ಹಂತಗಳಲ್ಲಿವೆ.

**ನಿರ್ಣಯ: ತುರ್ತು ಸಾಲ ಖಾತ್ರಿ ಯೋಜನೆ (ಇ.ಸಿ.ಎಲ್.ಜಿ.ಎಸ್.) 5.0 ಅನುಮೋದನೆ**

**ಪರಿಣಾಮ:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಉದ್ಭವಿಸುವ ಸವಾಲುಗಳಿಂದ ಚೇತರಿಸಿಕೊಳ್ಳಲು ವ್ಯವಹಾರಗಳನ್ನು ಸಕ್ರಿಯಗೊಳಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಹೆಚ್ಚುವರಿಯಾಗಿ, ವ್ಯವಹಾರಗಳು ತಮ್ಮ ಕಾರ್ಯಾಚರಣೆಗಳನ್ನು ಉಳಿಸಿಕೊಳ್ಳಲು, ಉದ್ಯೋಗಗಳನ್ನು ರಕ್ಷಿಸಲು ಮತ್ತು ಪೂರೈಕೆ ಸರಪಳಿಗಳನ್ನು ನಿರ್ವಹಿಸಲು ಸಹಾಯ ಮಾಡುವ ನಿರೀಕ್ಷೆಯಿದೆ.

- ಪ್ರಸ್ತಾವಿತ ಸಾಲ ಖಾತರಿ ಯೋಜನೆಯು ವ್ಯವಹಾರಗಳಿಗೆ, ವಿಶೇಷವಾಗಿ ಎಂಎಸ್ಎಂಇಗಳು ಮತ್ತು ವಿಮಾನಯಾನ ವಲಯಕ್ಕೆ ನೆರವಾಗುವ ನಿರ್ಣಾಯಕ ಕ್ರಮವನ್ನು ಪ್ರತಿನಿಧಿಸುತ್ತದೆ, ಅವುಗಳ ಹೆಚ್ಚುವರಿ ದುಡಿಯುವ ಬಂಡವಾಳದ ಅವಶ್ಯಕತೆಗಳನ್ನು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಪೂರೈಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ.
- ಸಕಾಲದಲ್ಲಿ ಹಣದ ಲಭ್ಯತೆಯನ್ನು ಖಾತ್ರಿಪಡಿಸುವ ಮೂಲಕ, ಈ ಯೋಜನೆಯು ವ್ಯವಹಾರಗಳನ್ನು ಉಳಿಸಿಕೊಳ್ಳಲು ಮತ್ತು ಉದ್ಯೋಗ ನಷ್ಟವನ್ನು ತಡೆಯಲು ಸಹಾಯ ಮಾಡುತ್ತದೆ.
- ಇದು ತಡೆರಹಿತ ದೇಶೀಯ ಉತ್ಪಾದನೆಯನ್ನು ಉತ್ತೇಜಿಸುತ್ತದೆ ಮತ್ತು ಪರಿಸರ ವ್ಯವಸ್ಥೆಯ ಚೇತರಿಕೆಯನ್ನು ಎತ್ತಿಹಿಡಿಯುತ್ತದೆ.

**ನಿರ್ಣಯ: ಗುಜರಾತ್‌ನ ವಾದಿನಾರ್‌ನಲ್ಲಿ ಹಡಗು ದುರಸ್ತಿ ಸೌಲಭ್ಯವನ್ನು ಕಲ್ಪಿಸಲು ಸಂಪುಟ ಅನುಮೋದನೆ ನೀಡಿದೆ.**

**ಪರಿಣಾಮ:** ವಾದಿನಾರ್ ಹಡಗು ದುರಸ್ತಿ ಕೇಂದ್ರವು ಭಾರತದ ಪ್ರಸ್ತುತ ಹಡಗು ದುರಸ್ತಿ ಮೂಲಸೌಕರ್ಯದಲ್ಲಿರುವ ದೊಡ್ಡ ಕೊರತೆಯನ್ನು ನೇರವಾಗಿ ನಿವಾರಿಸಲಿದೆ. ಏಕೆಂದರೆ, 230 ಮೀಟರ್‌ಗಿಂತ ಹೆಚ್ಚು ಉದ್ದವಿರುವ ದೊಡ್ಡ ಹಡಗುಗಳನ್ನು ದುರಸ್ತಿ ಮಾಡಲು ಭಾರತದಲ್ಲಿ ಸೂಕ್ತವಾದ ಸೌಲಭ್ಯವಿರಲಿಲ್ಲ. ಪ್ರಸ್ತುತ ಈ ಕೇಂದ್ರವು 300 ಮೀಟರ್‌ವರೆಗಿನ ಹಡಗುಗಳ ದುರಸ್ತಿಗೆ ಅವಕಾಶ ಮಾಡಿಕೊಡುವ ಮೂಲಕ, ದೊಡ್ಡ ಹಡಗುಗಳ ಉನ್ನತ ಮೌಲ್ಯದ ದುರಸ್ತಿ ಕಾರ್ಯಗಳನ್ನು ಭಾರತದಲ್ಲೇ ಕೈಗೊಳ್ಳಲು ಸಾಧ್ಯವಾಗಿಸುತ್ತದೆ. ಇದು ವಿದೇಶಿ ಹಡಗುಕಟ್ಟೆಗಳ ಮೇಲಿನ ಅವಲಂಬನೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ ಮತ್ತು ವಿದೇಶಿ ವಿನಿಮಯದ ಹೊರಹರಿವನ್ನು ತಡೆಯುತ್ತದೆ.

- ಈ ಯೋಜನೆಯು ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಇದು ಹಡಗು ದುರಸ್ತಿ, ಲಾಜಿಸ್ಟಿಕ್ಸ್ ಮತ್ತು ಪೂರಕ ಕೈಗಾರಿಕೆಗಳಲ್ಲಿ ಸುಮಾರು 290 ನೇರ ಮತ್ತು ಸುಮಾರು 1,100 ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವುದರ ಜೊತೆಗೆ, ವಿಶಾಲವಾದ ಕಡಲ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ವೇಗವರ್ಧಿಸುತ್ತದೆ.

**ನಿರ್ಣಯ: ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ತಿದ್ದುಪಡಿ ಮಸೂದೆ, 2026 ಅನ್ನು ಸಂಸತ್ತಿನಲ್ಲಿ ಮಂಡಿಸುವ ಪ್ರಸ್ತಾಪಕ್ಕೆ ಅನುಮೋದನೆ**

**ಪರಿಣಾಮ:** ಇದರ ಉದ್ದೇಶ ಸರ್ವೋಚ್ಚ ನ್ಯಾಯಾಲಯ (ನ್ಯಾಯಾಧೀಶರ ಸಂಖ್ಯೆ) ಕಾಯ್ದೆ 1956ಕ್ಕೆ ತಿದ್ದುಪಡಿ ತರುವುದು, ಆ ಮೂಲಕ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿಗಳನ್ನು ಹೊರತುಪಡಿಸಿ ನ್ಯಾಯಾಧೀಶರ ಸಂಖ್ಯೆಯನ್ನು ಈಗಿರುವ 33 ರಿಂದ 37ಕ್ಕೆ ಹೆಚ್ಚಿಸುವುದು.

- ನ್ಯಾಯಾಧೀಶರ ಸಂಖ್ಯೆಯಲ್ಲಿನ ಹೆಚ್ಚಳವು ಸರ್ವೋಚ್ಚ ನ್ಯಾಯಾಲಯ ಹೆಚ್ಚು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತದೆ, ಆ ಮೂಲಕ ತ್ವರಿತ ನ್ಯಾಯವನ್ನು ಖಾತ್ರಿಪಡಿಸುತ್ತದೆ.
- ನ್ಯಾಯಾಧೀಶರು ಮತ್ತು ಸಹಾಯಕ ಸಿಬ್ಬಂದಿಯ ವೇತನ ಮತ್ತು ಇತರ ವೇತನಗಳ ಮೇಲೆ ಮಾಡಿದ ವೆಚ್ಚವನ್ನು ಭಾರತದ ಸಂಚಿತ ನಿಧಿಯಿಂದ ಭರಿಸಲಾಗುವುದು.

**ನಿರ್ಣಯ: 2026-27ರ ಸಕ್ಕರೆ ಉತ್ಪಾದನಾ ಋತುವಿನಲ್ಲಿ ಕಬ್ಬು ಬೆಳೆಗಾರರಿಗೆ ಪ್ರತಿ ಕ್ವಿಂಟಾಲ್ ಗೆ 365 ರೂ.ಗಳ ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ (ಎಫ್.ಆರ್. ಪಿ.) ಅನುಮೋದನೆ**

**ಪರಿಣಾಮ:** ಕಬ್ಬು ಬೆಳೆಗಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ನಿರ್ಧಾರವು 5 ಕೋಟಿ ಕಬ್ಬು ಬೆಳೆಗಾರರಿಗೆ ಮತ್ತು ಸಕ್ಕರೆ ಕಾರ್ಖಾನೆಗಳು ಮತ್ತು ಸಂಬಂಧಿತ ಪೂರಕ ಚಟುವಟಿಕೆಗಳಲ್ಲಿ ತೊಡಗಿರುವ 5 ಲಕ್ಷ ಕಾರ್ಮಿಕರಿಗೆ ಪ್ರಯೋಜನವನ್ನು ನೀಡುತ್ತದೆ.

**ನಿರ್ಣಯ: ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ 19 ಜಿಲ್ಲೆಗಳನ್ನು ಒಳಗೊಂಡ ಮೂರು ಬಹು-ಟ್ರ್ಯಾಕಿಂಗ್ ಯೋಜನೆಗಳಿಗೆ ಅನುಮೋದನೆ ನೀಡಿದೆ.**

**ಪರಿಣಾಮ:** ಇದು ಭಾರತೀಯ ರೈಲ್ವೆಯ ಹಾಲಿ ಜಾಲಕ್ಕೆ ಸುಮಾರು 901 ಕಿಲೋಮೀಟರ್ ಸೇರ್ಪಡೆಯಾಗಲಿದೆ.


- ಈ ಯೋಜನೆಗಳ ಒಟ್ಟು ಅಂದಾಜು ವೆಚ್ಚ 23,437 ಕೋಟಿ ರೂ.ಗಳಾಗಿದ್ದು, ಅವುಗಳನ್ನು 2030-31ರ ವೇಳೆಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.
- ಉದ್ದೇಶಿತ ಬಹು-ಟ್ರ್ಯಾಕಿಂಗ್ ಯೋಜನೆಗಳು ಸುಮಾರು 4,161 ಹಳ್ಳಿಗಳಿಗೆ ಸಂಪರ್ಕವನ್ನು ಸುಧಾರಿಸುತ್ತವೆ, ಸುಮಾರು 83 ಲಕ್ಷ ಜನಸಂಖ್ಯೆಗೆ ಸೇವೆ ಸಲ್ಲಿಸುತ್ತವೆ.

**ಈ ಯೋಜನೆಗಳಲ್ಲಿ ಈ ಕೆಳಗಿನವು ಸೇರಿವೆ**

ನಾಗ್ದಾ ಮಥುರಾ: 3 ಮತ್ತು 4ನೇ ಸಾಲುಗಳು

ಗುಂತಕಲ್ ವಾಡಿ: 3ನೇ ಮತ್ತು 4ನೇ ಸಾಲುಗಳು

ಬುರ್ವಾಲ್ ಸೀತಾಪುರ: 3 ಮತ್ತು 4ನೇ ಮಾರ್ಗಗಳು



**ನಿರ್ಣಯ: ನಾಗ್ಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮೇಲ್ದರ್ಜೀಕರಣಕ್ಕೆ ಸಂಪುಟ ಅನುಮೋದನೆ ನೀಡಿದೆ.**

**ಪರಿಣಾಮ:** ನಾಗ್ಪುರದ 'ಮಲ್ಟಿ-ಮಾಡಲ್ ಇಂಟರ್ನ್ಯಾಷನಲ್ ಕಾರ್ಗೋ ಹಬ್ & ಏರ್ ಪೋರ್ಟ್' (MIHAN) ಯೋಜನೆಯಡಿಯಲ್ಲಿ, ಇದು ನಾಗ್ಪುರ ವಿಮಾನ ನಿಲ್ದಾಣವು ಪ್ರಾದೇಶಿಕ ವಾಯುಯಾನ ಕೇಂದ್ರವಾಗುವತ್ತ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಸರ್ಕಾರದ ಮೇಲ್ವಿಚಾರಣೆಯೊಂದಿಗೆ ಖಾಸಗಿ ವಲಯದ ದಕ್ಷತೆಯನ್ನು ಹೆಚ್ಚಿಸುವ ಮೂಲಕ, ಈ ವಿಮಾನ ನಿಲ್ದಾಣವು ಗಣನೀಯ ಹೂಡಿಕೆ, ಆಧುನೀಕರಣ ಹಾಗೂ ಸುಧಾರಿತ ಪ್ರಯಾಣಿಕ ಮತ್ತು ಸರಕು ಸಾಗಣೆ ಸೇವೆಗಳಿಗೆ ಸಜ್ಜಾಗಿದೆ.

- ಹಂತ-ಹಂತದ ಅಭಿವೃದ್ಧಿ ಯೋಜನೆಯಡಿಯಲ್ಲಿ, ಇದರ ಗರಿಷ್ಠ ಸಾಮರ್ಥ್ಯವು ವಾರ್ಷಿಕವಾಗಿ 3 ಕೋಟಿ ಪ್ರಯಾಣಿಕರನ್ನು ತಲುಪುವ ನಿರೀಕ್ಷೆಯಿದೆ. ಆ ಮೂಲಕ ಇದನ್ನು ಮಧ್ಯ ಭಾರತದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಒಂದಾಗಿ ಸ್ಥಾಪಿಸಲಾಗುವುದು.
- ಈ ಅಭಿವೃದ್ಧಿಯು ವಿದರ್ಭ ಪ್ರದೇಶದೊಳಗಿನ ಸಂಪರ್ಕವನ್ನು ಹೆಚ್ಚಿಸುವುದಲ್ಲದೆ, ಅದರ ಆರ್ಥಿಕ ಮೂಲಸೌಕರ್ಯವನ್ನೂ ಬಲಪಡಿಸುತ್ತದೆ. ಇದು ಸರಕು ಸಾಗಣೆ ನಿರ್ವಹಣಾ ಸಾಮರ್ಥ್ಯದಲ್ಲಿ ಭಾರಿ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ನಿರೀಕ್ಷಿಸಲಾಗಿದೆ.



*ಸಂಪುಟ ನಿರ್ಣಯಗಳ ಕುರಿತ ಮಾಧ್ಯಮಗೋಷ್ಠಿ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*

**ನಿರ್ಣಯ: ಮೂಲದ ಬಳಿ ಇರುವ ಕಲ್ಲಿದ್ದಲು/ಲಿಗ್ನೈಟ್ ಅನಿಲೀಕರಣ ಯೋಜನೆಗಳಿಗೆ ಪ್ರೋತ್ಸಾಹಕ ಯೋಜನೆಗೆ 37,500 ಕೋಟಿ ರೂ. ಅನುಮೋದನೆ**

**ಪರಿಣಾಮ:** ಈ ಯೋಜನೆಯು ಭಾರತದ ಕಲ್ಲಿದ್ದಲು/ಲಿಗ್ನೈಟ್ ಅನಿಲೀಕರಣ ಕಾರ್ಯಕ್ರಮವನ್ನು ವೇಗಗೊಳಿಸುವ ಮತ್ತು 2030ರ ವೇಳೆಗೆ 100 ದಶಲಕ್ಷ ಟನ್ ಕಲ್ಲಿದ್ದಲನ್ನು ಅನಿಲೀಕರಣಗೊಳಿಸುವ ರಾಷ್ಟ್ರೀಯ ಗುರಿಯನ್ನು ಮುನ್ನಡೆಸುವ ಪ್ರಮುಖ ಹೆಜ್ಜೆಯನ್ನು ಪ್ರತಿನಿಧಿಸುತ್ತದೆ.

- ಇದಲ್ಲದೆ, ಇದು ಇಂಧನ ಭದ್ರತೆಯನ್ನು ಬಲಪಡಿಸಲು ಮತ್ತು ದ್ರವೀಕೃತ ನೈಸರ್ಗಿಕ ಅನಿಲ (ಎಲ್.ಎನ್.ಜಿ) ನಂತಹ ಪ್ರಮುಖ ಉತ್ಪನ್ನಗಳ ಮೇಲಿನ ಆಮದು ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದರಲ್ಲಿ ಶೇ.50ಕ್ಕಿಂತ ಹೆಚ್ಚು ಪ್ರಸ್ತುತ ಆಮದು ಮಾಡಿಕೊಳ್ಳಲಾಗಿದೆ; ಯೂರಿಯಾ (ಶೇ.20 ಆಮದು); ಅಮೋನಿಯಾ (ಶೇ.100 ಆಮದು); ಮತ್ತು ಮೆಥನಾಲ್ (ಶೇ.80-90ರಷ್ಟು ಆಮದು).

**ನಿರ್ಣಯ: ಗುಜರಾತ್ ನ ಅಹಮದಾಬಾದ್ ಜಿಲ್ಲೆಯನ್ನು ಒಳಗೊಂಡ ಹೊಸ ಯೋಜನೆಗೆ ಅನುಮೋದನೆ**

**ಪರಿಣಾಮ:** ಇದು ಹಾಲಿ ಇರುವ ಭಾರತೀಯ ರೈಲ್ವೆಯ ಜಾಲಕ್ಕೆ ಸುಮಾರು 134 ಕಿಲೋಮೀಟರ್ ಸೇರ್ಪಡೆಯಾಗಲಿದೆ. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ಅಂದಾಜು 20,667 ಕೋಟಿ ರೂ.ಗಳಾಗಿದ್ದು, ಇದನ್ನು 2030-31ರ ವೇಳೆಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

- ಈ ಯೋಜನಾ ವಿಭಾಗವು ಅಹಮದಾಬಾದ್, ಧೋಲೇರಾ ಎಸ್ಐಆರ್, ಮುಂಬರುವ ಧೋಲೆರಾ ವಿಮಾನ ನಿಲ್ದಾಣ ಮತ್ತು ಲೋಥಾಲ್ ರಾಷ್ಟ್ರೀಯ ಕಡಲ ಪರಂಪರೆಯ ಸಂಕೀರ್ಣದ ನಡುವೆ ಸುಧಾರಿತ ಸಂಪರ್ಕವನ್ನು ಸ್ಥಾಪಿಸುತ್ತದೆ.
- ಅಹಮದಾಬಾದ್ ನಿಂದ ಧೋಲೆರಾಗೆ ಸಂಪರ್ಕ ಕಲ್ಪಿಸುವುದರಿಂದ ಪ್ರಯಾಣಿಕರ ಪ್ರಯಾಣದ ಸಮಯ ಕಡಿಮೆಯಾಗುತ್ತದೆ, ದೈನಂದಿನ ಪ್ರಯಾಣವು ಹೆಚ್ಚು ಆರಾಮದಾಯಕವಾಗಿಸುತ್ತದೆ ಮತ್ತು ಅದೇ ದಿನದ ಹಿಂದಿರುಗುವ ಪ್ರಯಾಣವನ್ನು ಸಕ್ರಿಯಗೊಳಿಸುತ್ತದೆ.
- ಈ ಸೆಮಿ-ಹೈಸ್ಪೀಡ್ ರೈಲ್ವೆ ವಿವಿಧ ನಗರಗಳಲ್ಲಿ ನೂರಾರು ಕಿ.ಮೀ ದೂರದಲ್ಲಿ ವಾಸಿಸುವ ಜನರನ್ನು ಹತ್ತಿರಕ್ಕೆ ತರುತ್ತದೆ.

**ನಿರ್ಣಯ: ಹತ್ತಿ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ಮತ್ತು 2030-31ರ ವೇಳೆಗೆ ಜಾಗತಿಕ ಜವಳಿ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಗುರಿಯನ್ನು 5,659.22 ಕೋಟಿ ರೂ.ಗಳ ವೆಚ್ಚದೊಂದಿಗೆ "ಹತ್ತಿ ಉತ್ಪಾದಕತೆ ಅಭಿಯಾನ"ಕ್ಕೆ ಅನುಮೋದನೆ ನೀಡಲಾಯಿತು.**

**ಪರಿಣಾಮ:** ಈ ಮಿಷನ್ ಭಾರತ ಸರ್ಕಾರದ '5ಎಫ್' ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತದೆ (ಫಾರ್ಮ್ ಟು ಫೈಬರ್ ಟು ಫ್ಯಾಕ್ಟರಿ ಟು ಫ್ಯಾಷನ್ ಟು ಫಾರಿನ್).

- ರೋಗ ಮತ್ತು ಕೀಟಗಳಿಗೆ ನಿರೋಧಕವಾದ ಹೆಚ್ಚಿನ ಇಳುವರಿ ನೀಡುವ ತಳಿಯ (ಎಚ್ ವೈ ವಿ) ಬೀಜಗಳ ಅಭಿವೃದ್ಧಿಯ ಮೂಲಕ ಹತ್ತಿ ಉತ್ಪಾದಕತೆಯನ್ನು ಹೆಚ್ಚಿಸುವತ್ತ ಮಿಷನ್ ಗಮನ ಹರಿಸುತ್ತದೆ; ರಾಜ್ಯ ಸರ್ಕಾರಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ (ಎಸ್ಎಯು) ಮೂಲಕ ಅಸ್ತಿತ್ವದಲ್ಲಿರುವ ಮತ್ತು ಇತ್ತೀಚಿನ ಬೆಳೆ ಉತ್ಪಾದನಾ ತಂತ್ರಜ್ಞಾನಗಳನ್ನು ದೊಡ್ಡ ಪ್ರಮಾಣದ ಪ್ರಚಾರ ಮತ್ತು ಇತ್ತೀಚಿನ ಬೆಳೆ ಉತ್ಪಾದನಾ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಹೆಚ್ಚಿಸುವುದು; ಉದ್ಯಮಕ್ಕೆ ಕನಿಷ್ಠ ಕಲುಷಿತ ಹತ್ತಿ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು; ಮತ್ತು ಈ ಕೆಳಗಿನ ಪ್ರಮುಖ ಅಂಶಗಳ ಮೇಲೆ ಕೇಂದ್ರೀಕರಿಸಿ ಉತ್ತಮ-ಗುಣಮಟ್ಟದ ಹತ್ತಿ ರಫ್ತುಗಳನ್ನು ಉತ್ತೇಜಿಸುವುದು.
- ಹೆಚ್ಚುವರಿಯಾಗಿ, ಉದ್ಯಮಕ್ಕೆ ಕನಿಷ್ಠ ಕಲುಷಿತ ಹತ್ತಿ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಉತ್ತಮ-ಗುಣಮಟ್ಟದ ಹತ್ತಿ ರಫ್ತುಗಳನ್ನು ಉತ್ತೇಜಿಸುವ ಗುರಿಯನ್ನು ಮಿಷನ್ ಹೊಂದಿದೆ. ●




12 ವರ್ಷಗಳ ಸಂಕಲ್ಪದ ಪಯಣ

# ವಿಕಸಿತ ಭಾರತದತ್ತ ಪ್ರಯಾಣದಲ್ಲಿ ಹೊಸ ಯುಗ




*2014 ರಿಂದ 2026ರ ಕಾಲಾವಧಿಯು ರಾಷ್ಟ್ರೀಯ ಸಂಕಲ್ಪಗಳನ್ನು ಪೂರ್ಣಗೊಳಿಸುವ ಹೊಸ ಅಧ್ಯಾಯವನ್ನು ಬರೆದಿದೆ. ಈ ಅವಧಿಯು ಪ್ರಮುಖ ಪರಿವರ್ತನೆಗಳನ್ನು ತಂದಿದೆ, ಮತ್ತು ಇಂದು ದೇಶದ ಪ್ರತಿಯೊಬ್ಬ ನಾಗರಿಕರು ಈ ಬದಲಾವಣೆಯ ಭಾಗವಾಗಿದ್ದೇವೆ ಎಂದು ಭಾವಿಸುತ್ತಾರೆ. ಹೀಗಾಗಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿನ ಕಳೆದ 12 ವರ್ಷಗಳ ಸಾಧನೆಗಳು 'ಅಮೃತ'ವನ್ನು ಪ್ರತಿನಿಧಿಸುತ್ತವೆ - ಇದು ಹಲವು ವರ್ಷಗಳ ಕಠಿಣ ಸಮರ್ಪಣೆ ಮತ್ತು ತಪಸ್ಸಿನಿಂದ ಫಲಶ್ರುತಿಯಾಗಿದೆ; ಈ ಸಾರವೇ 'ಅಮೃತ ಕಾಲ'ದ ಸಮಯದಲ್ಲಿ ಭಾರತವನ್ನು ವಿಕಸಿತ ರಾಷ್ಟ್ರವನ್ನಾಗಿ ಪರಿವರ್ತಿಸುವ ಅಚಲ ಸಂಕಲ್ಪದೊಂದಿಗೆ, ಈಗ ರಾಷ್ಟ್ರೀಯ ಪುನರ್ನಿರ್ಮಾಣದ ಹಾದಿಯಲ್ಲಿ ನಿರ್ಣಾಯಕವಾಗಿ ಹೆಜ್ಜೆ ಹಾಕಿದೆ.*

**ಮುಖಪುಟ ಲೇಖನ**

# 12 ವರ್ಷಗಳ ವಿಕಾಸ ಯಾತ್ರೆ

ರಾಷ್ಟ್ರದ ಅಭಿವೃದ್ಧಿಯ ಪಯಣದಲ್ಲಿ ದೇಶವು ತನ್ನನ್ನು ತಾನು ಮರು ವ್ಯಾಖ್ಯಾನಿಸುವ ಕ್ಷಣ ಬರುತ್ತದೆ. ಅದು ಹೊಸ ಸಂಕಲ್ಪಗಳನ್ನು ಸ್ವೀಕರಿಸುತ್ತದೆ ಮತ್ತು ಅವುಗಳ ಸಾಕ್ಷಾತ್ಕಾರದ ಮಾರ್ಗವನ್ನು ಹುಡುಕುತ್ತದೆ. ಮಣಿಯದ ಇಚ್ಛಾಶಕ್ತಿಯಿಂದ ಪ್ರೇರಿತವಾದ ಇದು ಈ ಆಕಾಂಕ್ಷೆಗಳನ್ನು ಕಾರ್ಯರೂಪಕ್ಕೆ ತರಲು ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತದೆ; ಈ ಹಂತದಲ್ಲಿಯೇ ಪರಿವರ್ತನೆಗಳು ಪ್ರಾರಂಭವಾಗುತ್ತವೆ - ಮುಂದಿನ ಪೀಳಿಗೆಗೆ ಜನರ ಸಾಮೂಹಿಕ ಸ್ಮರಣೆಯಲ್ಲಿ ಉಳಿಯಲು ಉದ್ದೇಶಿಸಲಾದ ಬದಲಾವಣೆಗಳು. 2014 ರಲ್ಲಿ, ದೇಶದ ರಾಜಕೀಯ ಚಿತ್ರಣವು ಆಳವಾದ ಬದಲಾವಣೆಗೆ ಒಳಗಾಯಿತು. ರಾಷ್ಟ್ರವು ಹೊಸ ಉದಯಕ್ಕೆ ಸಾಕ್ಷಿಯಾಯಿತು - ಇಂದಿಗೂ ಅಡೆತಡೆಯಿಲ್ಲದೆ ಮುಂದುವರಿಯುವ ಅಭಿವೃದ್ಧಿಯ ಪಯಣದ ಪ್ರಾರಂಭ. ಜೂನ್ 9 ರಂದು, ಸರ್ಕಾರವು ರಾಷ್ಟ್ರೀಯ ಪುನರ್ನಿರ್ಮಾಣದ ಈ ಪಯಣದಲ್ಲಿ ಹನ್ನೆರಡು ವರ್ಷಗಳನ್ನು ಪೂರೈಸಿದೆ - 'ವಿಕಸಿತ ಭಾರತ' ಆಗುವ ಸ್ಮರಣೀಯ ಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವ ರಾಷ್ಟ್ರವು ಕೈಗೊಂಡ ಪ್ರಯಾಣ. ಭಾರತೀಯ ಸಂಸ್ಕೃತಿಯಲ್ಲಿ ಮತ್ತು ವಿವಿಧ ಧರ್ಮಗಳ ಧರ್ಮಗ್ರಂಥಗಳಲ್ಲಿ, 12 ಸಂಖ್ಯೆಗೆ ವಿಶೇಷ ಮಹತ್ವವಿದೆ. ಶಾಸ್ತ್ರೀಯ ಸಂಪ್ರದಾಯಗಳ ಪ್ರಕಾರ, 12 ವರ್ಷಗಳ 'ತಪಸ್ಸು' (ಕಠಿಣ ಆಧ್ಯಾತ್ಮಿಕ ಶಿಸ್ತು) ನ ಉದ್ದೇಶವು ಸಾಧಕನಿಗೆ ಆಧ್ಯಾತ್ಮಿಕ ಬುದ್ಧಿವಂತಿಕೆ ಮತ್ತು ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಮಾರ್ಗದರ್ಶನ ನೀಡುವುದು. ಅಂತಹ ತೀವ್ರವಾದ ಶಿಸ್ತಿನ 12 ವರ್ಷಗಳ ಅವಧಿಯು ಕಠಿಣ ಮತ್ತು ಪ್ರಯಾಸಕರ ಪ್ರಕ್ರಿಯೆಯಾಗಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ - ಇದನ್ನು ಪ್ರತಿಯೊಬ್ಬರೂ ಕೈಗೊಳ್ಳಲು ಸಮರ್ಥರಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ, ಅಭಿವೃದ್ಧಿಯ ಈ 12 ವರ್ಷಗಳ ಪ್ರಯಾಣವು ಈ ಕ್ಷಣದ ತಕ್ಷಣದ ತುರ್ತುಸ್ಥಿತಿಗಳನ್ನು ಮಾತ್ರ ಪರಿಹರಿಸಿಲ್ಲ; ಬದಲಿಗೆ, ಇದು ಉತ್ತಮವಾಗಿ ಪರಿಗಣಿಸಲ್ಪಟ್ಟ, ದೀರ್ಘಕಾಲೀನ ದೃಷ್ಟಿಯಲ್ಲಿ ನೆಲೆಗೊಂಡಿದೆ. ಪ್ರಸ್ತುತ ಕೇಂದ್ರ ಸರ್ಕಾರವು ಕೈಗೊಂಡ 12 ವರ್ಷಗಳ ಅಭಿವೃದ್ಧಿಯ ಪ್ರಯಾಣವು 'ಅಮೃತ'ವನ್ನು ಪ್ರತಿನಿಧಿಸುತ್ತದೆ - 'ಅಮೃತ ಕಾಲ'ದ ಸಮಯದಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸುವ ಅಚಲ ಬದ್ಧತೆಯೊಂದಿಗೆ, ಈಗ 'ಅಭಿವೃದ್ಧಿ ಹೊಂದಿದ ಭಾರತ'ದ ಭವ್ಯ ಸಂಕಲ್ಪವನ್ನು ಈಡೇರಿಸುವ ಹಾದಿಯಲ್ಲಿ ವೇಗವಾಗಿ ಮುನ್ನಡೆಯುತ್ತಿದೆ.

ವಾಸ್ತವವಾಗಿ, ಕಳೆದ 12 ವರ್ಷಗಳಲ್ಲಿ, ಸೇವೆಯ ನೀತಿಯು ನಮ್ಮ ಸಂಕಲ್ಪವಾಗಿದೆ - ಕರ್ತವ್ಯ ಪಥದಲ್ಲಿ ಮುಂದುವರಿಯುವ ದೃಢವಾದ ಬದ್ಧತೆಯೊಂದಿಗೆ - ಹಳೆಯ ಮಾದರಿಗಳನ್ನು ಛಿದ್ರಗೊಳಿಸಿದೆ ಮತ್ತು ಅಭಿವೃದ್ಧಿಗೆ ಹೊಸ ಪಥವನ್ನು ರೂಪಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ, ಅಂಚಿನಲ್ಲಿರುವ ಜನರಿಗೆ ಪ್ರಯೋಜನಗಳನ್ನು ತಲುಪಿಸಲು ಮತ್ತು ಸ್ವಾತಂತ್ರ್ಯದ ನಿಜವಾದ ಪ್ರಜ್ಞೆಯನ್ನು ತುಂಬಲು ಕಳೆದ 12 ವರ್ಷಗಳಲ್ಲಿ ಕೈಗೊಂಡ ಉಪಕ್ರಮಗಳು ಅಳಿಸಲಾಗದ ಛಾಪು ಮೂಡಿಸಿವೆ. ಆಜಾದಿ ಕಾ ಅಮೃತ್ ಕಾಲ್ ನಿಂದ ಪ್ರಾರಂಭವಾಗುವ ಇದು ತನ್ನ ಶತಮಾನೋತ್ಸವ ವರ್ಷದತ್ತ ಸಾಗುತ್ತಿರುವಾಗ "ನವ ಭಾರತ"ದ ಹೊಸ ಹಣೆಬರಹವನ್ನು ಬರೆಯಲು ಸಜ್ಜಾಗಿದೆ. ಈ ನವ ಭಾರತವು ತನ್ನ ಯುವಕರ ಕನಸುಗಳನ್ನು ಪೋಷಿಸುತ್ತದೆ, ತನ್ನ ನಾರಿ ಶಕ್ತಿಯ ಆಕಾಂಕ್ಷೆಗಳನ್ನು ಈಡೇರಿಸುತ್ತದೆ, ಬಡವರಿಗೆ ಮುಂದುವರಿಯಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ ಮತ್ತು ಮಧ್ಯಮ ವರ್ಗದ ಮಹತ್ವಾಕಾಂಕ್ಷೆಗಳನ್ನು ಹೊಸ ಎತ್ತರಕ್ಕೆ ಏರಿಸುತ್ತದೆ. ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. ಕಳೆದ 12 ವರ್ಷಗಳಲ್ಲಿ, ಹಲವಾರು ಯೋಜನೆಗಳ ಪ್ರಯೋಜನಗಳು ಲಕ್ಷಾಂತರ ಬಡ ನಾಗರಿಕರ ಮನೆ ಬಾಗಿಲಿಗೆ ತಲುಪಿವೆ. ಇಂದು, ದೇಶದ ಪ್ರತಿಯೊಬ್ಬ ಬಡ ವ್ಯಕ್ತಿಯೂ ಉಜ್ವಲದಿಂದ ಆಯುಷ್ಮಾನ್ ಭಾರತದವರೆಗಿನ ಯೋಜನೆಗಳ ಪರಿವರ್ತಕ ಶಕ್ತಿಯನ್ನು ಗುರುತಿಸಿದ್ದಾರೆ. ಸರ್ಕಾರದ ಯೋಜನೆಗಳ ಅನುಷ್ಠಾನದ ವೇಗ ಹೆಚ್ಚಾಗಿದೆ; ಅವರು ಈಗ ಸತತವಾಗಿ ತಮ್ಮ ಗುರಿಗಳನ್ನು ಸಾಧಿಸುತ್ತಿದ್ದಾರೆ ಹಿಂದಿನದಕ್ಕೆ ಹೋಲಿಸಿದರೆ, ರಾಷ್ಟ್ರವು ಗಮನಾರ್ಹವಾಗಿ ವೇಗವಾಗಿ ಮುನ್ನಡೆಯುತ್ತಿದೆ. ಈ ಸಂಕಲ್ಪದೊಂದಿಗೆಯೇ



ಭಾರತವು ಅಮೃತ ಕಾಲದ ಪ್ರಯಾಣವನ್ನು ಪ್ರಾರಂಭಿಸಿದೆ - 100 ಪ್ರತಿಶತ ಹಳ್ಳಿಗಳು ರಸ್ತೆ ಸಂಪರ್ಕವನ್ನು ಹೊಂದಿವೆ, 100 ಪ್ರತಿಶತ ಕುಟುಂಬಗಳು ಬ್ಯಾಂಕ್ ಖಾತೆಗಳನ್ನು ಹೊಂದಿವೆ, 100 ಪ್ರತಿಶತ ಫಲಾನುಭವಿಗಳು ಆಯುಷ್ಮಾನ್ ಭಾರತ್ ಕಾರ್ಡ್ ಗಳನ್ನು ಹೊಂದಿದ್ದಾರೆ ಮತ್ತು 100 ಪ್ರತಿಶತದಷ್ಟು ಅರ್ಹ ವ್ಯಕ್ತಿಗಳು ಉಜ್ವಲ ಯೋಜನೆಯಡಿ ಅನಿಲ ಸಂಪರ್ಕವನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಈ ಯುಗವನ್ನು ರೂಪಿಸಲಾಗಿದೆ. ಅದು ವಿಮಾ ಯೋಜನೆಗಳಾಗಿರಲಿ, ಪಿಂಚಣಿ ಯೋಜನೆಗಳಾಗಿರಲಿ ಅಥವಾ ವಸತಿ ಉಪಕ್ರಮಗಳಾಗಿರಲಿ - ಪ್ರತಿಯೊಬ್ಬ ಅರ್ಹ ವ್ಯಕ್ತಿಯನ್ನು ಈ ಕಾರ್ಯಕ್ರಮಗಳ ವ್ಯಾಪ್ತಿಗೆ ತರಲು ಸರ್ಕಾರ ಬದ್ಧವಾಗಿದೆ. ಬೀದಿ ಬದಿ ವ್ಯಾಪಾರಿಗಳು ಮತ್ತು ವ್ಯಾಪಾರಿಗಳನ್ನು ಸ್ವನಿಧಿ ಯೋಜನೆಯ ಮೂಲಕ ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಂಯೋಜಿಸಲಾಗುತ್ತಿದೆ. ಇದಲ್ಲದೆ, ರಾಷ್ಟ್ರವು ಪ್ರಸ್ತುತ "ಹರ್ ಘರ್ ಜಲ್" ಮಿಷನ್ ಅನ್ನು ಕಾರ್ಯಗತಗೊಳಿಸಲು ಬಹಳ ತುರ್ತಾಗಿ ಕೆಲಸ ಮಾಡುತ್ತಿದೆ. ಸಮಗ್ರ, ಎಲ್ಲರನ್ನೂ ಒಳಗೊಳ್ಳುವ ಮತ್ತು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯ ತತ್ವದಿಂದ ಮಾರ್ಗದರ್ಶಿಸಲ್ಪಟ್ಟ ಕೇಂದ್ರ ಸರ್ಕಾರವು ರಾಷ್ಟ್ರದ ಅಭಿವೃದ್ಧಿಯ ಪಯಣದಲ್ಲಿ ಯಾವುದೇ ವ್ಯಕ್ತಿ ಅಥವಾ ಸಾಮಾಜಿಕ ಗುಂಪು ಹಿಂದೆ ಉಳಿಯದಂತೆ ನೋಡಿಕೊಳ್ಳುತ್ತಿದೆ ಮತ್ತು ದೇಶದ ಯಾವುದೇ ಭೌಗೋಳಿಕ ಪ್ರದೇಶ ಅಥವಾ ಮೂಲೆ ಅಸ್ಪೃಶ್ಯವಾಗಿಲ್ಲ ಅಥವಾ ನಿರ್ಲಕ್ಷಿಸಲ್ಪಟ್ಟಿಲ್ಲ ಎಂದು ಖಚಿತಪಡಿಸುತ್ತಿದೆ. ಅದು ಮಹಿಳಾ ಸಬಲೀಕರಣವಾಗಿರಲಿ ಅಥವಾ ಯುವ ಶಕ್ತಿಯಾಗಿರಲಿ - ರೈತರು ಅಥವಾ ಬಡವರು ಮತ್ತು ಅಂಚಿನಲ್ಲಿರುವವರು - ಒಂದೇ ಒಂದು ದೃಷ್ಟಿಕೋನವಿದೆ: ಅಭಿವೃದ್ಧಿಯು ಎಲ್ಲರನ್ನೂ ಒಳಗೊಳ್ಳಬೇಕು. ಕಳೆದ 12 ವರ್ಷಗಳಲ್ಲಿ, ಈ ಹಿಂದೆ ಹಿಂದುಳಿದಿದ್ದ ದೇಶದ ಪ್ರದೇಶಗಳನ್ನು ಸಹ ಮೇಲೆತ್ತಲು ಸಂಘಟಿತ ಪ್ರಯತ್ನಗಳನ್ನು ಮಾಡಲಾಗಿದೆ. ಪೂರ್ವ ಭಾರತ, ಈಶಾನ್ಯ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಸೇರಿದಂತೆ ಇಡೀ ಹಿಮಾಲಯ ಪ್ರದೇಶ ಮತ್ತು ಕರಾವಳಿ ಪ್ರದೇಶಗಳು ಮತ್ತು ಬುಡಕಟ್ಟು ಪ್ರದೇಶಗಳು ಭಾರತದ ಭವಿಷ್ಯದ ಅಭಿವೃದ್ಧಿ ಪಯಣಕ್ಕೆ ಪ್ರಮುಖ ಆಧಾರಸ್ತಂಭಗಳಾಗಿ ಹೊರಹೊಮ್ಮುತ್ತಿವೆ. ಈ ಎಲ್ಲಾ ಪ್ರದೇಶಗಳಿಗೆ, ಉತ್ತಮ ಆಡಳಿತದ ಮಾರ್ಗದರ್ಶಿ ಮಂತ್ರವು ಕೇವಲ ಬಹುಮತದ ಆಡಳಿತಕ್ಕಿಂತ ಹೆಚ್ಚಾಗಿ ಒಮ್ಮತದ ಮನಸ್ಥಿತಿಯನ್ನು ಬೆಳೆಸುತ್ತದೆ - ಈ ತತ್ವಶಾಸ್ತ್ರವು "ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಔರ್ ಸಬ್ಕಾ ಪ್ರಯಾಸ್" ಎಂಬ ಧ್ಯೇಯವಾಕ್ಯದಲ್ಲಿ ಅಡಗಿದೆ. ಬಡತನ, ಭ್ರಷ್ಟಾಚಾರ, ಭಯೋತ್ಪಾದನೆ, ಜಾತೀಯತೆ ಮತ್ತು ಕೋಮುವಾದದಿಂದ ಮುಕ್ತವಾದ ಭಾರತದ ಸೃಷ್ಟಿಯತ್ತ ರಾಷ್ಟ್ರವು ಸ್ಥಿರವಾಗಿ ಮುನ್ನಡೆಯುತ್ತಿದೆ.

### ವಿಕಸಿತ ಭಾರತದ ಬಲವರ್ಧಿತ ಪಥ

ಕೆಂಪು ಕೋಟೆಯಿಂದ ಹಿಡಿದು ಇತರ ವಿವಿಧ ವೇದಿಕೆಗಳವರೆಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯದ ಆರಂಭಿಕ ವರ್ಷಗಳಲ್ಲಿ ಕೈಗೊಳ್ಳಬೇಕಾದ ಉಪಕ್ರಮಗಳ ಪಟ್ಟಿಯನ್ನು ಪಟ್ಟಿ ಮಾಡಿದ್ದಾರೆ. ಆದಾಗ್ಯೂ, ಆ ಸಮಯದಲ್ಲಿ, ಈ ಸಮಸ್ಯೆಗಳಿಗೆ ಸುಸ್ಥಿರ ಪರಿಹಾರಗಳ ಮೇಲೆ ಕೇಂದ್ರೀಕರಿಸಿದ ದೀರ್ಘಕಾಲೀನ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಾಗಿಲ್ಲ. ಪರಿಣಾಮವಾಗಿ, ರಾಷ್ಟ್ರವು ಇಂದು ತನ್ನ ಪ್ರಸ್ತುತ ನಾಯಕತ್ವದಲ್ಲಿ, ಏಳು ದಶಕಗಳಿಂದ ಬಾಕಿ ಉಳಿದಿದ್ದ ಅಥವಾ ಸ್ಥಗಿತಗೊಂಡ ಯೋಜನೆಗಳ ಸಾಕಾರಕ್ಕೆ ಸಾಕ್ಷಿಯಾಗಿದೆ. ಈಗ, ದೇಶವು ಇನ್ನು ಮುಂದೆ ಕೇವಲ ಹಣೆಬರಹದ ಮೇಲೆ ಅವಲಂಬಿತವಾಗಿಲ್ಲ; ಬದಲಿಗೆ, ಅಭಿವೃದ್ಧಿಯ ಹೊಸ ಸಂಪ್ರದಾಯಗಳನ್ನು ಸ್ಥಾಪಿಸಲಾಗುತ್ತಿದೆ - ಸ್ಪಷ್ಟ ದೂರದೃಷ್ಟಿ, ದೀರ್ಘಕಾಲೀನ ನೀತಿಗಳು ಮತ್ತು ಸುಸ್ಥಿರ ಪರಿಹಾರಗಳ ಮೇಲೆ ಕೇಂದ್ರೀಕೃತ ದೃಷ್ಟಿಕೋನ - ಆ ಮೂಲಕ ಉದಯೋನ್ಮುಖ 'ನವ ಭಾರತ'ದ ಸೃಷ್ಟಿಗೆ ದಾರಿ ಮಾಡಿಕೊಡುತ್ತದೆ. ಕಳೆದ 12 ವರ್ಷಗಳಲ್ಲಿ, ಭಾರತವು ತನ್ನ ಆರ್ಥಿಕತೆಯ ಗಾತ್ರವನ್ನು ದ್ವಿಗುಣಗೊಳಿಸಿರುವುದು ಮಾತ್ರವಲ್ಲದೆ ತ್ವರಿತ ಬೆಳವಣಿಗೆಯನ್ನು ಸಾಧಿಸಿದೆ, ಇದು ಹೆಚ್ಚಾಗಿ ಆಧುನಿಕ ಮೂಲಸೌಕರ್ಯ ಅಭಿವೃದ್ಧಿಯಿಂದ ಪ್ರೇರಿತವಾಗಿದೆ. ಈ ಅವಧಿಯಲ್ಲಿ ರೈಲ್ವೆ, ರಸ್ತೆಗಳು, ವಿಮಾನ ನಿಲ್ದಾಣಗಳು, ಬಂದರುಗಳು, ವಿದ್ಯುತ್, ನೀರು ಸರಬರಾಜು ಮತ್ತು ಅನಿಲ ಕೊಳವೆ ಮಾರ್ಗಗಳಂತಹ ನಿರ್ಣಾಯಕ ಮೂಲಸೌಕರ್ಯ ಕ್ಷೇತ್ರಗಳಿಗೆ ಬಜೆಟ್ ಹಂಚಿಕೆಯನ್ನು ಸುಮಾರು ಆರು ಪಟ್ಟು ಹೆಚ್ಚಿಸಲಾಗಿದೆ. ಇಂದು ದೇಶಾದ್ಯಂತ ಬೃಹತ್ ಯೋಜನೆಗಳ ಕಾಮಗಾರಿ ವೇಗವಾಗಿ ಸಾಗುತ್ತಿದೆ. ಉತ್ತರದ ಕಡೆಗೆ ನೋಡಿದರೆ, ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಗಳಲ್ಲಿ ಒಂದಾದ ಚೆನಾಬ್ ಸೇತುವೆಯನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಮಿಸಲಾಗಿದೆ. ಪಶ್ಚಿಮದಲ್ಲಿ, ದೇಶದ ಅತಿ ಉದ್ದದ ಸಮುದ್ರ ಸೇತುವೆಯಾದ ಅಟಲ್ ಸೇತುವನ್ನು ಮುಂಬೈನಲ್ಲಿ, ಪೂರ್ವದಲ್ಲಿ ಅಸ್ಸಾಂನ ಬೋಗಿಬೀಲ್ ಸೇತುವೆ ನಿರ್ಮಿಸಲಾಗಿದೆ. ದಕ್ಷಿಣದಲ್ಲಿ, ವಿಶ್ವದ ಕೆಲವೇ ವರ್ಟಿಕಲ್-ಲಿಫ್ಟ್ ಸೇತುವೆಗಳಲ್ಲಿ ಒಂದಾದ ಪಂಬನ್ ಸೇತುವೆಯ ನಿರ್ಮಾಣ ಪೂರ್ಣಗೊಂಡಿದೆ.

ಅದೇ ರೀತಿ ಪೂರ್ವ ಮತ್ತು ಪಶ್ಚಿಮ ಸರಕು ಕಾರಿಡಾರ್ ಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ದೇಶದ ಮೊದಲ ಬುಲೆಟ್ ರೈಲು ಯೋಜನೆಯ ಕಾಮಗಾರಿ ವೇಗವಾಗಿ ನಡೆಯುತ್ತಿದೆ. ವಂದೇ ಭಾರತ್, ಅಮೃತ್ ಭಾರತ್ ಮತ್ತು ನಮೋ ಭಾರತದಂತಹ ಆಧುನಿಕ ರೈಲುಗಳು ರಾಷ್ಟ್ರದ ರೈಲ್ವೆ ಜಾಲವನ್ನು ಮತ್ತಷ್ಟು ಆಧುನೀಕರಿಸುತ್ತಿವೆ. ಈ ಬೆಳವಣಿಗೆಯ ಆಧಾರದಲ್ಲಿ ಒಂದು ಪ್ರಮುಖ ತತ್ವವಿದೆ: ಭಾರತದ ಪ್ರತಿಯೊಂದು ಪ್ರದೇಶವು ಪರಸ್ಪರ ಸಂಪರ್ಕಿತವಾದಾಗ, ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಹಾದಿಯು ಗಮನಾರ್ಹವಾಗಿ ಬಲಗೊಳ್ಳುತ್ತದೆ. ಹೊಸ ಸಂಸತ್ ಭವನ ಮತ್ತು ಸೆಂಟ್ರಲ್ ವಿಸ್ತಾ ಯೋಜನೆಯು 'ಆತ್ಮನಿರ್ಭರ ಭಾರತ'ದ ಮೂಲಭೂತ ನೀತಿಗಳ ನಿಜವಾದ ಪ್ರತಿಬಿಂಬವಾಗಿ ಹೊರಹೊಮ್ಮಿದೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಶಾಸನವು ಈ ಹೊಸ ಕಟ್ಟಡದೊಳಗೆ ಅಂಗೀಕರಿಸಲ್ಪಟ್ಟ ಮೊದಲ ಮಸೂದೆಯಾಗಿದೆ. ಅಂತೆಯೇ, 34 ವರ್ಷಗಳ ನಂತರ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಚಯಿಸಲಾಯಿತು - ಇದು ಜಾಗತಿಕ ಜ್ಞಾನದ ಸೂಪರ್ ಪವರ್ ಆಗುವತ್ತ ಭಾರತದ ದಾಪುಗಾಲಿಗೆ ಸಾಕ್ಷಿಯಾಗಿದೆ. ತ್ರಿವಳಿ ತಲಾಖ್, ರಾಮ ಮಂದಿರ, ಬೋಡೋ ಒಪ್ಪಂದ ಮತ್ತು 370ನೇ ವಿಧಿ ಸೇರಿದಂತೆ ಹಲವಾರು ನಿರ್ಧಾರಗಳು ಶಾಂತಿ ಮತ್ತು ಸೌಹಾರ್ದತೆಯನ್ನು ಸ್ಥಾಪಿಸಲು ದಾರಿ ಮಾಡಿಕೊಟ್ಟಿವೆ. ಇವು ದಶಕಗಳಿಂದ ಬಾಕಿ ಉಳಿದಿದ್ದವು, ಬಗೆಹರಿಸಲಾಗದ ಸಮಸ್ಯೆಗಳಾಗಿದ್ದವು; ಆದರೂ, ಪ್ರಧಾನ ಮಂತ್ರಿ ಮೋದಿಯವರ ನಾಯಕತ್ವದಲ್ಲಿ, ಪರಿಹಾರಗಳನ್ನು ಕಂಡುಹಿಡಿಯಲಾಗಿದ್ದು, ಈಗ 'ನವ ಭಾರತ' ಹೊರಹೊಮ್ಮುತ್ತಿದೆ.

## ತಂತ್ರಜ್ಞಾನದಿಂದ ಪ್ರೇರಿತವಾದ ಪರಿವರ್ತನೆಯ ಹೊಸ ಯುಗ

ಭವಿಷ್ಯದ ಬಗ್ಗೆ ಕಣ್ಣಿಟ್ಟು, ತಂತ್ರಜ್ಞಾನ ನೀತಿಗಳನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿರುವ ಆಯ್ದ ಕೆಲವು ರಾಷ್ಟ್ರಗಳಲ್ಲಿ ಭಾರತ ಸ್ಥಾನ ಪಡೆದಿದೆ. ತಂತ್ರಜ್ಞಾನವು ಹಲವಾರು ಕ್ಷೇತ್ರಗಳಲ್ಲಿ ಆಳವಾದ ಪ್ರಭಾವವನ್ನು ಬೀರಿದೆ. ಇದು ಪಾರದರ್ಶಕತೆಯ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ. ಇಂದು, ಗ್ರಾಮೀಣ ಭಾರತವು ತನ್ನ ನಗರ ಸಹವರ್ತಿಗಳಿಗಿಂತ ಹೆಚ್ಚು ಇಂಟರ್ನೆಟ್ ಡೇಟಾವನ್ನು ಬಳಸುತ್ತದೆ. ಕೋವಿಡ್-19 ಕಾಲದಲ್ಲಿ, ಯುಪಿಐನಂತಹ ವೇದಿಕೆಗಳು ಹೊಸ ವೇಗವನ್ನು ಪಡೆದುಕೊಂಡವು, ಜನರು ಡಿಜಿಟಲ್ ವಹಿವಾಟುಗಳನ್ನು ಜೀವನ ವಿಧಾನವಾಗಿ ಸ್ವೀಕರಿಸಲು ಕಾರಣವಾಯಿತು. ಇ-ಕಾಮರ್ಸ್ ಮೂಲಕ ವಿಶಾಲವಾದ ಮಾರುಕಟ್ಟೆಗಳ ಪ್ರವೇಶವು ಗಮನಾರ್ಹವಾಗಿ ವಿಸ್ತರಿಸಿದೆ. ತಾಂತ್ರಿಕತೆಯಿಂದಾಗಿಯೇ ಈಗ ಶೇಕಡಾ 100 ರಷ್ಟು ಪ್ರಯೋಜನಗಳು ಉದ್ದೇಶಿತ ಫಲಾನುಭವಿಗಳನ್ನು ತಲುಪುತ್ತಿವೆ. ಹಿಂದಿನದಕ್ಕಿಂತ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ, ನಿಗದಿಪಡಿಸಿದ ಪ್ರತಿ ರೂಪಾಯಿಗೆ ಕೇವಲ 15 ಪೈಸೆ ಮಾತ್ರ ಹಳ್ಳಿಗಳನ್ನು ತಲುಪುತ್ತದೆ ಎಂದು ಆಗಾಗ್ಗೆ ಹೇಳಲಾಗುತ್ತಿತ್ತು. ಯೋಜನೆಗಳ ಅನುಷ್ಠಾನ ಅಥವಾ ಮೇಲ್ವಿಚಾರಣೆಗೆ ಸಂಬಂಧಿಸಿದ್ದಾಗಲಿ, ತಂತ್ರಜ್ಞಾನವು ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ಹಿಂದಿನ ಪ್ರೇರಕ ಶಕ್ತಿಯನ್ನು ಒದಗಿಸುತ್ತಿದೆ. ಐಟಿ-ಮುಖಾಮುಖಿ ರಹಿತ ಮೌಲ್ಯಮಾಪನದಂತಹ ಸೌಲಭ್ಯಗಳು ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿದ್ದರೆ, 'ಇ-ಆಫೀಸ್' ನಂತಹ ಉಪಕ್ರಮಗಳು ಆಡಳಿತದ ವೇಗವನ್ನು ಹೆಚ್ಚಿಸಿವೆ. ಹಳ್ಳಿಗಳಲ್ಲಿ ಅಂಚೆ ಬ್ಯಾಂಕ್ ಗಳ ಸ್ಥಾಪನೆ ಮತ್ತು ಶಾಲೆಗಳಲ್ಲಿ ಅಟಲ್ ಇನ್ನೋವೇಶನ್ ಮಿಷನ್ ಅನ್ನು ಪರಿಚಯಿಸುವುದು ನಾವೀನ್ಯತೆಯ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಿದೆ. ಭಾರತದಲ್ಲಿ ಚಾಲ್ತಿಯಲ್ಲಿರುವ ಮನಸ್ಥಿತಿಯು ಉದ್ಯೋಗಾಕಾಂಕ್ಷಿಗಳ ಮನಸ್ಥಿತಿಯಾಗಿದ್ದ ಕಾಲವೊಂದಿತ್ತು; ಆದಾಗ್ಯೂ, ಪ್ರಧಾನ ಮಂತ್ರಿ ಮೋದಿ ಅವರು ಉದ್ಯೋಗ ಸೃಷ್ಟಿಯ ಸಂಸ್ಕೃತಿಯನ್ನು ಬೆಳೆಸುವ ಮೂಲಕ ಈ ದೃಷ್ಟಿಕೋನವನ್ನು ಬದಲಾಯಿಸಿದ್ದಾರೆ. ಸ್ಟಾರ್ಟ್‌ಅಪ್ ಗಳಿಗೆ ಒದಗಿಸಲಾದ ಬೆಂಬಲ ಮತ್ತು ಮುದ್ರಾ ಯೋಜನೆಯಿಂದ ಸಶಕ್ತರಾದ ಇಂದಿನ ಯುವಕರು ಹೊಸ ಎತ್ತರಕ್ಕೆ ಏರುತ್ತಿದ್ದಾರೆ. ಈ ಹಿಂದೆ, 'ಸ್ಟಾರ್ಟ್ ಅಪ್' ಎಂಬ ಪದವನ್ನು ಭಾರತದಲ್ಲಿ ಆಯ್ದ ಕೆಲವರಿಗೆ ಮಾತ್ರ ಅರ್ಥವಾಗುತ್ತಿತ್ತು; ಆದರೆ, ಇಂದು ಹಳ್ಳಿಗಳಲ್ಲಿ ಕೂಡಾ ಯುವಜನತೆ ಇದರ ಮಹತ್ವವನ್ನು ಅರಿತುಕೊಂಡಿದ್ದಾರೆ ಮತ್ತು 'ಯೂನಿಕಾರ್ನ್' ಗಳನ್ನು ನಿರ್ಮಿಸಲು ಸಕ್ರಿಯವಾಗಿ ಪ್ರಯತ್ನಿಸುತ್ತಿದ್ದಾರೆ. ಭಾರತವು ಈಗ ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆಯಾಗಿ ಹೊರಹೊಮ್ಮಿದೆ.

## ಜಾಗತಿಕ ನಾಯಕತ್ವಕ್ಕೆ ಒಂದು ಶುಭ ಅವಕಾಶ

ಕಳೆದ 12 ವರ್ಷಗಳಲ್ಲಿ, ಭಾರತದ ಘನತೆ ದೇಶೀಯ ಮತ್ತು ಜಾಗತಿಕವಾಗಿ ಏರಿದೆ ಮತ್ತು ರಾಷ್ಟ್ರವು ವಿಶ್ವಾಸಾರ್ಹ ನಾಯಕನಾಗಿ ಹೊರಹೊಮ್ಮಿದೆ. ರಷ್ಯಾ-ಉಕ್ರೇನ್ ಯುದ್ಧದ ಬಿಕ್ಕಟ್ಟಿನ ಸಮಯದಲ್ಲಿ ('ಆಪರೇಷನ್ ಗಂಗಾ' ಮೂಲಕ ಉದಾಹರಣೆಯಾಗಿದೆ) ಅಥವಾ ಗ್ಲಾಸ್ಗೋದಲ್ಲಿ ನಡೆದ ಸಿಒಪಿ 26 ಶೃಂಗಸಭೆ ಮತ್ತು ಶರ್ಮ್ ಎಲ್-ಶೇಖ್ ನಲ್ಲಿ ನಡೆದ ಸಿಒಪಿ 27 ನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಧ್ವನಿ ಪ್ರತಿಪಾದಕರಾಗಿ ಭಾರತದ ಹೊರಹೊಮ್ಮುವಿಕೆಯು ಈ ವಿಷಯಕ್ಕೆ ಸಾಕ್ಷಿಯಾಗಿದೆ; ವಾಸ್ತವವಾಗಿ, ವಿಶ್ವಸಂಸ್ಥೆ, ಬಿಮ್ಸ್ ಸ್ಟೆಕ್ ಮತ್ತು ಜಿ-20 ನಂತಹ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಜಗತ್ತು ಭಾರತವನ್ನು ನಂಬುತ್ತದೆ. ಜಿ 20 ಅಧ್ಯಕ್ಷತೆಯನ್ನು ಅಲಂಕರಿಸುವಾಗ, ಭಾರತವು ಜಗತ್ತಿಗೆ ಹೊಸ ಹಾದಿಯನ್ನು ರೂಪಿಸಿತು, ಜಾಗತಿಕ ಸಮುದಾಯಕ್ಕೆ ಭಾರತದ ಶ್ರೀಮಂತ ಸಂಸ್ಕೃತಿಯ ಬಗ್ಗೆ ಮಾತ್ರವಲ್ಲದೆ ಅದರ ಅಪಾರ ಸಾಮರ್ಥ್ಯಗಳ ಬಗ್ಗೆ ಆಳವಾದ ಮೆಚ್ಚುಗೆಯನ್ನು ನೀಡಿತು. ಪರಿಸರ ಉಸ್ತುವಾರಿಯ ಕ್ಷೇತ್ರದಲ್ಲಿ, 'ಮಿಷನ್ ಲೈಫ್' ಮತ್ತು 'ಅಂತಾರಾಷ್ಟ್ರೀಯ ಸೌರ ಸಹಯೋಗ' ದಂತಹ ಉಪಕ್ರಮಗಳು ಪ್ರಕೃತಿ ಮತ್ತು ವನ್ಯಜೀವಿಗಳೊಂದಿಗೆ ಸಾಮರಸ್ಯವನ್ನು ಬೆಳೆಸಲು ಜಗತ್ತಿಗೆ ಒಂದು ಮಾರ್ಗವನ್ನು ಬೆಳಗಿಸಿವೆ. ವಸುಧೈವ ಕುಟುಂಬಕಂ ಸ್ಫೂರ್ತಿಯಿಂದ ಮಾರ್ಗದರ್ಶಿಸಲ್ಪಟ್ಟ ಭಾರತವು ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಔಷಧಗಳ ಜಾಗತಿಕ ಕೇಂದ್ರವಾಗಿ ಮಾರ್ಪಟ್ಟಂತೆಯೇ, ಬಿಕ್ಕಟ್ಟಿನ ಸಮಯದಲ್ಲಿ ನೆರೆಹೊರೆಯವರು ಮತ್ತು ಪ್ರಪಂಚದಾದ್ಯಂತದ ದೇಶಗಳಿಗೆ ನೆರವು ನೀಡುವ ಪ್ರವರ್ತಕ ರಾಷ್ಟ್ರಗಳಲ್ಲಿ ಒಂದಾಗಿದೆ. ಕಳೆದ 12 ವರ್ಷಗಳಲ್ಲಿ, ಭಾರತವು ಜಾಗತಿಕ ವೇದಿಕೆಯಲ್ಲಿ ವಿಶ್ವಾಸಾರ್ಹ ಪಾಲುದಾರನಾಗಿ ತನ್ನದೇ ಆದ ಗುರುತನ್ನು ಯಶಸ್ವಿಯಾಗಿ ರೂಪಿಸಿಕೊಂಡಿದೆ. ಅದೇ ಸಮಯದಲ್ಲಿ, ದೇಶದೊಳಗೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳನ್ನು ವ್ಯಾಪಿಸಿರುವ ವಾತಾವರಣವನ್ನು ಬೆಳೆಸಲಾಗಿದೆ, ಇದರಲ್ಲಿ ಸಾಮಾನ್ಯ ನಾಗರಿಕರು ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ, ಆ ಮೂಲಕ ರಾಷ್ಟ್ರದ ಅಭಿವೃದ್ಧಿ ಪಯಣದಲ್ಲಿ ನಿಜವಾದ ಪಾಲುದಾರರಾಗುತ್ತಾರೆ. ನಿಸ್ಸಂದೇಹವಾಗಿ, ದೂರದೃಷ್ಟಿಯ ನಾಯಕರಾಗಿ ಮತ್ತು ದಿಟ್ಟ, ಪರಿವರ್ತಕ ಸುಧಾರಣೆಗಳ ಪ್ರವರ್ತಕರಾಗಿ ಹೊರಹೊಮ್ಮಿದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 'ಹೊಸ ಆತ್ಮವಿಶ್ವಾಸದೊಂದಿಗೆ ಹೊಸ ಆರಂಭ'ದ ಸಂಕೇತವಾಗಿ ಬಂದಿದ್ದಾರೆ. ಸುರಕ್ಷಿತ, ಸಮೃದ್ಧ ಮತ್ತು ಪ್ರಗತಿಪರ ಭಾರತವನ್ನು ನಿರ್ಮಿಸುವ ಉಪಕ್ರಮವು 'ನವ ಭಾರತ, ವಿಕಸಿತ ಭಾರತ'ದ ದೃಷ್ಟಿಕೋನವನ್ನು ಒಳಗೊಂಡಿದೆ. ಇಂದು, ಪ್ರತಿಯೊಬ್ಬ ಭಾರತೀಯ ನಾಗರಿಕನೂ ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡ ನಿರ್ಣಯಗಳ ಸಾಕ್ಷಾತ್ಕಾರಕ್ಕೆ ಸಾಕ್ಷಿಯಾಗುತ್ತಿದ್ದಾನೆ.

***ಈ 12 ವರ್ಷಗಳ ಪ್ರಯಾಣದ ಸಾಧನೆಗಳನ್ನು ನಾವೀಗ ಅನ್ವೇಷಿಸೋಣ - ಮುಂದಿನ ಐದು ವಿಭಾಗಗಳಲ್ಲಿ ಸಂಕಲ್ಪ್ ಸೇ ಸಿದ್ಧಿ...***




ಮುಖಪುಟ ಲೇಖನ

12 ವರ್ಷಗಳ ವಿಕಾಸ ಯಾತ್ರೆ

# ಲೋಕ ಸೇವೆಗೆ ಬದ್ಧ

***ನನ್ನನ್ನು ಬಲ್ಲವರು ನನ್ನನ್ನು ಅರ್ಥಮಾಡಿಕೊಳ್ಳುತ್ತಾರೆ. ನಾನು ಇಲ್ಲಿ ನನಗೋಸ್ಕರ ಅಲ್ಲ, ನನ್ನ ಸ್ವಂತ ಬಂಧುಗಳಿಗಾಗಿ ಅಲ್ಲ. ನಾನು ಬಡವರಿಗಾಗಿ ಇಲ್ಲಿದ್ದೇನೆ. ನಾನು ಬಡತನದಲ್ಲಿ ಹುಟ್ಟಿದ್ದೇನೆ ಮತ್ತು ನಾನು ಬಡತನದಲ್ಲೇ ಬದುಕಿದ್ದೇನೆ. ಬಡವರ ನೋವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಈ ಮಾತುಗಳು ಕೇವಲ ಅಭಿವ್ಯಕ್ತಿಯಲ್ಲ;*** *ದೇಶದ ದಲಿತರು, ಬಡವರು, ಬುಡಕಟ್ಟು ಜನಾಂಗದವರು ಮತ್ತು ಹಿಂದುಳಿದ ಸಮುದಾಯಗಳ ಬಗ್ಗೆ ಅಪಾರ ಸಂವೇದನಾಶೀಲತೆಯನ್ನು ಹೊಂದಿರುವ ಆಳವಾದ ಸಹಾನುಭೂತಿ ಹೊಂದಿರುವ ವ್ಯಕ್ತಿಯ ಹೃದಯದಿಂದ ಹೊರಹೊಮ್ಮುವ ಧ್ವನಿಯಾಗಿದೆ. ಅವರಿಗೆ ಅಂತ್ಯೋದಯಕ್ಕೆ ಆದ್ಯತೆ ನೀಡುವುದು ಮತ್ತು ಬಡವರ ಕಲ್ಯಾಣಕ್ಕೆ ಪ್ರತೀ ನಿರ್ಧಾರಗಳಲ್ಲಿಯೂ ಆದ್ಯತೆ ನೀಡುವುದು ಅವರ ವ್ಯಕ್ತಿತ್ವದ ಲಕ್ಷಣವಾಗಿದೆ. ಪ್ರತಿಯೊಂದು ರಾಷ್ಟ್ರೀಯ ಚಿಂತನೆ, ಮತ್ತು ವಾಸ್ತವವಾಗಿ, ಭಾರತದ ಸಂಸ್ಕೃತಿ ಮತ್ತು ನೀತಿಗಳು 'ವಿಕಸಿತ ಭಾರತ'ದ ಸುವರ್ಣ ಸ್ವಪ್ನಕ್ಕೆ ಸಮರ್ಪಿತವಾಗಿವೆ, ಇದು ಸೇವೆ, ಉತ್ತಮ ಆಡಳಿತ ಮತ್ತು ಬಡವರ ಕಲ್ಯಾಣದಲ್ಲಿ ಬೇರು ಬಿಟ್ಟಿದೆ. ಈ ದೃಷ್ಟಿಕೋನವೇ ದೇಶದ ರೈತರು, ಗ್ರಾಮೀಣ ಬಡವರು ಮತ್ತು ಮಧ್ಯಮ ವರ್ಗದವರಿಗೆ ರಕ್ಷಣಾತ್ಮಕ ಕವಚವನ್ನು ರೂಪಿಸಿದೆ. ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂ-ಜೆಎವೈ) ಮೂಲಕ, ಆರೋಗ್ಯ ಭದ್ರತೆಯನ್ನು ಜನಸಾಮಾನ್ಯರಿಗೆ ವಿಸ್ತರಿಸಲಾಗಿದೆ. ಕಳೆದ 12 ವರ್ಷಗಳಲ್ಲಿ, ಬಡವರು, ರೈತರು ಮತ್ತು ಮಧ್ಯಮ ವರ್ಗದವರ ಆಕಾಂಕ್ಷೆಗಳಿಗೆ ಹೊಸ ರೆಕ್ಕೆಗಳನ್ನು ನೀಡಲಾಗಿದೆ; ಅಂತರ್ಗತ ಅಭಿವೃದ್ಧಿಯ ಮೂಲಕ ಸಮಗ್ರ ಭದ್ರತೆಯ ಚಕ್ರವನ್ನು ರಚಿಸುವ ಮೂಲಕ ಮತ್ತು ಪ್ರತಿಯೊಬ್ಬ ನಾಗರಿಕನನ್ನು ಸುರಕ್ಷತೆಯ ಬಾಹುಗಳಲ್ಲಿ ಬಂಧಿಸುವ ಮೂಲಕ - ಆತ್ಮನಿರ್ಭರ ಭಾರತವನ್ನು ಸಾಕಾರಗೊಳಿಸುವತ್ತ ನಿರ್ಣಾಯಕ ಹೆಜ್ಜೆ ಇಡಲಾಗಿದೆ.*

# ಬಡವರ ಕಲ್ಯಾಣದಿಂದ ಹಿಡಿದು ಘನತೆಯ ಜೀವನದವರೆಗೆ

*ಇಂದು, ಭಾರತದಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ಚರ್ಚಿಸಿದಾಗಲೆಲ್ಲಾ, ಬಡವರ ಕಲ್ಯಾಣವು ಅತ್ಯುನ್ನತವಾಗಿ ನಿಲ್ಲುತ್ತದೆ. ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ಬಡವರ ಕಲ್ಯಾಣವನ್ನು ತನ್ನ ಪ್ರಾಥಮಿಕ ಗುರಿಯನ್ನಾಗಿ ಮಾಡಿಕೊಂಡಿದೆ. ಈ ವಿಧಾನವು ತುಷ್ಟೀಕರಣದಲ್ಲಿ ಅಲ್ಲ, ಆದರೆ ನೈಜ ನೆರವೇರಿಕೆಯಲ್ಲಿ ಆಧಾರಿತವಾಗಿದೆ. ಈ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ದೇಶದ ಜನಸಂಖ್ಯೆಯ ವಿಶಾಲ ಭಾಗಕ್ಕೆ ಮತ್ತೊಂದು ರಕ್ಷಣಾತ್ಮಕ ಕವಚವಾಗಿ ಕಾರ್ಯನಿರ್ವಹಿಸುತ್ತದೆ. 2014 ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ 'ಗರೀಬ್ ಕಲ್ಯಾಣ್' (ಬಡವರ ಕಲ್ಯಾಣ) ಪ್ರತಿಜ್ಞೆಗಳನ್ನು ಸಾಕಾರಗೊಳಿಸಲು ವಿನ್ಯಾಸಗೊಳಿಸಲಾದ ಹಲವಾರು ಯೋಜನೆಗಳು ಗ್ರಾಮಸ್ಥರು ಮತ್ತು ದೀನದಲಿತರ ಜೀವನದಲ್ಲಿ ಪರಿವರ್ತನಾತ್ಮಕ ಬದಲಾವಣೆಯನ್ನು ತಂದಿವೆ. ಭಾರತದಲ್ಲಿ ಬಡತನವು ವೇಗವಾಗಿ ಕಡಿಮೆಯಾಗಿದೆ ಎಂದು ವಿಶ್ವಾಸಾರ್ಹ ಜಾಗತಿಕ ವರದಿಗಳು ಸೂಚಿಸುತ್ತವೆ; ಏಕೆಂದರೆ, ಉನ್ನತ ನಾಯಕತ್ವವು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರದಲ್ಲಿ, ಅಂತ್ಯೋದಯ ತತ್ವದಿಂದ ಮಾರ್ಗದರ್ಶಿಸಲ್ಪಟ್ಟ ಬಡವರ ಕಲ್ಯಾಣ ಮತ್ತು ಸಬಲೀಕರಣವು ಶಾಶ್ವತ ಮನಸ್ಥಿತಿಯಾಗಿ ಮಾರ್ಪಟ್ಟಿದೆ.*

## ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ



**81** ಕೋಟಿ ಜನರು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ ಉಚಿತ ಪಡಿತರವನ್ನು ಪಡೆಯುತ್ತಿದ್ದಾರೆ.

**5** ವರ್ಷಗಳ ಕಾಲ ಅಂದರೆ ಜನವರಿ 1, 2024 ರಿಂದ 5 ವರ್ಷ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ವಿಸ್ತರಣೆ.

- ಮಾರ್ಚ್ 2024 ರ ವೇಳೆಗೆ, ಶಕ್ತಿವರ್ಧಿತ ಅಕ್ಕಿಯ ಪೂರೈಕೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಯಿತು, ಕಸ್ಟಮ್-ಗಿರಣಿಯ ಅಕ್ಕಿಯನ್ನು ಶಕ್ತಿವರ್ಧಿತ ಅಕ್ಕಿಯೊಂದಿಗೆ ಬದಲಾಯಿಸಲಾಗುವುದು.
- ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ, ದೇಶಾದ್ಯಂತ ಶೇ.100ರಷ್ಟು ಪಡಿತರ ಚೀಟಿಗಳ ಡಿಜಿಟಲೀಕರಣವನ್ನು ಸಾಧಿಸಲಾಗಿದೆ.
- ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಫಲಾನುಭವಿಗಳಿಗಾಗಿ 'ಒಂದು ರಾಷ್ಟ್ರ, ಒಂದು ಪಡಿತರ ಚೀಟಿ' ಯೋಜನೆಯನ್ನು ಜಾರಿಗೆ ತರಲಾಗಿದೆ. ಮಾರ್ಚ್ 2026 ರವರೆಗೆ 207 ಕೋಟಿಗೂ ಹೆಚ್ಚು ಎಲ್ಲಾದರೂ ಪಡಿತರ ಪಡೆಯುವ (ಪೋರ್ಟಬಿಲಿಟಿ) ವಹಿವಾಟುಗಳು ನಡೆದಿವೆ.

ಪ್ರಧಾನ ಮಂತ್ರಿ ಮೋದಿಯವರ ನಾಯಕತ್ವದಲ್ಲಿ **25** ಕೋಟಿ ನಾಗರಿಕರು ಬಡತನದಿಂದ ಹೊರಬಂದಿದ್ದಾರೆ ಮತ್ತು ಬಡತನ ಮೀರಿ ಹೊರಹೊಮ್ಮಿದ್ದಾರೆ. ಮೋದಿ ಅವರ ಮೂರನೇ ಅವಧಿಯಲ್ಲಿ, ಬಡವರನ್ನು ಸಶಕ್ತರನ್ನಾಗಿಸುವ ಅಭಿಯಾನವು ಇನ್ನೂ ಹೆಚ್ಚಿನ ವೇಗದೊಂದಿಗೆ ಮುಂದುವರೆದಿದೆ.

2015 ರಲ್ಲಿ ದೇಶದಲ್ಲಿ ಸಾಮಾಜಿಕ ಭದ್ರತಾ ವ್ಯಾಪ್ತಿ **19%** ಆಗಿತ್ತು ಮತ್ತು 2025 ರಲ್ಲಿ ಶೇ.64.3 ಕ್ಕೆ ತಲುಪಿದೆ. ಪ್ರಸ್ತುತ 94 ಕೋಟಿಗೂ ಹೆಚ್ಚು ಜನರು ಕನಿಷ್ಠ ಒಂದು ಸಾಮಾಜಿಕ ಭದ್ರತಾ ಯೋಜನೆಯಿಂದ ಪ್ರಯೋಜನ ಪಡೆಯುತ್ತಿದ್ದಾರೆ.

ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ **120** ದಶಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ದೇಶವನ್ನು ಬಯಲು ಶೌಚ ಮುಕ್ತ (ಒಡಿಎಫ್) ಮಾಡಿದೆ. ಇದು ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯದಲ್ಲಿ ಗಮನಾರ್ಹ ಪ್ರಗತಿಯನ್ನು ಸೂಚಿಸುತ್ತದೆ.




## ಆರ್ಥಿಕ ಭದ್ರತೆ

**58.12** ಕೋಟಿ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಖಾತೆಗಳನ್ನು ಏಪ್ರಿಲ್ 15, 2026 ರ ವರಗೆ ತೆರೆಯಲಾಗಿದೆ. ಈ ಖಾತೆಗಳಲ್ಲಿ ಉಳಿದಿರುವ ಒಟ್ಟು ಹಣ ಸುಮಾರು 2.94 ಲಕ್ಷ ಕೋಟಿ ರೂ.




**32.21** ಕೋಟಿ (ಶೇ.55.8) ಜನ್ ಧನ್ ಖಾತೆಗಳು ಮಹಿಳೆಯರಿಗೆ ಸೇರಿದ್ದಾಗಿವೆ ಮತ್ತು ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿ ಸುಮಾರು 45.17 ಕೋಟಿ (ಶೇ.78.2) ಪಿಎಂಜೆಡಿವೈ ಖಾತೆಗಳನ್ನು ತೆರೆಯಲಾಗಿದೆ.



# ₹2

ಲಕ್ಷ ಜೀವ ವಿಮೆ: ಯಾವುದೇ ಕಾರಣದಿಂದ ಸಾವು ಸಂಭವಿಸಿದರೂ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (ಪಿಎಂಜೆಜೆಬಿವೈ) ಅಡಿ ಲಭಿಸಲಿದ್ದು, 27.33 ಕೋಟಿಗೂ ಹೆಚ್ಚು ನೋಂದಣಿಗಳನ್ನು ಹೊಂದಿದೆ.

- ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂ.ಎಸ್.ಬಿ.ವೈ) ಅಪಘಾತದಿಂದ ಉಂಟಾದ ಸಾವು ಅಥವಾ ಶಾಶ್ವತ ಸಂಪೂರ್ಣ ಅಂಗವೈಕಲ್ಯಕ್ಕೆ ₹200,000 ಮತ್ತು ಶಾಶ್ವತ ಭಾಗಶಃ ಅಂಗವೈಕಲ್ಯಕ್ಕೆ ₹100,000 ವಿಮಾ ರಕ್ಷಣೆಯನ್ನು ನೀಡುತ್ತದೆ. ಇದು 57.92 ಕೋಟಿ ನೋಂದಣಿಗಳನ್ನು ದಾಖಲಿಸಿದೆ.



**9** ದಶಲಕ್ಷಕ್ಕೂ ಹೆಚ್ಚು ನೋಂದಣಿ ಅಟಲ್ ಪಿಂಚಣಿ ಯೋಜನೆ (ಎಪಿವೈ) ಅಡಿಯಲ್ಲಿ ಆಗಿದ್ದು, ಅರ್ಹ ಚಂದಾದಾರರಿಗೆ ಮಾಸಿಕ ಪಿಂಚಣಿ ನೀಡುವ ಗುರಿಯನ್ನು ಹೊಂದಿದೆ..

- *ಸ್ಟ್ಯಾಂಡ್-ಅಪ್ ಇಂಡಿಯಾ* ಯೋಜನೆಯಡಿಯಲ್ಲಿ, ಪರಿಶಿಷ್ಟ ಜಾತಿ (ಪ.ಜಾ.), ಪರಿಶಿಷ್ಟ ಪಂಗಡ (ಪ.ಪಂ.) ಮತ್ತು ಮಹಿಳೆಯರ ಉದ್ಯಮಿಗಳಿಗೆ 62790 ಕೋಟಿ ರೂ. ಒಟ್ಟು ಮೌಲ್ಯದ 275,000 ಸಾಲಗಳನ್ನು ಮಂಜೂರು ಮಾಡಲಾಗಿದೆ, ಇದು ಉತ್ಪಾದನೆ, ವ್ಯಾಪಾರ, ಸೇವೆಗಳು ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ಹಸಿರು ವಲಯ ಯೋಜನೆಗಳನ್ನು ಸ್ಥಾಪಿಸಲು ಅನುವು ಮಾಡಿಕೊಡುತ್ತದೆ.
- 'ಜನ್ ಧನ್-ಆಧಾರ್-ಮೊಬೈಲ್' (ಜೆಎಎಂ) ತ್ರಿವಳಿ ಎಂದು ಕರೆಯಲಾಗುವ ದೃಢವಾದ ಹಣಪೂರಣ ವೇದಿಕೆಯನ್ನು ಸ್ಥಾಪಿಸಲಾಗಿದೆ, ಇದು ಜನ್ ಧನ್ ಖಾತೆಗಳನ್ನು ಮೊಬೈಲ್ ಸಂಖ್ಯೆಗಳು ಮತ್ತು ಆಧಾರ್ ಗುರುತುಗಳೊಂದಿಗೆ ಸಂಪರ್ಕಿಸಲಾಗುತ್ತಿದೆ.
- ಪಿಎಂ ಸ್ವನಿಧಿ ಯೋಜನೆ - ಪ್ರಾರಂಭವಾದಾಗಿನಿಂದ 2026 ರ ಏಪ್ರಿಲ್ 15 ರವರೆಗೆ ಈ ಯೋಜನೆಯಡಿ 74.90 ಕೋಟಿ ಬೀದಿ ಬದಿ ವ್ಯಾಪಾರಿಗಳಿಗೆ ಸಾಲವನ್ನು ವಿತರಿಸಲಾಗಿದೆ.

## ಜಲ ಜೀವನ್ ಮಿಷನ್

ಮೇ 13, 2026 ರವರೆಗೆ

**126.1** ದಶಲಕ್ಷ ಹೆಚ್ಚುವರಿ ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ. 2019 ರಲ್ಲಿ ಮಿಷನ್ ಪ್ರಾರಂಭವಾದಾಗ, ಕೇವಲ 32.3 ದಶಲಕ್ಷ (ಶೇ.16.7) ಗ್ರಾಮೀಣ ಕುಟುಂಬಗಳು ನಲ್ಲಿ ನೀರಿನ ಸಂಪರ್ಕವನ್ನು ಹೊಂದಿದ್ದವು.

**15.85** ಕೋಟಿ ಕುಟುಂಬಗಳು ಮೇ 13, 2026ರ ವೇಳೆಗೆ ತಮ್ಮ ಮನೆಗಳಲ್ಲಿ ಕೊಳಾಯಿ ನೀರಿನ ಸಂಪರ್ಕವನ್ನು ಪಡೆದಿವೆ. ದೇಶದ ಒಟ್ಟು ಗ್ರಾಮೀಣ ಕುಟುಂಬಗಳ ಸಂಖ್ಯೆ 19.36 ಕೋಟಿ.

- ಮಾರ್ಚ್ 10, 2026 ರಂದು, ಕೇಂದ್ರ ಸಚಿವ ಸಂಪುಟವು ಜಲ ಜೀವನ್ ಮಿಷನ್ (ಜೆಜೆಎಂ) ಅವಧಿಯನ್ನು ಡಿಸೆಂಬರ್ 2028 ರವರೆಗೆ ವಿಸ್ತರಿಸಲು ಅನುಮೋದನೆ ನೀಡಿತು.



> **ನಾನು ಎಂದಿಗೂ ಕಠಿಣ ಪರಿಶ್ರಮದಿಂದ ದಣಿಯುವುದಿಲ್ಲ; ಬದಲಿಗೆ, ನನ್ನ ಪ್ರಯತ್ನಗಳು ಬಡವರ ಮುಖದಲ್ಲಿ ತರುವ ನಗು ನನಗೆ ಆಳವಾದ ತೃಪ್ತಿಯ ಭಾವನೆಯನ್ನು ತುಂಬುತ್ತದೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

# ರೈತ ಕಲ್ಯಾಣ: ಹೊಸ ಯುಗದ ಉದಯ

*ದಶಕಗಳಿಂದ ನಿರ್ಲಕ್ಷ್ಯಕ್ಕೊಳಗಾಗಿದ್ದ ಭಾರತದ ಅನ್ನದಾತರು ಈಗ ಭಾರತದ ಅಭಿವೃದ್ಧಿಯ ಪಯಣದಲ್ಲಿ ಅವಿಭಾಜ್ಯ ಅಂಗವಾಗಿ ಮಾರ್ಪಟ್ಟಿದ್ದಾರೆ. ಕೃಷಿ ಸಚಿವಾಲಯವನ್ನು ಈಗ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಎಂದು ಮರುನಾಮಕರಣ ಮಾಡಿರುವುದು ರೈತರ ಬಗೆಗಿನ ಈ ಮನಸ್ಥಿತಿಯ ಬದಲಾವಣೆಗೆ ಸಾಕ್ಷಿಯಾಗಿದೆ. ಈ ದೃಷ್ಟಿಕೋನದಿಂದ ಪ್ರೇರಿತವಾಗಿ ಮತ್ತು ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ರೈತರ ಪ್ರತಿಯೊಂದು ಅಗತ್ಯವನ್ನು ವಿವಿಧ ಯೋಜನೆಗಳ ಮೂಲಕ ಸಮಗ್ರವಾಗಿ ಪೂರೈಸಿದೆ. ಒಂದು ಸಾಮೂಹಿಕ ಪ್ರಯತ್ನ ಭಾರತದ ರೈತರಿಗೆ ಒಂದು ಹೊಸ ದಿಕ್ಕನ್ನು ನೀಡಿದೆ.*

## ಹೆಚ್ಚುತ್ತಿರುವ ಆಹಾರ ಧಾನ್ಯ ಉತ್ಪಾದನೆ

**357.73** ದಶಲಕ್ಷ ಮೆಟ್ರಿಕ್ ಟನ್ ಗೂ ಹೆಚ್ಚು ಆಹಾರ ಧಾನ್ಯ ಉತ್ಪಾದನೆಯನ್ನು 2024-2025 ಕೃಷಿ ವರ್ಷದಲ್ಲಿ ಭಾರತ ಸಾಧಿಸಿದೆ.

**150** ದಶಲಕ್ಷ ಟನ್ ಉತ್ಪಾದನಾ ಪ್ರಮಾಣದೊಂದಿಗೆ, ಭಾರತವು ವಿಶ್ವದ ಅತಿದೊಡ್ಡ ಅಕ್ಕಿ ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ.



- ನಮ್ಮ ದೇಶವು ವಿಶ್ವದ ಎರಡನೇ ಅತಿದೊಡ್ಡ ಮೀನು ಉತ್ಪಾದಕ ರಾಷ್ಟ್ರವಾಗಿದೆ. ಈ ಸಾಧನೆಯು 'ನೀಲಿ ಆರ್ಥಿಕತೆ' ಕ್ಷೇತ್ರದಲ್ಲಿ ರಾಷ್ಟ್ರದ ಯಶಸ್ಸನ್ನು ಒತ್ತಿಹೇಳುತ್ತದೆ.



- ಹಾಲು ಉತ್ಪಾದನೆಯಲ್ಲೂ ಭಾರತವನ್ನು ವಿಶ್ವದ ಅತ್ಯಂತ ಯಶಸ್ವಿ ರಾಷ್ಟ್ರಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಈ ಯಶಸ್ಸು ಸಹಕಾರಿ ಚಳವಳಿಯ ಬಲದ ನೇರ ಫಲಿತಾಂಶವಾಗಿದೆ.



## ಪಿಎಂ ಕಿಸಾನ್ ಸಮ್ಮಾನ್ ನಿಧಿ

ಈ ಯೋಜನೆಯಡಿಯಲ್ಲಿ, ವರ್ಷಕ್ಕೆ 6,000 ರೂ.ಗಳ ಆರ್ಥಿಕ ನೆರವನ್ನು ನೇರ ಸವಲತ್ತು ವರ್ಗಾವಣೆ (ಡಿಬಿಟಿ) ಮೂಲಕ ರೈತರ ಆಧಾರ್ ಸಂಪರ್ಕಿತ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ, ಇದನ್ನು ಮೂರು ಸಮಾನ ಕಂತುಗಳಲ್ಲಿ ವಿತರಿಸಲಾಗುತ್ತದೆ. ಪ್ರಾರಂಭವಾದಾಗಿನಿಂದ, 22 ಕಂತುಗಳಲ್ಲಿ 4.27 ಲಕ್ಷ ಕೋಟಿ ರೂ.ಗಳನ್ನು ವಿತರಿಸಲಾಗಿದೆ.



## ಸರ್ಕಾರ ಎಂ.ಎಸ್.ಪಿ ಹೆಚ್ಚಳ ಮುಂದುವರಿಕೆ

- 2018-19 ರಿಂದ, ಸರ್ಕಾರವು ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ) ಅನ್ನು ಹೆಚ್ಚಿಸುತ್ತಿದೆ. ಇದನ್ನು ರೈತರ ಕೃಷಿ ವೆಚ್ಚದ ಕನಿಷ್ಠ 1.5 ಪಟ್ಟು ಮಟ್ಟದಲ್ಲಿ ನಿಗದಿಪಡಿಸಲಾಗುತ್ತದೆ, ರೈತರು ತಮ್ಮ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ.50 ರಷ್ಟು ಲಾಭವನ್ನು ಪಡೆಯುತ್ತಾರೆ ಎಂದು ಖಚಿತಪಡಿಸುತ್ತದೆ.

## ಕೃಷಿ ಅಭಿವೃದ್ಧಿಗೆ ನಿಧಿ

2026-27ನೇ ಸಾಲಿನಲ್ಲಿ ಕೃಷಿ ಕ್ಷೇತ್ರಕ್ಕೆ ಬಜೆಟ್ ನಲ್ಲಿ 1,32,561 ಕೋಟಿ ರೂ. ಕೃಷಿ ಶಿಕ್ಷಣ ಮತ್ತು ಸಂಶೋಧನೆಗೆ ಅಂದಾಜು ರೂ.9,967 ಕೋಟಿ ಮೀಸಲಿಡಲಾಗಿದೆ. ಇದು ಕೃಷಿ ಅಭಿವೃದ್ಧಿಗೆ ಆದ್ಯತೆ ನೀಡುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

### ಪ್ರಧಾನ ಮಂತ್ರಿ ಕಿಸಾನ್ ಮಾನ್ ಧನ್ ಯೋಜನೆ

**60** ವರ್ಷ ಮೇಲ್ಪಟ್ಟವರಿಗೆ ಮಾಸಿಕ 3,000 ರೂ. ಪಿಂಚಣಿ ನೀಡಲಾಗುವುದು. ಸೇರ್ಪಡೆಯಾದ ಸಂದರ್ಭದ ವಯಸ್ಸನ್ನು ಅವಲಂಬಿಸಿ ಮಾಸಿಕ ವಂತಿಕೆ ಮೊತ್ತವು ₹ 55 ರಿಂದ ₹ 200 ವರೆಗೆ ಇರುತ್ತದೆ.

**24.96** ಕೋಟಿ ರೈತರು ಫೆಬ್ರವರಿ 6, 2026ರ ಹೊತ್ತಿಗೆ ಪ್ರಧಾನ ಮಂತ್ರಿ ಕಿಸಾನ್ ಮಾನ್ ಧನ್ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ.



**“ಪ್ರಸ್ತುತ ಕೇಂದ್ರದಲ್ಲಿರುವ ಸರ್ಕಾರವು ರೈತರ ವೆಚ್ಚವನ್ನು ತಗ್ಗಿಸಲು ಮತ್ತು ಅವರ ವೆಚ್ಚದ ಹೊರೆಯನ್ನು ಹಂಚಿಕೊಳ್ಳಲು ಸಂಪೂರ್ಣ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ವಿಶ್ವದ ಅತಿದೊಡ್ಡ ಯೋಜನೆಯಾಗಿದ್ದು, ಇದರಲ್ಲಿ ಹಣಕಾಸಿನ ನೆರವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

## ರಿಯಾಯಿತಿ ದರದಲ್ಲಿ ರಸಗೊಬ್ಬರ ಪಡೆಯುತ್ತಿರುವ ರೈತರು

ಕೋವಿಡ್-19 ಸಾಂಕ್ರಾಮಿಕ ಮತ್ತು ನಂತರದ ಸಂಘರ್ಷಗಳಿಂದಾಗಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರ ಬೆಲೆಗಳು ಅನೇಕ ಪಟ್ಟು ಏರಿವೆ. ವಿದೇಶಿ ಮಾರುಕಟ್ಟೆಗಳಿಂದ ರಸಗೊಬ್ಬರಗಳನ್ನು ಪಡೆಯುವುದು ಸಹ ಅತ್ಯಂತ ಕಷ್ಟಕರವಾಗಿದೆ; ಆದಾಗ್ಯೂ, ಈ ಬಿಕ್ಕಟ್ಟನ್ನು ತಗ್ಗಿಸಲು ಕೇಂದ್ರ ಸರ್ಕಾರ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದೆ.

**3,000** ರೂಪಾಯಿ ಮೌಲ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದ್ದಾಗ್ಯೂ ಯೂರಿಯಾ ಚೀಲವನ್ನು ಕೇಂದ್ರ ಸರ್ಕಾರವು 300 ರೂ.ಗಿಂತ ಕಡಿಮೆ ಬೆಲೆಯ ರೈತರಿಗೆ ಒದಗಿಸುತ್ತಿದೆ.



- ರೈತರ ಮೇಲೆ ಯಾವುದೇ ಆರ್ಥಿಕ ಹೊರೆ ಬೀಳದಂತೆ ನೋಡಿಕೊಳ್ಳಲು ಸರ್ಕಾರವು ತನ್ನ ಬೊಕ್ಕಸದಿಂದ 12 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡಿದೆ.
- ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ದೇಶದ ರೈತರ ಸುತ್ತಲೂ ದೃಢವಾದ ಸುರಕ್ಷತಾ ಕವಚವನ್ನು ಹೆಣೆದಿದೆ. ಎಂ.ಎಸ್.ಪಿ., ಕೈಗೆಟುಕುವ ಸಾಲ, ಬೆಳೆ ವಿಮೆ ಮತ್ತು ಪಿಎಂ ಕಿಸಾನ್ ಸಮ್ಮಾನ್ ನಿಧಿಯಂತಹ ಯೋಜನೆಗಳು ರೈತ ಸಮುದಾಯಕ್ಕೆ ಅಪಾರ ಬೆಂಬಲದ ಆಧಾರಸ್ತಂಭಗಳಾಗಿ ಕಾರ್ಯನಿರ್ವಹಿಸಿವೆ.
- ಕೃಷಿಯನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಸಂಯೋಜಿಸುವ, ರೈತರನ್ನು ನವೀನ ನೀರಾವರಿ ವಿಧಾನಗಳೊಂದಿಗೆ ಸಂಪರ್ಕಿಸುವ ಮತ್ತು ಅವರ ಬೆಳೆಗಳಿಗೆ ಪ್ರಯೋಜನಗಳನ್ನು ಖಾತ್ರಿಪಡಿಸುವ ಉದ್ದೇಶದಿಂದ, ಸರ್ಕಾರವು 'ಪ್ರತಿ ಹನಿ, ಹೆಚ್ಚು ಬೆಳೆ' ನೀತಿಯನ್ನು ರೂಪಿಸಿದೆ. ಈ ಉಪಕ್ರಮದ ಮೂಲಕ, ಹನಿ ಮತ್ತು ತುಂತುರು ವ್ಯವಸ್ಥೆಗಳಂತಹ ಸೂಕ್ಷ್ಮ ನೀರಾವರಿ ತಂತ್ರಜ್ಞಾನಗಳನ್ನು ರೈತರಿಗೆ ಲಭ್ಯವಾಗುವಂತೆ ಮಾಡಲಾಗಿದೆ.
- ಕೇಂದ್ರವು ಕುಸುಮ್ ಯೋಜನೆಯನ್ನು ಪ್ರಾರಂಭಿಸಿದೆ. ಇಂದು, ಹೆಚ್ಚಿನ ಸಂಖ್ಯೆಯ ರೈತರು ನೀರಾವರಿಗಾಗಿ ಸೌರ ಪಂಪ್ ಗಳನ್ನು ಬಳಸುತ್ತಿರುವುದು ಮಾತ್ರವಲ್ಲದೆ ಅವುಗಳ ಮೂಲಕ ವಿದ್ಯುತ್ ಉತ್ಪಾದಿಸುತ್ತಿದ್ದಾರೆ, ಆ ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸುತ್ತಿದ್ದಾರೆ.



ಮುಖಪುಟ ಲೇಖನ 12 ವರ್ಷಗಳ ವಿಕಾಸ ಯಾತ್ರೆ

# ಮಧ್ಯಮ ವರ್ಗದ ಆಕಾಂಕ್ಷೆಗಳಿಗೆ ಹೊಸ ರೆಕ್ಕೆ

*ತ್ವರಿತವಾಗಿ ಬದಲಾಗುತ್ತಿರುವ ಭಾರತದಲ್ಲಿ, ಅಭಿವೃದ್ಧಿಯಾಗಿರಲಿ ಅಥವಾ ಆಡಳಿತವಾಗಿರಲಿ, ಧೈರ್ಯವಿರಲಿ ಅಥವಾ ಸಂಕಲ್ಪದ ಸಾಮರ್ಥ್ಯವಾಗಿರಲಿ - ಮಧ್ಯಮ ವರ್ಗದವರು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದ್ದಾರೆ. ಜನಸಂಖ್ಯೆಯ ಮೂರನೇ ಒಂದು ಭಾಗವನ್ನು ಒಳಗೊಂಡಿರುವ ಮಧ್ಯಮ ವರ್ಗವು ಸಮೃದ್ಧ ಮತ್ತು ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಪ್ರಬಲ ಶಕ್ತಿಯಾಗಿದೆ - ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಅವರ ಆಕಾಂಕ್ಷೆಗಳಿಗೆ ಹೊಸ ರೆಕ್ಕೆಗಳನ್ನು ನೀಡಿದೆ.*

## ಆದಾಯ ತೆರಿಗೆ ವಿನಾಯಿತಿ

**12** ಲಕ್ಷ ರೂ.ವರೆಗಿನ ವಾರ್ಷಿಕ ಆದಾಯಕ್ಕೆ ಹೊಸ ತೆರಿಗೆ ವ್ಯವಸ್ಥೆಯಡಿಯಲ್ಲಿ ಯಾವುದೇ ಆದಾಯ ತೆರಿಗೆ ಪಾವತಿಸಬೇಕಾಗಿಲ್ಲ.



**₹75,000** ಸ್ಟ್ಯಾಂಡರ್ಡ್ ಡಿಡಕ್ಷನ್ ಮತ್ತು 12.75 ಲಕ್ಷ ರೂ.ಗಳ ಪರಿಣಾಮಕಾರಿ ಆದಾಯದ ಮಿತಿ ಸಂಬಳ ಪಡೆಯುವ ತೆರಿಗೆದಾರರಿಗಾಗಿ ಜಾರಿ.

- ಎಲ್ಲಾ ತೆರಿಗೆದಾರರಿಗೆ ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾದ ಕೇಂದ್ರ ಬಜೆಟ್ 2025-26 ರಲ್ಲಿ ಆದಾಯ ತೆರಿಗೆ ಸ್ಲ್ಯಾಬ್ ಗಳು ಮತ್ತು ದರಗಳಿಗೆ ಸಮಗ್ರ ಪರಿಷ್ಕರಣೆ ಮಾಡಲಾಗಿದೆ.
- ವಿನಾಯಿತಿಗಳು ಮತ್ತು ಎಲ್ಲ ಸ್ಲ್ಯಾಬ್ ದರಗಳನ್ನು ತಗ್ಗಿಸುವ ಮೂಲಕ ಮಧ್ಯಮ ವರ್ಗದವರಿಗೆ ಗಣನೀಯ ತೆರಿಗೆ ಪರಿಹಾರ ನೀಡಿದ್ದು, ಆ ಮೂಲಕ ಮನೆಯ ಬಳಕೆಯ ವೆಚ್ಚ ಮತ್ತು ಹೂಡಿಕೆಯನ್ನು ಹೆಚ್ಚಿಸಲಾಗಿದೆ.
- ಆದಾಯ ತೆರಿಗೆ ಸಲ್ಲಿಸುವವರ ಸಂಖ್ಯೆ 2022 ರ ಹಣಕಾಸು ವರ್ಷದಲ್ಲಿ 6.9 ಕೋಟಿಯಿಂದ 2025ರ ಹಣಕಾಸು ವರ್ಷದಲ್ಲಿ 9.2 ಕೋಟಿಗೆ ಏರಿದೆ.

## ಉಡಾನ್ ಯೋಜನೆ



**1.64+** ಕೋಟಿ ನಾಗರಿಕರು 3.45 ಲಕ್ಷ ವಿಮಾನ ಸೇವೆಗಳ ಮೂಲಕ ಉಡಾನ್ ಯೋಜನೆಯ ಪ್ರಯೋಜನಗಳನ್ನು ಪಡೆದಿದ್ದಾರೆ.

ಸರ್ಕಾರ ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಿದೆ. ಈ ಉದ್ದೇಶಕ್ಕಾಗಿ ಸುಮಾರು 29,000 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ.

**95** ವಿಮಾನ ನಿಲ್ದಾಣಗಳು, ಹೆಲಿಪೋರ್ಟ್ ಗಳು ಮತ್ತು ವಾಟರ್ ಏರೋಡ್ರೋಮ್ ಗಳನ್ನು 665 ಮಾರ್ಗಗಳ ಮೂಲಕ ಸಂಪರ್ಕಿಸಲಾಗಿದೆ.

- ಮುಂಬರುವ ವರ್ಷಗಳಲ್ಲಿ, ಈ ಯೋಜನೆಯಡಿ ಸಣ್ಣ ನಗರಗಳಲ್ಲಿ 100 ಹೊಸ ವಿಮಾನ ನಿಲ್ದಾಣಗಳು ಮತ್ತು 200 ಹೊಸ ಹೆಲಿಪ್ಯಾಡ್ ಗಳನ್ನು ನಿರ್ಮಿಸುವ ಯೋಜನೆಗಳು ಜಾರಿಯಲ್ಲಿವೆ.
- 2014ರ ಮೊದಲು, ದೇಶದಲ್ಲಿ ಕೇವಲ 74 ವಿಮಾನ ನಿಲ್ದಾಣಗಳಿದ್ದವು. ಇಂದು, ದೇಶಾದ್ಯಂತ 160 ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳಿವೆ.

## ವಂದೇ ಭಾರತ್ ಸೇವೆ

**9.1** ಕೋಟಿ ಪ್ರಯಾಣಿಕರು ವಂದೇ ಭಾರತ್ ಸೇವೆ ಪ್ರಾರಂಭವಾದಾಗಿನಿಂದ ಮಾರ್ಚ್ 31, 2026 ರವರೆಗೆ 1 ಲಕ್ಷ ಟ್ರಿಪ್ ಗಳಲ್ಲಿ ಪ್ರಯಾಣಿಸಿದ್ದಾರೆ.

**162** ವಂದೇ ಭಾರತ್ ಸೇವೆಗಳನ್ನು ಇಲ್ಲಿಯವರೆಗೆ ಪ್ರಾರಂಭಿಸಲಾಗಿದೆ, ಇದರ ಪರಿಣಾಮವಾಗಿ ಹಲವಾರು ಕಾರಿಡಾರ್ ಗಳಲ್ಲಿ ಪ್ರಯಾಣದ ಸಮಯವನ್ನು ಶೇಕಡಾ 45 ರಷ್ಟು ಕಡಿಮೆ ಮಾಡಲಾಗಿದೆ.

**90** ಸೇವೆಗಳು 8 ಬೋಗಿಗಳನ್ನು ಒಳಗೊಂಡಿವೆ


**38** ಸೇವೆಗಳು 20 ಬೋಗಿಗಳಲ್ಲಿ

**34** ಬೋಗಿಗಳ 34 ಸೇವೆಗಳು

ಬಡವರು ಮತ್ತು ಮಧ್ಯಮ ವರ್ಗದವರಿಗೆ ಸೇವೆ ಸಲ್ಲಿಸಲು ಸಮರ್ಪಿತವಾಗಿರುವ ಭಾರತೀಯ ರೈಲ್ವೆಯು ಶೇಕಡಾ 100 ರಷ್ಟು ವಿದ್ಯುದ್ದೀಕರಣದ ಗುರಿಯತ್ತ ವೇಗವಾಗಿ ಮುನ್ನಡೆಯುತ್ತಿದೆ.



## ಉಮಾಂಗ್ ಅಪ್ಲಿಕೇಶನ್
### ಒಂದು ವೇದಿಕೆ, ಅನೇಕ ಸೇವೆಗಳು




**11.02** ಕೋಟಿ ನೋಂದಣಿಗಳು ಉಮಾಂಗ್ ಅಪ್ಲಿಕೇಶನ್ ನಲ್ಲಿ ಆಗಿವೆ.

**766.35** ಕೋಟಿ ವಹಿವಾಟು.

**2,517** ಸೇವೆಗಳು ಆನ್ ಬೋರ್ಡ್ ಆಗಿವೆ.

2017 ರಲ್ಲಿ ಪ್ರಾರಂಭಿಸಲಾದ ಈ ಅಪ್ಲಿಕೇಶನ್ ಮಧ್ಯಮ ವರ್ಗದವರಿಗೆ ಕಡಿಮೆ ಸರತಿ ಸಾಲುಗಳು, ಹೆಚ್ಚಿನ ನಿಯಂತ್ರಣ ಮತ್ತು ಸಾರ್ವಜನಿಕ ಸೇವೆಗಳಿಗೆ ವೇಗದ ಪ್ರವೇಶವನ್ನು ಸೂಚಿಸುತ್ತದೆ.

## ಡಿಜಿಲಾಕರ್

DigiLocker

**63.88** ಕೋಟಿಗೂ ಹೆಚ್ಚು ನೋಂದಾಯಿತ ಬಳಕೆದಾರರು

**950** ಕೋಟಿಗೂ ಹೆಚ್ಚು ದಾಖಲೆಗಳನ್ನು ನೀಡಲಾಗಿದೆ.



## ತಗ್ಗಿದ ಮೊಬೈಲ್ ಡೇಟಾ ವೆಚ್ಚ

**97%** ಮೊಬೈಲ್ ಡೇಟಾ ವೆಚ್ಚದಲ್ಲಿ ಕಡಿತ - 2025-26 ರ ದರವನ್ನು 2014ಕ್ಕೆ ಹೋಲಿಸಿದಾಗ.

## ರಿಯಲ್ ಎಸ್ಟೇಟ್ ನಿಯಂತ್ರಣ

- ಮನೆ ಖರೀದಿದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ವಸತಿ ಕ್ಷೇತ್ರದಲ್ಲಿ ಪಾರದರ್ಶಕತೆಯನ್ನು ತರಲು, ಸಂಸತ್ತು 2016 ರಲ್ಲಿ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಯನ್ನು ಅಂಗೀಕರಿಸಿತು.
- ರೇರಾ 1.57 ಲಕ್ಷ ಪ್ರಕರಣಗಳನ್ನು ಪರಿಹರಿಸಿದೆ; ರೇರಾ ಅಧಿಕಾರಿಗಳು 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- ದೇಶಾದ್ಯಂತ 1.61 ಲಕ್ಷಕ್ಕೂ ಹೆಚ್ಚು ರಿಯಲ್ ಎಸ್ಟೇಟ್ ಯೋಜನೆಗಳು ಮತ್ತು 1.13 ಲಕ್ಷ ರಿಯಲ್ ಎಸ್ಟೇಟ್ ಏಜೆಂಟರು ರೇರಾ ಅಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ.



## ಪಿಎಂ ಆವಾಸ್ ಯೋಜನೆ (ನಗರ)

ಜೂನ್ 25, 2015 ರಿಂದ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಪ್ರಧಾನ ಮಂತ್ರಿ ವಸತಿ ಯೋಜನೆ - ನಗರ (ಪಿಎಂಎವೈ-ಯು) ಅಡಿಯಲ್ಲಿ ಕೇಂದ್ರ ನೆರವು ನೀಡುವ ಮೂಲಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರಯತ್ನಗಳನ್ನು ಬೆಂಬಲಿಸುತ್ತಿದೆ. ಈ ಉಪಕ್ರಮವು ದೇಶಾದ್ಯಂತದ ನಗರ ಫಲಾನುಭವಿಗಳಲ್ಲಿ ಅರ್ಹ ಯುವ ವ್ಯಕ್ತಿಗಳು ಮತ್ತು ಕೆಲಸ ಮಾಡುವ ವೃತ್ತಿಪರರಿಗೆ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಹೊಂದಿರುವ ಪಕ್ಕಾ ಮನೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.




ಪಿಎಂಎವೈ-ಯು 2.0 ಅಡಿಯಲ್ಲಿ 13.67 ಲಕ್ಷ ಮನೆಗಳು ಸೇರಿದಂತೆ ಇಲ್ಲಿಯವರೆಗೆ ರಾಷ್ಟ್ರವ್ಯಾಪಿ ಒಟ್ಟು

**125.15** ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ.

ಮಂಜೂರಾದ 116.57 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಆರಂಭವಾಗಿದೆ. ಈ ಪೈಕಿ ಮಾರ್ಚ್ 2, 2026 ರವರೆಗೆ 97.30 ಲಕ್ಷ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ.

## ಅಂಚೆ ಕಚೇರಿ ಪಾಸ್ ಪೋರ್ಟ್ ಸೇವಾ ಕೇಂದ್ರಗಳು

**452** ಅಂಚೆ ಕಚೇರಿ ಪಾಸ್ ಪೋರ್ಟ್ ಸೇವಾ ಕೇಂದ್ರಗಳು 23 ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.




## ಪಿಎಂ-ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ

**36.88** ಲಕ್ಷ ಕುಟುಂಬಗಳು ಏಪ್ರಿಲ್ 30, 2026ರ ವೇಳೆಗೆ ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಅಡಿಯಲ್ಲಿ ಸೌರ ವ್ಯವಸ್ಥೆಗಳನ್ನು ಸ್ಥಾಪಿಸಿವೆ.



**19,480** ಕೋಟಿ ರೂ.ಗಳ ಸಬ್ಸಿಡಿಗಳನ್ನು ಬಿಡುಗಡೆ ಮಾಡಲಾಗಿದೆ.

ಯೋಜನೆಯಡಿ ಸ್ಥಾಪಿತ ಸಾಮರ್ಥ್ಯವು 10.77 ಗಿಗಾವ್ಯಾಟ್ ತಲುಪಿದೆ.

## ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

ಕಳೆದ 12 ವರ್ಷಗಳಲ್ಲಿ, ದೇಶದ ಆರ್ಥಿಕ ಅಡಿಪಾಯವು ಗಮನಾರ್ಹವಾಗಿ ಬಲಗೊಂಡಿದೆ. ವಿವಿಧ ಜಾಗತಿಕ ಬಿಕ್ಕಟ್ಟುಗಳ ಹೊರತಾಗಿಯೂ, ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರೆದಿದೆ. ಹಣದುಬ್ಬರ ದರವನ್ನು ಕಡಿಮೆ ಮಾಡುವ ತನ್ನ ದಾಖಲೆಯನ್ನು ಭಾರತ ಮತ್ತಷ್ಟು ಸುಧಾರಿಸಿದೆ. ಇದರ ನೇರ ಪ್ರಯೋಜನಗಳು ದೇಶದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ದೊರೆಯುತ್ತಿವೆ.

**“ಮಧ್ಯಮ ವರ್ಗದ ಕುಟುಂಬಗಳು ರಾಷ್ಟ್ರಕ್ಕೆ ಬಹಳಷ್ಟು ಕೊಡುಗೆ ನೀಡುವುದರಿಂದ, ಅವರ ಜೀವನದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅವರ ಆಕಾಂಕ್ಷೆಗಳನ್ನು ಈಡೇರಿಸಲು ನಿರಂತರ ಪ್ರಯತ್ನಗಳನ್ನು ಮಾಡುವುದು ರಾಷ್ಟ್ರದ ಜವಾಬ್ದಾರಿಯಾಗಿದೆ. 2047ರ ವೇಳೆಗೆ 'ಅಭಿವೃದ್ಧಿ ಹೊಂದಿದ ಭಾರತ'ದ ಕನಸು ನನಸಾಗಿದಾಗ, ಸಾಮಾನ್ಯ ಜನರ ಜೀವನದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ಕಡಿಮೆ ಮಾಡುವುದು ಅದರ ವ್ಯಾಖ್ಯಾನಿಸುವ ಲಕ್ಷಣಗಳಲ್ಲಿ ಒಂದಾಗಿದೆ ಎಂದು ನಾನು ಭಾವಿಸುತ್ತೇನೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

# ಭಾರತ: ಆರೋಗ್ಯ ಮತ್ತು ಸಮೃದ್ಧಿಯ ಕಡೆಗೆ

*ಸರಾಸರಿ ಜೀವಿತಾವಧಿಯಲ್ಲಿ ಒಂದು ವರ್ಷದ ಹೆಚ್ಚಳವು ದೇಶದ ಜಿಡಿಪಿಯಲ್ಲಿ ಶೇಕಡಾ 4 ರಷ್ಟು ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂಬುದು ನಿಮಗೆ ತಿಳಿದಿದೆಯೇ? ಈ ಕಾರಣದಿಂದಲೇ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಅಂದರೆ 2014ರಿಂದ ಆರಂಭಗೊಂಡು ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಿದ್ದು ಮಾತ್ರವಲ್ಲದೆ, ಈಗಿನ ಕೇಂದ್ರ ಸರ್ಕಾರವು ನೀತಿ ಮತ್ತು ರಾಜಕೀಯ ಕಾರ್ಯಸೂಚಿಯಲ್ಲಿ ಅಗ್ರಸ್ಥಾನದಲ್ಲಿದೆ. ಕೈಗೆಟುಕುವ ಆರೋಗ್ಯ ಸೇವೆಗಳನ್ನು ಒದಗಿಸುವ ಮೂಲಕ ಆರೋಗ್ಯಕರ ಭವಿಷ್ಯವನ್ನು ಖಾತ್ರಿಪಡಿಸುವ ಮೂಲಕ, ಭಾರತ ಸರ್ಕಾರವು ಕಳೆದ 12 ವರ್ಷಗಳಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸುವತ್ತ ಗಮನಾರ್ಹ ದಾಪುಗಾಲು ಇಟ್ಟಿದೆ. ಇಂದು, ಭಾರತವು ವಿಶ್ವದ ಅತಿದೊಡ್ಡ ಆರೋಗ್ಯ ಕಾರ್ಯಕ್ರಮ: ಆಯುಷ್ಮಾನ್ ಭಾರತ್.*

## 12 ವರ್ಷಗಳಲ್ಲಿ ಆರೋಗ್ಯ ಶಿಕ್ಷಣದ ಕೂಲಂಕುಷ ಪರಿಶೀಲನೆ

**23**
ಭಾರತದಲ್ಲಿರುವ ಏಮ್ಸ್ (ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ) ಸಂಖ್ಯೆ.

**323**
ದಂತ ವೈದ್ಯಕೀಯ ಕಾಲೇಜುಗಳು, 942 ಆಯುಷ್ ಸಂಸ್ಥೆಗಳ ಸಹಿತ.

**1,28,975**
ಎಂಬಿಬಿಎಸ್ ಸೀಟುಗಳು ದೇಶದಲ್ಲಿ ಲಭ್ಯವಿದೆ, 2014 ರಲ್ಲಿದ್ದ 51,384 ಸೀಟುಗಳಿಂದ ಗಮನಾರ್ಹ ಹೆಚ್ಚಳವಾಗಿದೆ.

**172%**
ವೈದ್ಯಕೀಯ ಸೀಟುಗಳ ಸಂಖ್ಯೆ, ಕಳೆದ 12 ವರ್ಷಗಳಲ್ಲಿ ಹೆಚ್ಚಳವಾಗಿದೆ.

**818**
ಅಲೋಪತಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ. (2014 ರಲ್ಲಿ 387 ಇತ್ತು)

**85,020**
ವೈದ್ಯಕೀಯ ಸ್ನಾತಕೋತ್ತರ ಪದವಿ ಸೀಟುಗಳ ಈಗಿರುವ ಸಂಖ್ಯೆ. 2014ರಲ್ಲಿ 31,185 ಇತ್ತು.

## ಲಸಿಕೆ



ನವಜಾತ ಶಿಶುಗಳು, ಮಕ್ಕಳು ಮತ್ತು ಹದಿಹರೆಯದವರಿಗೆ **12** ವಿವಿಧ ರೀತಿಯ ಕಾಯಿಲೆಗಳಿಂದ ರಕ್ಷಿಸಲು ಲಸಿಕೆಗಳನ್ನು ನೀಡಲಾಗುತ್ತದೆ

- 2015 ರಲ್ಲಿ ಪ್ರಾರಂಭಿಸಲಾದ ಮಿಷನ್ ಇಂದ್ರಧನುಷ್ ಕಾರ್ಯಕ್ರಮದ ಅಡಿಯಲ್ಲಿ, ಲಸಿಕೆ ಪಡೆಯದ ಅಥವಾ ಭಾಗಶಃ ಲಸಿಕೆ ಪಡೆದ ಮಕ್ಕಳು ಮತ್ತು ಗರ್ಭಿಣಿಯರನ್ನು ತಲುಪುವುದು ಇದರ ಉದ್ದೇಶವಾಗಿದೆ.
- ವಾರ್ಷಿಕವಾಗಿ 29 ದಶಲಕ್ಷ ಗರ್ಭಿಣಿಯರು ಮತ್ತು 25.4 ದಶಲಕ್ಷ ನವಜಾತ ಶಿಶುಗಳಿಗೆ ಉಚಿತ ಲಸಿಕೆ ನೀಡಲಾಗುತ್ತದೆ.
- ಗರ್ಭಕಂಠದ ಕ್ಯಾನ್ಸರ್ ನಿಂದ ರಕ್ಷಿಸಲು ಹೆಚ್.ಪಿ.ವಿ ಲಸಿಕೆಯನ್ನು 2026 ರಲ್ಲಿ ಪ್ರಾರಂಭಿಸಲಾಯಿತು.
- ಪೂರ್ಣ ರೋಗನಿರೋಧಕ ವ್ಯಾಪ್ತಿಯು 2015 ರಲ್ಲಿ ಶೇ62 ರಷ್ಟಿತ್ತು ಮತ್ತು ಜನವರಿ 2026 ರ ವೇಳೆಗೆ ಶೇ.98.4 ಕ್ಕೆ ಏರಿದೆ.
- ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ, ಭಾರತವು ಕೋವಿಡ್-19 ಲಸಿಕೆಯ 2 ಶತಕೋಟಿ ಡೋಸ್ ಗಳನ್ನು ನೀಡಲಾಗಿತ್ತು.



## ಸುಧಾರಿತ ಫಲಶ್ರುತಿ

- 1990 ರಿಂದ, ತಾಯಿಯ ಮರಣ ಪ್ರಮಾಣ (ಎಂಎಂಆರ್) ಶೇಕಡಾ 86 ರಷ್ಟು ಕುಸಿದಿದೆ - ಇದು ಜಾಗತಿಕ ಸರಾಸರಿ ಶೇಕಡಾ 48 ಕ್ಕಿಂತ ಹೆಚ್ಚಾಗಿದೆ.
- ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಮರಣ ಪ್ರಮಾಣದಲ್ಲಿ ಶೇಕಡಾ 78 ರಷ್ಟು ಕುಸಿತ ದಾಖಲಾಗಿದೆ - ಇದು ಜಾಗತಿಕ ಸರಾಸರಿ 61 ಪ್ರತಿಶತವನ್ನು ಮೀರಿದೆ.
- ನವಜಾತ ಶಿಶುಗಳ ಮರಣ ಪ್ರಮಾಣವು ಶೇಕಡಾ 70 ರಷ್ಟು ಕಡಿಮೆಯಾಗಿದೆ, ಆದರೆ ಜಾಗತಿಕ ಕುಸಿತವು ಶೇಕಡಾ 54 ರಷ್ಟಿದೆ.
- ಶಿಶು ಮರಣ ಪ್ರಮಾಣವು ಕಳೆದ ದಶಕದಲ್ಲಿ ಶೇಕಡಾ 37 ಕ್ಕಿಂತ ಹೆಚ್ಚು ಕುಸಿತವನ್ನು ದಾಖಲಿಸಿದೆ, ಇದು 2013 ರಲ್ಲಿ ಪ್ರತಿ 1,000 ಜೀವಂತ ಜನನಗಳಿಗೆ 40 ಸಾವುಗಳಿಂದ 2023 ರಲ್ಲಿ 25 ಕ್ಕೆ ಇಳಿದಿದೆ.



## ಸಾಂಸ್ಥಿಕ ಹೆರಿಗೆಗಳು

| ಗ್ರಾಮೀಣ ಪ್ರದೇಶಗಳು | | ನಗರ ಪ್ರದೇಶಗಳು | |
|---|---|---|---|
| 90.5% | 95.6% | 96.1% | 97.8% |
| 2017-18ನೇ ಸಾಲಿನಲ್ಲಿ | 2025 ರಲ್ಲಿ | 2017-18ನೇ ಸಾಲಿನಲ್ಲಿ | 2025 ರಲ್ಲಿ |

## ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂ-ಜೆಎವೈ)

- ಸೆಪ್ಟೆಂಬರ್ 23, 2018ರಂದು ಪ್ರಾರಂಭವಾಯಿತು (ಎಬಿ-ಪಿಎಂಜೆಎವೈ). ಇದು ವಿಶ್ವದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ಯೋಜನೆಯಾಗಿದೆ.
- ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ಮತ್ತು 70 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ನಾಗರಿಕರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ವರ್ಷಕ್ಕೆ 5 ಲಕ್ಷ ರೂ.ಗಳವರೆಗೆ ಆರೋಗ್ಯ ರಕ್ಷಣೆ.

**12** ಕೋಟಿ+ ಜನರು ಚಿಕಿತ್ಸೆ ಪಡೆದಿದ್ದಾರೆ.

**36,038** ಆಸ್ಪತ್ರೆಗಳು ಈ ಯೋಜನೆಯಡಿ ನೋಂದಾಯಿತವಾಗಿವೆ

**43.93** ಕೋಟಿ+ ಆಯುಷ್ಮಾನ್ ಕಾರ್ಡ್ ಗಳನ್ನು ನೀಡಲಾಗಿದೆ




## ಆಯುಷ್ಮಾನ್ ಆರೋಗ್ಯ ಮಂದಿರಗಳು

**1,84,235** ಆಯುಷ್ಮಾನ್ ಆರೋಗ್ಯ ಮಂದಿರಗಳು (ಫೆಬ್ರವರಿ 27, 2026 ರಂತೆ) ಕಾರ್ಯನಿರ್ವಹಿಸುತ್ತಿವೆ

**42.6** ಕೋಟಿ+ ಜನರು ಟೆಲಿ ಸಮಾಲೋಚನೆಗಳನ್ನು ಪಡೆದಿದ್ದಾರೆ (ಡಿಸೆಂಬರ್ 31, 2025 ರಲ್ಲಿದ್ದಂತೆ)





## ವೈದ್ಯಕೀಯ ಪ್ರವಾಸೋದ್ಯಮ

- 2025 ರಲ್ಲಿ, 507,244 ವಿದೇಶಿ ಪ್ರಜೆಗಳು ನಿರ್ದಿಷ್ಟವಾಗಿ ವೈದ್ಯಕೀಯ ಚಿಕಿತ್ಸೆಗಾಗಿ ಆಗಮಿಸಿದ್ದರು.
- ವೈದ್ಯಕೀಯ ಪ್ರವಾಸೋದ್ಯಮ ಮಾರುಕಟ್ಟೆಯು 16.2 ರ ವೇಳೆಗೆ 2030 ಶತಕೋಟಿ ಡಾಲರ್ ಗೆ ಬೆಳೆಯುವ ನಿರೀಕ್ಷೆಯಿದೆ.
- ಇ-ಮೆಡಿಕಲ್ ವೀಸಾ ಮತ್ತು ಇ-ಮೆಡಿಕಲ್ ಅಟೆಂಡೆಂಟ್ ವೀಸಾ ಸೌಲಭ್ಯಗಳನ್ನು 172 ದೇಶಗಳಿಗೆ ವಿಸ್ತರಿಸಲಾಗಿದೆ.

## ವೈದ್ಯಕೀಯ ಪ್ರವಾಸೋದ್ಯಮ ಸೂಚ್ಯಂಕ 2020-21 ರ ಪ್ರಕಾರ...

- ಅಗ್ರ 46 ವೈದ್ಯಕೀಯ ಪ್ರವಾಸೋದ್ಯಮ ತಾಣಗಳಲ್ಲಿ ಭಾರತವು ಜಾಗತಿಕವಾಗಿ 10ನೇ ಸ್ಥಾನದಲ್ಲಿದೆ.
- ವಿಶ್ವದ ಅಗ್ರ 20 ಯೋಗಕ್ಷೇಮ ಪ್ರವಾಸೋದ್ಯಮ ಮಾರುಕಟ್ಟೆಗಳಲ್ಲಿ 12ನೇ ಸ್ಥಾನದಲ್ಲಿದೆ.
- ಏಷ್ಯಾ-ಪೆಸಿಫಿಕ್ ಪ್ರದೇಶದ ಅಗ್ರ 10 ಆರೋಗ್ಯ ತಾಣಗಳಲ್ಲಿ 5 ನೇ ಸ್ಥಾನದಲ್ಲಿದೆ.

## ಕೈಗೆಟುಕುವ ಮತ್ತು ಗುಣಮಟ್ಟದ ಔಷಧಗಳು

ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ (ಪಿಎಂಬಿಜೆಪಿ) ಮೂಲಕ ಜನೌಷಧಿ ಕೇಂದ್ರಗಳಲ್ಲಿ

**19,200** ಗುಣಮಟ್ಟದ ಜೆನೆರಿಕ್ ಔಷಧಿಗಳು ಕೈಗೆಟುಕುವ ದರದಲ್ಲಿ ಲಭ್ಯವಿವೆ.

- ಈ ಕೇಂದ್ರಗಳಲ್ಲಿ 2,100 ಕ್ಕೂ ಹೆಚ್ಚು ಔಷಧಿಗಳು ಮತ್ತು 315 ಶಸ್ತ್ರಚಿಕಿತ್ಸಾ ಉತ್ಪನ್ನಗಳು ಲಭ್ಯವಿದ್ದು, ಮಾರುಕಟ್ಟೆ ಬೆಲೆಗಿಂತ ಶೇ.50-90 ರಷ್ಟು ಕಡಿಮೆ ದರದಲ್ಲಿ ಮಾರಾಟವಾಗುತ್ತವೆ.

ಸುಮಾರು **40,000** ಕೋಟಿ ರೂ. ಉಳಿತಾಯ ಕೈಗೆಟುಕುವ ದರದಲ್ಲಿ ಔಷಧಿಗಳ ಲಭ್ಯತೆಯಿಂದಾಗಿ ಸಾಮಾನ್ಯ ಜನರಿಗೆ ಆಗಿದೆ.



## ತಗ್ಗಿದ ಆರ್ಥಿಕ ಹೊರೆ

- ಆರೋಗ್ಯ ಚಿಕಿತ್ಸೆಯ ವೆಚ್ಚವು 2014-15 ರಲ್ಲಿದ್ದ ಶೇ.62.6 ರಿಂದ 2020-21 ರಲ್ಲಿ ಶೇ.39.4 ಕ್ಕೆ ಇಳಿದಿದೆ. ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಈ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.



## ರಾಷ್ಟ್ರೀಯ ಆರೋಗ್ಯ ನೀತಿ, 2017

- ಮಾರ್ಚ್ 15, 2017 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ರಾಷ್ಟ್ರೀಯ ಆರೋಗ್ಯ ನೀತಿ, 2017ಕ್ಕೆ ಅನುಮೋದನೆ ನೀಡಿತು. ಸಮಗ್ರ ಆರೋಗ್ಯ ನೀತಿಯ ಮೂಲಕ ಆರೋಗ್ಯಕ್ಕೆ ಸಾರ್ವತ್ರಿಕ ಪ್ರವೇಶ ಮತ್ತು ಯಾವುದೇ ಆರ್ಥಿಕ ಸಂಕಷ್ಟವಿಲ್ಲದೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ.

## ಮೈಲಿಗಲ್ಲುಗಳು

- 2014ರಲ್ಲಿ ಭಾರತವನ್ನು ಪೋಲಿಯೊ ಮುಕ್ತ ಎಂದು ಘೋಷಿಸಲಾಗಿತ್ತು.
- 2015 ರಲ್ಲಿ ನವಜಾತ ಧನುರ್ವಾಯುವಿನ ನಿರ್ಮೂಲನೆ.
- 2024 ರಲ್ಲಿ, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್ಒ) ಭಾರತವನ್ನು ಟ್ರಾಕೋಮಾ ಮುಕ್ತ ಎಂದು ಘೋಷಿಸಿತು.
- ಭಾರತವು ಮುಂದಿನ ದಿನಗಳಲ್ಲಿ ಕಾಲಾ-ಅಜಾರ್ ನಿರ್ಮೂಲನೆಯತ್ತ ಸಾಗುತ್ತಿದೆ.





ಮುಖಪುಟ ಲೇಖನ

12 ವರ್ಷಗಳ ವಿಕಾಸ ಯಾತ್ರೆ

# ಸಬಲೀಕರಣದ ನಿರಂತರ ಪ್ರಯಾಣ

## ಪ್ರತಿಯೊಂದು ಕ್ಷಣದಲ್ಲೂ ಅಭಿವೃದ್ಧಿ, ಪ್ರತಿಯೊಂದು ತಿರುವಿನಲ್ಲೂ ಹೊಸ ಸಾಧ್ಯತೆಗಳು

*ಪ್ರಗತಿ ಮತ್ತು ವೈಭವದ ಹಾದಿಯಲ್ಲಿ ಸಾಗುವ ಮುನ್ನ, ದೀರ್ಘಕಾಲದಿಂದ ನಿರ್ಲಕ್ಷ್ಯಕ್ಕೆ ಹಾಗೂ ಅಲಕ್ಷ್ಯಕ್ಕೆ ಒಳಗಾಗಿದ್ದ ಸಮಾಜದ ಆ ವರ್ಗಗಳಿಗೆ ವಿಶೇಷ ಗಮನ ಹರಿಸುವುದು ಅತ್ಯಗತ್ಯವಾಗಿತ್ತು. ಆದಾಗ್ಯೂ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ವರ್ಗಗಳನ್ನು ಕೇವಲ ಗುರುತಿಸಲಿಲ್ಲ; ಬದಲಿಗೆ ಅವರನ್ನು ಗೌರವಿಸಿದರು. ಕೇಂದ್ರ ಸರ್ಕಾರದ ಎಲ್ಲಾ ನೀತಿಗಳು ಮತ್ತು ಯೋಜನೆಗಳಲ್ಲಿ ವಂಚಿತರಿಗೆ ಅತ್ಯುನ್ನತ ಆದ್ಯತೆಯನ್ನು ನೀಡಲಾಯಿತು. "ಎಲ್ಲಿ ಮಹಿಳೆಯರನ್ನು ಗೌರವಿಸಲಾಗುತ್ತದೆಯೋ, ಅಲ್ಲಿ ದೇವತೆಗಳು ಸಂತೋಷದಿಂದ ಇರುತ್ತಾರೆ; ಆದರೆ ಎಲ್ಲಿ ಅವರನ್ನು ಗೌರವಿಸುವುದಿಲ್ಲವೋ, ಅಲ್ಲಿ ಎಲ್ಲಾ ಕಾರ್ಯಗಳೂ ನಿಷ್ಫಲವಾಗುತ್ತವೆ." ಈ ಪ್ರಾಚೀನ ಗಾದೆಯು ಮಹಿಳಾ ನೇತೃತ್ವದ ಅಭಿವೃದ್ಧಿಗೆ ಮಾರ್ಗದರ್ಶಿ ಮಂತ್ರವಾಯಿತು; ಪರಿಣಾಮವಾಗಿ, ಕಳೆದ 12 ವರ್ಷಗಳಲ್ಲಿ ನಾರಿ ಶಕ್ತಿಯು ಪ್ರತಿಯೊಂದು ಕ್ಷೇತ್ರದಲ್ಲೂ ಅತ್ಯುತ್ತಮ ಸಾಧನೆ ಮಾಡಿದೆ. ಅದೇ ರೀತಿ, ಯುವಜನರಿಗೆ ಸಮರ್ಪಿತವಾದ 'ವಿಕಸಿತ ಭಾರತ'ದ ಮಂತ್ರವಾದ—"ಇದೇ ಸಮಯ; ಇದುವೇ ಸರಿಯಾದ ಸಮಯ; ಇದು ಭಾರತದ ಅಮೂಲ್ಯವಾದ ಸಮಯ"—ಎಂಬ ಕರೆ, ಭಾರತದ ಯುವ ಪೀಳಿಗೆಯು ತಮ್ಮ ಆಕಾಂಕ್ಷೆಗಳಿಗೆ ಹೊಸ ರೆಕ್ಕೆಗಳನ್ನು ನೀಡಲು ಸಿದ್ಧವಾಗಿದೆ ಮತ್ತು ಸನ್ನದ್ಧವಾಗಿದೆ ಎಂಬುದಕ್ಕೆ ಬಲವಾದ ಸಾಕ್ಷಿಯಾಗಿದೆ. ಇಂದು, ಯುವ ಶಕ್ತಿಯ ಸಾಮರ್ಥ್ಯಕ್ಕೆ ಹೊಸ ಗುರುತು ಸಿಕ್ಕಿರುವುದರಿಂದ, ನವ ಭಾರತದ 'ಅಮೃತ ಪೀಳಿಗೆಯು' ಭಾರತದ ಜ್ಞಾನ, ವಿಜ್ಞಾನ ಮತ್ತು ಸಾರ್ವಕಾಲಿಕ ಸಾಧನೆಗಳ ಸಂಕೇತವಾಗಿ ಹೊರಹೊಮ್ಮಿದೆ. ಕಳೆದ 12 ವರ್ಷಗಳು ಒಂದು ಯುಗವನ್ನು—ವಂಚಿತರು, ಮಹಿಳೆಯರು, ಯುವಕರು ಮತ್ತು ರೈತರ ಸಬಲೀಕರಣಕ್ಕಾಗಿ ಮುಡಿಪಾದ ಒಂದು ವಿಶಿಷ್ಟ ಕಾಲಘಟ್ಟವನ್ನು ಗುರುತಿಸಿವೆ ಎಂದು ಹೇಳಿದರೆ ಅದು ಯಾವುದೇ ಅತಿಶಯೋಕ್ತಿಯಾಗಲಾರದು. ಸಂವೇದನಾಶೀಲ ಮನಸ್ಥಿತಿ ಮತ್ತು ಅಂತರ್ಗತ ದೃಷ್ಟಿಕೋನದೊಂದಿಗೆ, ನವ ಭಾರತದ ಹೊಸ ನಾಯಕತ್ವವು, ಕಳೆದ 12 ವರ್ಷಗಳಲ್ಲಿ ಸಮಾಜದ ಪ್ರತಿಯೊಂದು ವರ್ಗವನ್ನು ಮತ್ತು ಪ್ರತಿಯೊಂದು ಪ್ರದೇಶವನ್ನು ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಮಾಡಿದೆ ಮತ್ತು ಈ ಮೂಲಕ ಸ್ವರ್ಣಿಮ ಭಾರತದ ಕಡೆಗಿನ ಪ್ರಯಾಣವು ಪ್ರಾರಂಭವಾಗಿದೆ.*

# ಭಾರತ: ಆರೋಗ್ಯ ಮತ್ತು ಸಮೃದ್ಧಿಯ ಕಡೆಗೆ

*"ನಾರಿ ತೂ ನಾರಾಯಣಿ, ತುಮ್ಸೇ ಹೀ ಸಾಮರ್ಥ್ಯ ಹೈ, ತುಮ್ಹೀ ಹೋ ರಾಷ್ಟ್ರಶಕ್ತಿ" (ನಾರಿಯೇ ನೀನು ನಾರಾಯಣಿ, ನಿನ್ನಿಂದಲೇ ಸಾಮರ್ಥ್ಯ, ನೀನೇ ರಾಷ್ಟ್ರದ ಶಕ್ತಿ). ಇದೇ ಸಂಕಲ್ಪದೊಂದಿಗೆ, ನವ ಭಾರತವು ಶ್ರೇಷ್ಠತೆಯ ಹೊಸ ಅಧ್ಯಾಯಗಳನ್ನು ಬರೆಯುತ್ತಿದೆ. ನಾರಿ ಶಕ್ತಿಯಿಲ್ಲದೆ ಯಾವುದೇ ರಾಷ್ಟ್ರದ ಸಮೃದ್ಧಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪರಿಣಾಮವಾಗಿ, ಕಳೆದ 12 ವರ್ಷಗಳಲ್ಲಿ, ರಾಷ್ಟ್ರೀಯ ನೀತಿಯನ್ನು ಮುನ್ನಡೆಸುವ ದೃಷ್ಟಿಕೋನವು ಕೇವಲ ಮಹಿಳೆಯರ ಅಭ್ಯುದಯದಿಂದ ನಾರಿ ಶಕ್ತಿಯ ನೇತೃತ್ವದ ಅಭಿವೃದ್ಧಿಯನ್ನು ಉತ್ತೇಜಿಸುವ ಕಡೆಗೆ ಬದಲಾಗಿದೆ. ಶಿಕ್ಷಣ, ಆರೋಗ್ಯ, ಆರ್ಥಿಕ ಸಮೃದ್ಧಿ ಮತ್ತು ನಾಯಕತ್ವದ ಅವಕಾಶಗಳಾದ್ಯಂತ ಮಹಿಳೆಯರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿರುವ ಹಲವಾರು ಉಪಕ್ರಮಗಳು ಈ ನಿಟ್ಟಿನಲ್ಲಿ ಮೈಲಿಗಲ್ಲುಗಳಾಗಿ ಸಾಬೀತಾಗಿವೆ. ಈಗ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಬದ್ಧವಾಗಿದೆ.*

## ಮಹಿಳಾ ಸಬಲೀಕರಣದ ಕಡೆಗೆ ಹೆಜ್ಜೆಗಳು

ಹೊಸ ಸಂಸತ್ ಭವನದಲ್ಲಿ 'ನಾರಿ ಶಕ್ತಿ ವಂದನ ಅಧಿನಿಯಮ'ವನ್ನು ಜಾರಿಗೆ ತರುವ ಮೂಲಕ **2023** ರಲ್ಲಿ ಒಂದು ಪ್ರಮುಖ ಮೊದಲ ಹೆಜ್ಜೆಯನ್ನು ಇಡಲಾಯಿತು.



ಇಂದು ಭಾರತದಲ್ಲಿ 14 ಲಕ್ಷಕ್ಕೂ ಹೆಚ್ಚು ಮಹಿಳೆಯರು ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು 21 ರಾಜ್ಯಗಳಲ್ಲಿ, ಪಂಚಾಯತ್‌ಗಳಲ್ಲಿ ಅವರ ಭಾಗವಹಿಸುವಿಕೆ ಸುಮಾರು ಶೇಕಡಾ 50 ರಷ್ಟನ್ನು ತಲುಪಿದೆ.



- ಕಳೆದ 12 ವರ್ಷಗಳಲ್ಲಿ, 'ಪಿಎಂ ಆವಾಸ್ ಯೋಜನೆ' ಅಡಿಯಲ್ಲಿ 3 ಕೋಟಿಗೂ ಹೆಚ್ಚು ಮಹಿಳೆಯರು ಮನೆ ಮಾಲೀಕರಾಗಿದ್ದಾರೆ.
- ಪಿಎಂ ಆವಾಸ್ ಯೋಜನೆ ಅಡಿಯಲ್ಲಿ ಹಂಚಿಕೆ ಮಾಡಲಾದ ಮನೆಗಳಲ್ಲಿ ಶೇಕಡಾ 70 ಕ್ಕಿಂತ ಹೆಚ್ಚು ಮನೆಗಳು ಕೇವಲ ಮಹಿಳೆಯರ ಹೆಸರಿನಲ್ಲಿ ಅಥವಾ ಜಂಟಿಯಾಗಿ ನೋಂದಾಯಿಸಲ್ಪಟ್ಟಿವೆ.
- 'ಸ್ಟ್ಯಾಂಡ್-ಅಪ್ ಇಂಡಿಯಾ' ಯೋಜನೆಯಡಿ ವಿತರಿಸಲಾದ ಸಾಲಗಳಲ್ಲಿ ಶೇಕಡಾ 75 ರಷ್ಟು ಸಾಲಗಳನ್ನು ಮಹಿಳೆಯರಿಗೆ ನೀಡಲಾಗಿದೆ. ಇದಲ್ಲದೆ, 'ಜನ್ ಧನ್' ಬ್ಯಾಂಕ್ ಖಾತೆಗಳಲ್ಲಿ ಮಹಿಳೆಯರು ಶೇಕಡಾ 55 ರಷ್ಟು ಪಾಲನ್ನು ಹೊಂದಿದ್ದಾರೆ.

'ಮುದ್ರಾ ಯೋಜನೆ' ಅಡಿಯಲ್ಲಿ ಮಂಜೂರಾದ ಸಾಲಗಳಲ್ಲಿ **ಶೇಕಡಾ 70 ರಷ್ಟು** ಸಾಲಗಳನ್ನು ಮಹಿಳೆಯರಿಗೆ ನೀಡಲಾಗಿದೆ.

- ಮಹಿಳೆಯರಿಗೆ ಹೆರಿಗೆ ರಜೆಯನ್ನು 26 ವಾರಗಳವರೆಗೆ ವಿಸ್ತರಿಸಲಾಗಿದೆ.
- ಕಳೆದ 12 ವರ್ಷಗಳಲ್ಲಿ, 10 ಕೋಟಿಮಹಿಳೆಯರು ಸ್ವಸಹಾಯ ಗುಂಪುಗಳಿಗೆ ಸೇರಿದ್ದಾರೆ.
- ಗ್ರಾಮೀಣ ಆರ್ಥಿಕತೆಯನ್ನು ವೇಗಗೊಳಿಸಲು, ಸರ್ಕಾರವು 6 ಕೋಟಿ ಮಹಿಳೆಯರನ್ನು 'ಲಕ್ಷಾಧಿಪತಿ ದೀದಿ'ಯರನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿದೆ. ಇವುಗಳಲ್ಲಿ 3 ಕೋಟಿಗೂ ಹೆಚ್ಚು ಗ್ರಾಮೀಣ ಮಹಿಳೆಯರು ಈಗಾಗಲೇ 'ಲಕ್ಷಾಧಿಪತಿ ದೀದಿ' ಸ್ಥಾನಮಾನವನ್ನು ಸಾಧಿಸಿದ್ದಾರೆ.
- ಸೆಪ್ಟೆಂಬರ್ 2025 ರಲ್ಲಿ ಪ್ರಾರಂಭಿಸಲಾದ 'ಸ್ವಸ್ಥ ನಾರಿ, ಸಶಕ್ತ ಪರಿವಾರ' ಅಭಿಯಾನದ ಅಡಿಯಲ್ಲಿ ಸುಮಾರು 7 ಕೋಟಿ ಮಹಿಳೆಯರಿಗೆ ಆರೋಗ್ಯ ತಪಾಸಣೆ ನಡೆಸಲಾಗಿದೆ.



- ಲಸಿಕೆ ಪಡೆಯದ ಮಕ್ಕಳು ಮತ್ತು ಗರ್ಭಿಣಿಯರನ್ನು ತಲುಪಲು ಸರ್ಕಾರವು 2015 ರಲ್ಲಿ 'ಮಿಷನ್ ಇಂದ್ರಧನುಷ್' ಕಾರ್ಯಕ್ರಮವನ್ನು ಪ್ರಾರಂಭಿಸಿತು.
- ಜನವರಿ 2025ರಲ್ಲಿ ಮಿಷನ್ ಶಕ್ತಿ ಪೋರ್ಟಲ್ (https://missionshakti.wcd.gov.in/) ಪ್ರಾರಂಭವಾದ ನಂತರ, ಮಾರ್ಚ್ 23, 2026 ರ ವೇಳೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು 2,428 ಸಂರಕ್ಷಣಾ ಅಧಿಕಾರಿಗಳ ವಿವರಗಳನ್ನು ಪೋರ್ಟಲ್ ನಲ್ಲಿ ನವೀಕರಿಸಿವೆ.



### ಮಹಿಳಾ ಸಬಲೀಕರಣ

**ಶೇಕಡಾ 48 ರಷ್ಟು** ನವೋದ್ಯಮಗಳು ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕರನ್ನು ಹೊಂದಿವೆ.

- ಭಾರತದ ಮಹಿಳಾ ಕ್ರಿಕೆಟ್ ತಂಡ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿದೆ. ಅದೇ ರೀತಿ ಅಂಧ ಮಹಿಳೆಯರ ಕ್ರಿಕೆಟ್ ತಂಡ ಕೂಡ ವಿಶ್ವಕಪ್ ಗೆದ್ದುಕೊಂಡಿದೆ.
- ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್ ಡಿ ಎ) ಇಂದ ಮಹಿಳಾ ಕೆಡೆಟ್ ಗಳ ಮೊದಲ ಬ್ಯಾಚ್ ತೇರ್ಗಡೆಯಾಗಿದೆ.

**ಮಹಿಳಾ ಕಾರ್ಮಿಕರ ಸಂಖ್ಯೆಯ ಅನುಪಾತ**

| 2017-18 | 2025 |
|---|---|
| 22% | 39% |

ಪಿ ಎಚ್ ಡಿ ಕಾರ್ಯಕ್ರಮಗಳಲ್ಲಿ ಮಹಿಳಾ ಸಂಶೋಧಕರ ದಾಖಲಾತಿಯು ದುಪ್ಪಟ್ಟಿಗಿಂತ ಹೆಚ್ಚಾಗಿದ್ದು, ಶೇಕಡಾ 135.6 ರಷ್ಟು ಅಸಾಧಾರಣ ಬೆಳವಣಿಗೆಯನ್ನು ದಾಖಲಿಸಿದೆ (2014-15 ರಿಂದ 2022-23 ರವರೆಗೆ) - ಇದರ ಮೂಲಕ 64,724 ಹೆಚ್ಚುವರಿ ಮಹಿಳಾ ಸಂಶೋಧಕರು ಸೇರ್ಪಡೆಗೊಂಡಿದ್ದಾರೆ.

ಗಣಿತ ಮತ್ತು ವಿಜ್ಞಾನ, ವಿಶೇಷವಾಗಿ STEM (ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ) ಶಿಕ್ಷಣವನ್ನು ಪಡೆಯುವ ಹೆಣ್ಣುಮಕ್ಕಳ ಸಂಖ್ಯೆ



ಸುಮಾರು **43%** ಕ್ಕೆ ತಲುಪಿದೆ.

## ಉಜ್ವಲ ಯೋಜನೆ ಸ್ವಾಸ್ಥ್ಯದ ದಾರಿದೀಪ

ಮಾರ್ಚ್ 1, 2026ರ ಹೊತ್ತಿಗೆ ಪ್ರಧಾನಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ **10.57** ಕೋಟಿಗೂ ಹೆಚ್ಚು ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ.

ಸಾಂಪ್ರದಾಯಿಕ ಒಲೆಗಳನ್ನು ಉರಿಸಲು ಉರುವಲು ಸಂಗ್ರಹಿಸಲು ಈ ಹಿಂದೆ ವ್ಯಯಿಸುತ್ತಿದ್ದ ಸಮಯಕ್ಕೆ ಹೋಲಿಸಿದರೆ, ಮಹಿಳೆಯರು ಈಗ ದಿನಕ್ಕೆ 2 ರಿಂದ 3 ಗಂಟೆಗಳನ್ನು ಉಳಿಸುತ್ತಿದ್ದಾರೆ. ಮಹಿಳೆಯರು ಈಗ ಈ ಸಮಯವನ್ನು ಆದಾಯ ತರುವಂತಹ ಚಟುವಟಿಕೆಗಳಿಗೆ ಅಥವಾ ತಮ್ಮ ಕುಟುಂಬದ ಆರೈಕೆಗಾಗಿ ಬಳಸಿಕೊಳ್ಳುತ್ತಿದ್ದಾರೆ.



## ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ

ಜನವರಿ 22, 2015 ರಂದು ಹರಿಯಾಣದ ಪಾಣಿಪತ್ ನಲ್ಲಿ ಪ್ರಾರಂಭಿಸಲಾದ ಬೇಟಿ ಬಚಾವೋ ಬೇಟಿ ಪಡಾವೋ (ಬಿಬಿಬಿಪಿ) ಯೋಜನೆಯು ಹತ್ತು ವರ್ಷಗಳನ್ನು ಪೂರ್ಣಗೊಳಿಸಿದೆ.

**ರಾಷ್ಟ್ರ ಮಟ್ಟದಲ್ಲಿ ಜನನದ ಸಮಯದ ಲಿಂಗಾನುಪಾತ ಸುಧಾರಣೆ**



| 2014-15 | 2024-25 |
|---|---|
| 918 | 929 |

**ಮಾಧ್ಯಮಿಕ ಶಾಲಾ ಹಂತದಲ್ಲಿ ಹೆಣ್ಣುಮಕ್ಕಳ ಒಟ್ಟು ದಾಖಲಾತಿ ಅನುಪಾತ ಏರಿಕೆ**

| ವರ್ಷ | ಅನುಪಾತ |
|---|---|
| 2014-15 | 75.51% |
| 2024-25 | 80.2% |



## ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ

**8,812** ನೋಂದಾಯಿತ ಸ್ವಯಂಸೇವಕರು

**22,349** ಪಿ ಎಂ ಎಸ್ ಎಂ ಎ ಸೇವೆಗಳನ್ನು ಒದಗಿಸುವ ಸೌಲಭ್ಯಗಳ ಸಂಖ್ಯೆ

## ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ

ಈ ಯೋಜನೆಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಮೊದಲ ಮಗುವಿಗೆ ₹5,000 ಮಾತೃತ್ವ ಸೌಲಭ್ಯವನ್ನು (ಜನನಿ ಸುರಕ್ಷಾ ಯೋಜನೆಯ ಪ್ರೋತ್ಸಾಹಕದೊಂದಿಗೆ ಸರಾಸರಿ ₹6,000) ಮತ್ತು ಎರಡನೇ ಮಗುವಿಗೆ (ಹೆಣ್ಣು ಮಗುವಾಗಿದ್ದರೆ) ₹6,000 ಪ್ರೋತ್ಸಾಹ ಧನವನ್ನು ಒದಗಿಸುತ್ತದೆ.



**4.28** ಕೋಟಿ ಮಹಿಳೆಯರು ನೋಂದಾಯಿಸಿ ಕೊಂಡಿದ್ದಾರೆ.

**4.92** ಕೋಟಿ ಮಹಿಳೆಯರು ಪ್ರಯೋಜನಗಳನ್ನು ಪಡೆದಿದ್ದಾರೆ.

ಒಟ್ಟು **₹20,150** ಕೋಟಿ ಹಣವನ್ನು ವಿತರಿಸಲಾಗಿದೆ.

## ಸುಕನ್ಯಾ ಸಮೃದ್ಧಿ ಯೋಜನೆ: ಹೆಣ್ಣು ಮಕ್ಕಳ ಸಬಲೀಕರಣ

- ಸುಕನ್ಯಾ ಸಮೃದ್ಧಿ ಯೋಜನೆಯನ್ನು ಸರ್ಕಾರದ 'ಬೇಟಿ ಬಚಾವೋ, ಬೇಟಿ ಪಡಾವೋ' ಅಭಿಯಾನದ ಅಡಿಯಲ್ಲಿ ಜನವರಿ 22, 2015 ರಂದು ಪ್ರಾರಂಭಿಸಲಾಯಿತು, ಇದು 8.2% ರಷ್ಟು ಬಡ್ಡಿದರವನ್ನು ಹೊಂದಿದೆ.
- ಇದು ಪ್ರಾರಂಭವಾದಾಗಿನಿಂದ, 4.6 ಕೋಟಿಗೂ ಹೆಚ್ಚು ಖಾತೆಗಳನ್ನು ತೆರೆಯಲಾಗಿದೆ ಮತ್ತು ಒಟ್ಟು ಜಮಾ ಆದ ಮೊತ್ತವು ₹3.33 ಲಕ್ಷ ಕೋಟಿ ಮೀರಿದೆ.

**"ಇಂದು, ವಿಕಸಿತ ಭಾರತದ ಕಡೆಗಿನ ನಮ್ಮ ಪ್ರಯಾಣದಲ್ಲಿ ಮಹಿಳೆಯರ ಪಾತ್ರವು ಇನ್ನಷ್ಟು ಪ್ರಮುಖವಾಗಿದೆ. 2014 ರಲ್ಲಿ ದೇಶದ ಜನರು ನನಗೆ ಸೇವೆ ಮಾಡಲು ಅವಕಾಶ ನೀಡಿದ್ದಕ್ಕಾಗಿ ನಾನು ಸಂತೋಷಗೊಂಡಿದ್ದೇನೆ ಮತ್ತು ಅಂದಿನಿಂದ ಇಂದಿನವರೆಗೆ, ನಮ್ಮ ಸರ್ಕಾರವು ಮಹಿಳೆಯರ ಜೀವನ ಚಕ್ರದ ಪ್ರತಿಯೊಂದು ಹಂತಕ್ಕೂ ಯೋಜನೆಗಳನ್ನು ರೂಪಿಸಿದೆ ಮತ್ತು ಅವುಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.**

*ನರೇಂದ್ರ ಮೋದಿ, ಪ್ರಧಾನಮಂತ್ರಿ*


# ಭಾರತದ ಧ್ವಜವನ್ನು ಎತ್ತರಕ್ಕೆ ಹಾರಿಸುತ್ತಿರುವ ಮುಂಚೂಣಿಯ ನಾಯಕರು

*"ಇದೇ ಸಮಯ; ಇದುವೇ ಸರಿಯಾದ ಸಮಯ; ಇದು ಭಾರತದ ಅಮೂಲ್ಯವಾದ ಸಮಯ..." ವಿಕಸಿತ ಭಾರತದ ಯುವಜನರಿಗೆ ಸಮರ್ಪಿತವಾದ ಈ ಮಂತ್ರವು, ಭಾರತದ ಯುವ ಪೀಳಿಗೆಯು ತಮ್ಮ ಆಕಾಂಕ್ಷೆಗಳಿಗೆ ಹೊಸ ರೆಕ್ಕೆಗಳನ್ನು ನೀಡಲು ಸಿದ್ಧವಾಗಿದೆ ಎಂಬ ಉತ್ಸಾಹವನ್ನು ಪ್ರತಿಬಿಂಬಿಸುತ್ತದೆ. ಇದು ಭಾರತವು ವಿಶ್ವದಲ್ಲೇ ಅತ್ಯಂತ ಕಿರಿಯ (ಹೆಚ್ಚು ಯುವ ಜನಸಂಖ್ಯೆ ಹೊಂದಿದ) ರಾಷ್ಟ್ರವಾಗಿ ನಿಂತಿರುವ ಯುಗವಾಗಿದೆ. ಆದ್ದರಿಂದ, ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರದ ದೂರದರ್ಶಿ ದೃಷ್ಟಿಕೋನದ ಮೂಲಕ, ಯುವ ಶಕ್ತಿಯ ಸಾಮರ್ಥ್ಯಕ್ಕೆ ಹೊಸ ಗುರುತು ಸಿಕ್ಕಿದೆ ಮತ್ತು ಇದು ನವ ಭಾರತದ 'ಅಮೃತ ಪೀಳಿಗೆ'ಯ ಜ್ಞಾನ, ವಿಜ್ಞಾನ ಹಾಗೂ ಸಾರ್ವಕಾಲಿಕ ಸಾಧನೆಗಳ ಸಂಕೇತವಾಗಿ ಹೊರಹೊಮ್ಮಿದೆ.*

## ನವೋದ್ಯಮಗಳು

**2.23** ಲಕ್ಷಕ್ಕೂ ಹೆಚ್ಚು ನವೋದ್ಯಮಗಳನ್ನು ಸ್ಥಾಪಿಸಲಾಗಿದ್ದು, ಇವು 23.36 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿವೆ. ನಿಧಿ (ಫಂಡಿಂಗ್), ಸಾಲದ ನೆರವು ಮತ್ತು ಸಾರ್ವಜನಿಕ ಸಂಗ್ರಹಣೆಯಲ್ಲಿ ಬಲವಾದ ಬೆಳವಣಿಗೆ ಕಂಡುಬಂದಿದೆ.

- 2014 ರಲ್ಲಿ ಭಾರತದಲ್ಲಿ ಕೇವಲ 4 ಯೂನಿಕಾರ್ನ್ ಗಳು ಇದ್ದವು; ಇಂದು ದೇಶವು 127 ಸಕ್ರಿಯ ಯೂನಿಕಾರ್ನ್ ಗಳನ್ನು ಹೊಂದಿದೆ.



ಈ ಉಪಕ್ರಮವು ಪ್ರಾರಂಭವಾದಾಗಿನಿಂದ ಒಂದೇ ವರ್ಷದಲ್ಲಿ ನೀಡಲಾದ ಅತಿ ಹೆಚ್ಚು ಮಾನ್ಯತೆಗಳಲ್ಲಿ, 2025-26 ರ ಆರ್ಥಿಕ ವರ್ಷದಲ್ಲಿ ಸರ್ಕಾರದಿಂದ

**55,200** ನವೋದ್ಯಮಗಳನ್ನು ಮಾನ್ಯ ಮಾಡಲಾಗಿದೆ.

## ಪ್ರಧಾನಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)



11 ವರ್ಷಗಳ ಅವಧಿಯಲ್ಲಿ ಪಿಎಂಎಂವೈ ಅಡಿಯಲ್ಲಿ 577.9 ಮಿಲಿಯನ್ ಸಾಲಗಳ ಮೂಲಕ

**₹40.07**

ಲಕ್ಷ ಕೋಟಿಗೂ ಹೆಚ್ಚು ಹಣವನ್ನು ವಿತರಿಸಲಾಗಿದೆ. ಇದು ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಸಾಲ ವ್ಯವಸ್ಥೆಯನ್ನು ಗಮನಾರ್ಹವಾಗಿ ಬಲಪಡಿಸಿದೆ.

- ಮುದ್ರಾ ಯೋಜನೆಯು ಕಾರ್ಪೊರೇಟ್ ಅಲ್ಲದ ಮತ್ತು ಕೃಷಿಯೇತರ ಆದಾಯದ ಚಟುವಟಿಕೆಗಳಿಗಾಗಿ ₹20 ಲಕ್ಷದವರೆಗೆ ಭದ್ರತೆಯಿಲ್ಲದ ಸಾಂಸ್ಥಿಕ ಸಾಲವನ್ನು ಸುಲಭವಾಗಿ ಪಡೆಯಲು ಅನುಕೂಲ ಮಾಡಿಕೊಡುತ್ತದೆ.



## ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ

2014 ರಿಂದ ಪ್ರಸ್ತುತದವರೆಗೆ:

- ಐಐಟಿಗಳ ಸಂಖ್ಯೆ 16 ರಿಂದ 23 ಕ್ಕೆ ಏರಿಕೆಯಾಗಿದೆ.
- ಐಐಎಂಗಳ ಸಂಖ್ಯೆ 13 ರಿಂದ 21 ಕ್ಕೆ ಏರಿಕೆಯಾಗಿದೆ.




ಏಮ್ಸ್ ಗಳ ಸಂಖ್ಯೆ 7 ರಿಂದ **23** ಕ್ಕೆ ಏರಿಕೆಯಾಗಿದೆ.

- ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 818 ಕ್ಕೆ ಹೆಚ್ಚಾಗಿದೆ.
- ಜಾಂಜಿಬಾರ್ ಮತ್ತು ಅಬುಧಾಬಿಯಲ್ಲಿ ಐಐಟಿಗಳ ಅಂತಾರಾಷ್ಟ್ರೀಯ ಕ್ಯಾಂಪಸ್ ಗಳನ್ನು ಸ್ಥಾಪಿಸಲಾಗಿದೆ.

## ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ

ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ (ಪಿಎಂಕೆವಿವೈ) ಅಡಿಯಲ್ಲಿ 35 ಕ್ಕೂ ಹೆಚ್ಚು ವಲಯಗಳಲ್ಲಿ ಒಟ್ಟು

**1.64** ಕೋಟಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

ನಿರ್ಮಾಣ, ದೂರಸಂಪರ್ಕ ಮತ್ತು ಆರೋಗ್ಯ ಕ್ಷೇತ್ರಗಳ ಪಾತ್ರಗಳಿಗಾಗಿ, ಹಾಗೆಯೇ ವೃತ್ತಿ ಮತ್ತು ಶಿಕ್ಷಣ ಸಲಹೆಗಾರರ ಹುದ್ದೆಗಳಿಗಾಗಿ

**3,15,014**

ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.



ಮುಖಪುಟ ಲೇಖನ
12 ವರ್ಷಗಳ ವಿಕಾಸ ಯಾತ್ರೆ

## ಯುವ ಸಬಲೀಕರಣಕ್ಕಾಗಿ 12 ವರ್ಷಗಳ ಸಮರ್ಪಿತ ಕಾರ್ಯಸೇವೆ

ಉದ್ಯೋಗ ಮೇಳಗಳ ಮೂಲಕ

**12**

ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಖಚಿತಪಡಿಸಿಕೊಳ್ಳಲಾಗಿದೆ.



ಶಾಲೆಗಳಲ್ಲಿ

**10,000** ಕ್ಕೂ ಹೆಚ್ಚು ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಸ್ಥಾಪಿಸಲಾಗಿದ್ದು, ಇವು 11 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಿವೆ.



- ಮೂರು ದಶಕಗಳ ನಂತರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ನು ಜಾರಿಗೆ ತರಲಾಗಿದೆ.
- ಭಾರತವು ವಿಶ್ವದಲ್ಲೇ ಅತಿ ದೊಡ್ಡ ಯುವ ಜನಸಂಖ್ಯೆಯನ್ನು ಹೊಂದಿದ್ದು, ಅದರ ಸರಿಸುಮಾರು ಶೇಕಡಾ 65 ರಷ್ಟು ಜನರು 35 ವರ್ಷದೊಳಗಿನವರಾಗಿದ್ದಾರೆ.
- ರಾಷ್ಟ್ರೀಯ ಯುವ ಜನೋತ್ಸವ (ಎನ್ ವೈ ಎಫ್) 2026 ಅನ್ನು ನವದೆಹಲಿಯ ಭಾರತ ಮಂಟಪದಲ್ಲಿ 2026 ರ ಜನವರಿ 9 ರಿಂದ 12 ರವರೆಗೆ ಆಯೋಜಿಸಲಾಗಿತ್ತು.
- ಪಿಎಂ-ಶ್ರೀ (PM Schools for Rising India): ಇದು ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್ ಇ ಪಿ) ಅನುಗುಣವಾಗಿ ಶಾಲೆಗಳನ್ನು ಮಾದರಿ ಸಂಸ್ಥೆಗಳಾಗಿ ಆಧುನೀಕರಿಸುವ ಗುರಿಯನ್ನು ಹೊಂದಿರುವ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ.
- ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯನ್ನು 2025 ರ ಆಗಸ್ಟ್ 15 ರಂದು ಜಾರಿಗೆ ತರಲಾಯಿತು. ಈ ಯೋಜನೆಯು ಸರಿಸುಮಾರು 3.5 ಕೋಟಿ ಯುವಜನರಿಗೆ ಹೊಸ ಉದ್ಯೋಗಾವಕಾಶಗಳನ್ನು ಒದಗಿಸಲಿದೆ.


> **"ಭಾರತದ ಯುವಜನರು ಜಾಗತಿಕವಾಗಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ನಮ್ಮ ಯುವ ಶಕ್ತಿಯು ಕ್ರಿಯಾಶೀಲತೆ, ನಾವೀನ್ಯತೆ ಮತ್ತು ದೃಢಸಂಕಲ್ಪದೊಂದಿಗೆ ಗುರುತಿಸಿಕೊಂಡಿದೆ. ನಮ್ಮ ಯುವಜನತೆ ಸಾಟಿಯಿಲ್ಲದ ಶಕ್ತಿ ಮತ್ತು ದೃಢ ನಂಬಿಕೆಯೊಂದಿಗೆ ಭಾರತದ ಬೆಳವಣಿಗೆಯನ್ನು ಮುನ್ನಡೆಸಿದ್ದಾರೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

## ಖೇಲೋ ಇಂಡಿಯಾ

ಪ್ರಸ್ತುತ

**27,500** ಕ್ಕೂ ಹೆಚ್ಚು ಕ್ರೀಡಾಪಟುಗಳು ಖೇಲೋ ಇಂಡಿಯಾ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.






## ಅಗ್ನಿಪಥ್ ಯೋಜನೆ

- ಸರ್ಕಾರವು 2022 ರ ಜೂನ್ 15 ರಂದು ಅಗ್ನಿಪಥ್ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿ, ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಸಶಸ್ತ್ರ ಪಡೆಯ ಮೂರೂ ವಿಭಾಗಗಳಿಗೆ ಅಧಿಕಾರಿ ಶ್ರೇಣಿಗಿಂತ ಕೆಳಗಿನ ಹುದ್ದೆಗಳಲ್ಲಿ 'ಅಗ್ನಿವೀರರಾಗಿ' ನಾಲ್ಕು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ.

**17.5** ರಿಂದ 21 ವರ್ಷದೊಳಗಿನ ಯುವಕರನ್ನು ನಾಲ್ಕು ವರ್ಷಗಳ ಮಿಲಿಟರಿ ಸೇವೆಗಾಗಿ ಅಗ್ನಿವೀರರನ್ನಾಗಿ ನೇಮಿಸಿಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಮೊದಲ ಬ್ಯಾಚ್ ನಲ್ಲಿ ದಾಖಲಾದ

**46,000**

ಸಿಬ್ಬಂದಿ 2023 ರಲ್ಲಿ ತಮ್ಮ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ. ಅವರು ಶಿಸ್ತು, ನಾಯಕತ್ವ ಮತ್ತು ತಾಂತ್ರಿಕ ಕೌಶಲ್ಯಗಳಲ್ಲಿ ತರಬೇತಿಯನ್ನು ಪಡೆದಿದ್ದಾರೆ, ಇದರೊಂದಿಗೆ 'ಸೇವಾ ನಿಧಿ' ಪ್ಯಾಕೇಜ್ ಮತ್ತು ಸೇವೆಯ ನಂತರದ ಉದ್ಯೋಗದಲ್ಲಿ ಆದ್ಯತೆಯನ್ನು ಪಡೆದಿದ್ದಾರೆ.



# ವಂಚಿತರಿಗೆ ಆದ್ಯತೆ ನೀಡುವುದು - ಉತ್ತಮ ಆಡಳಿತದ ಹೆಗ್ಗುರುತು

*ಇಂದು, ದೇಶದಾದ್ಯಂತ ಸಮಾನತೆಯ ಭಾವನೆಯೊಂದಿಗೆ ಕೆಲಸ ಮಾಡಲಾಗುತ್ತಿದ್ದು, ಇದರ ಪರಿಣಾಮವಾಗಿ ಕಳೆದ 12 ವರ್ಷಗಳಲ್ಲಿ ದೊಡ್ಡ ಪ್ರಮಾಣದ ಫಲಾನುಭವಿಗಳ ವರ್ಗವೊಂದು ಹೊರಹೊಮ್ಮಿದೆ. 2014 ಕ್ಕಿಂತ ಮೊದಲು, ಸಮಾಜದ ಒಂದು ದೊಡ್ಡ ವರ್ಗವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿತ್ತು. ಆದಾಗ್ಯೂ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ ಅಧಿಕಾರಾವಧಿಯ ಆರಂಭದಿಂದಲೇ ವಂಚಿತರಿಗೆ ಆದ್ಯತೆ ನೀಡುವ ತತ್ವವನ್ನು ಅಳವಡಿಸಿಕೊಳ್ಳುವ ಮೂಲಕ ಕಾರ್ಯಪ್ರವೃತ್ತರಾದರು. ದಶಕಗಳಿಂದ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳ ಪ್ರಯೋಜನಗಳಿಂದ ವಂಚಿತರಾಗಿದ್ದ ಜನರನ್ನು ಸರ್ಕಾರವು ಮೊದಲ ಬಾರಿಗೆ ಸಕ್ರಿಯವಾಗಿ ತಲುಪಿತು. ಪ್ರಧಾನಿ ಮೋದಿಯವರು ಆಗಾಗ್ಗೆ ಹೇಳುವಂತೆ, "ಯಾರೂ ತಲುಪದವರನ್ನು ಮೋದಿ ತಲುಪುತ್ತಾರೆ". ಗೌರವಾನ್ವಿತ ಜೀವನವನ್ನು ಪಡೆದುಕೊಳ್ಳುವ ಮೂಲಕ, ಈ ವ್ಯಕ್ತಿಗಳು ಈಗ ರಾಷ್ಟ್ರದ ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡುತ್ತಿದ್ದಾರೆ.*

## ಬುಡಕಟ್ಟು ಪರಂಪರೆಯ ಉತ್ತೇಜನ



ಬುಡಕಟ್ಟು ವ್ಯವಹಾರಗಳ ಸಚಿವಾಲಯದಿಂದ **728** ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಇವುಗಳಲ್ಲಿ 428 ಶಾಲಾ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿದ್ದು, 249 ಪ್ರಸ್ತುತ ನಿರ್ಮಾಣ ಹಂತದಲ್ಲಿವೆ ಮತ್ತು 46 ಪೂರ್ವ ನಿರ್ಮಾಣ ಹಂತದಲ್ಲಿವೆ.

- ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮದಿನದ ನೆನಪಿಗಾಗಿ 2021 ರಲ್ಲಿ, ನವೆಂಬರ್ 15 ಅನ್ನು 'ಜನಜಾತೀಯ ಗೌರವ ದಿವಸ' (ಬುಡಕಟ್ಟು ಹೆಮ್ಮೆಯ ದಿನ) ಎಂದು ಘೋಷಿಸಲಾಯಿತು.



**11** ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯಗಳಿಗೆ ಅನುಮೋದನೆ ನೀಡಲಾಗಿದೆ. ಇಲ್ಲಿಯವರೆಗೆ, ಮೂರು ರಾಜ್ಯಗಳಲ್ಲಿ ಇಂತಹ ನಾಲ್ಕು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಲಾಗಿದೆ: ಒಂದು ಜಾರ್ಖಂಡ್ನಲ್ಲಿ, ಒಂದು ಛತ್ತೀಸಗಢದಲ್ಲಿ ಮತ್ತು ಎರಡು ಮಧ್ಯಪ್ರದೇಶದಲ್ಲಿ, ಉಳಿದ ಏಳು ವಸ್ತುಸಂಗ್ರಹಾಲಯಗಳ ಕೆಲಸ ಪ್ರಸ್ತುತ ನಡೆಯುತ್ತಿದೆ.

## ವಂಚಿತರಿಗೆ ಸೌಲಭ್ಯಗಳು & ಪ್ರಯೋಜನಗಳ ವಿಸ್ತರಣೆ

- ಮಾರ್ಚ್ 13, 2024 ರಂದು, ಪ್ರಧಾನಿ ಮೋದಿಯವರು 'ಪ್ರಧಾನಮಂತ್ರಿ ಸಾಮಾಜಿಕ ಉತ್ಥಾನ್ ಏವಂ ರೋಜಗಾರ್ ಆಧಾರಿತ್ ಜನಕಲ್ಯಾಣ್' (PM-SURAJ) ರಾಷ್ಟ್ರೀಯ ಪೋರ್ಟಲ್ ಅನ್ನು ಅನಾವರಣಗೊಳಿಸಿದರು. ಈ ಪೋರ್ಟಲ್ ಸಮಾಜದ ವಂಚಿತ ವರ್ಗಗಳಿಗೆ ಸಾಲದ ನೆರವು ನೀಡಲು ಆದ್ಯತೆ ನೀಡುವ ಸರ್ಕಾರದ ಬದ್ಧತೆಯನ್ನು ಸಂಕೇತಿಸುತ್ತದೆ.



ಪುನರ್ ರಚಿತ ಪಿಎಂ ಸ್ವನಿಧಿ ಯೋಜನೆಯಿಂದ **1.15** ಕೋಟಿ ಬೀದಿ ಬದಿ ವ್ಯಾಪಾರಿಗಳು ಪ್ರಯೋಜನ ಪಡೆಯಲಿದ್ದಾರೆ. ಈಗಾಗಲೇ 74.90 ಲಕ್ಷ ಫಲಾನುಭವಿಗಳಿಗೆ ಸಾಲ ವಿತರಿಸಲಾಗಿದ್ದು, ಸಾಲ ವಿತರಣೆಯ ಅವಧಿಯನ್ನು ಮಾರ್ಚ್ 31, 2030 ರವರೆಗೆ ವಿಸ್ತರಿಸಲಾಗಿದೆ.

- ದೃಢವಾದ ನೀತಿ ಹಸ್ತಕ್ಷೇಪಗಳ ಮೂಲಕ, 60 ಕೋಟಿಗೂ ಹೆಚ್ಚು ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಮತ್ತು 25 ಕೋಟಿ ಜನರನ್ನು ಬಡತನ ರೇಖೆಗಿಂತ ಮೇಲಕ್ಕೆತ್ತುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ.
- 31.65 ಕೋಟಿಗೂ ಹೆಚ್ಚು ಇ-ಶ್ರಮ್ ಕಾರ್ಡ್ ಗಳನ್ನು ವಿತರಿಸಲಾಗಿದೆ. ಇದು ಪ್ರಸ್ತುತ 14 ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಒಳಗೊಂಡಿದೆ.
- ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಫೆಬ್ರವರಿ 24, 2025 ರಂದು ಇ-ಶ್ರಮ್ ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿತು.
- 2018ರ 102ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡಿತು.
- 2025-26ರ ಆರ್ಥಿಕ ವರ್ಷದಲ್ಲಿ, 75 ಲಕ್ಷಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ₹7,981.47 ಕೋಟಿ ವಿತರಿಸಲಾಗಿದ್ದು, ಇದು ಪ್ರಮುಖ ಶಿಷ್ಯವೇತನ ಯೋಜನೆಗಳಲ್ಲಿ ಗಮನಾರ್ಹ ಹೆಚ್ಚಳವನ್ನು ದಾಖಲಿಸಿದೆ.
- ಕೇಂದ್ರ ಬಜೆಟ್ 2026-27 ರಲ್ಲಿ ವಿಕಲಾಂಗ ವ್ಯಕ್ತಿಗಳಿಗಾಗಿ 'ದಿವ್ಯಾಂಗ ಕೌಶಲ್ಯ ಯೋಜನೆ' ಮತ್ತು 'ದಿವ್ಯಾಂಗ ಸಹಾರಾ ಯೋಜನೆ'ಯನ್ನು ಘೋಷಿಸಲಾಗಿದೆ.




## ಪ್ರಧಾನ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನೆ

ದೇಶಾದ್ಯಂತ 2.86 ಕೋಟಿ ಮನೆಗಳಿಗೆ ವಿದ್ಯುದ್ದೀಕರಣ ಮಾಡಲಾಗಿದೆ. ಎಲ್ಲಾ ರಾಜ್ಯಗಳು ಗುರುತಿಸಲಾದ ಎಲ್ಲಾ ಇಚ್ಛೆಯುಳ್ಳ, ವಿದ್ಯುತ್ ರಹಿತ ಮನೆಗಳಿಗೆ ಮಾರ್ಚ್ 31, 2019ರ ಮೊದಲು ಶೇ. 100 ರಷ್ಟು ವಿದ್ಯುದ್ದೀಕರಣದ ಗುರಿಯನ್ನು ಸಾಧಿಸಿವೆ.

## ಕಾರ್ಮಿಕ ಸಂಹಿತೆಗಳು

ಅಸ್ತಿತ್ವದಲ್ಲಿದ್ದ 29 ಕಾರ್ಮಿಕ ಕಾನೂನುಗಳ ಬದಲಾಗಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲಾಗಿದೆ. ಅವುಗಳೆಂದರೆ: ವೇತನ ಸಂಹಿತೆ 2019, ಕೈಗಾರಿಕಾ ಸಂಬಂಧಗಳ ಸಂಹಿತೆ 2020, ಸಾಮಾಜಿಕ ಭದ್ರತೆ ಸಂಹಿತೆ 2020, ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ 2020 ಈ ಸಂಹಿತೆಗಳನ್ನು 21 ನವೆಂಬರ್ 2025 ರಿಂದ ಜಾರಿಗೆ ತರುವುದಾಗಿ ಘೋಷಿಸಲಾಗಿದೆ.





## ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯ ಸಾಧನೆಗಳು

ಸರಿಸುಮಾರು 30 ಲಕ್ಷ ಕುಶಲಕರ್ಮಿಗಳು ಮತ್ತು ಶಿಲ್ಪಿಗಳು ನೋಂದಾಯಿಸಿಕೊಂಡಿದ್ದಾರೆ.

**4,78,020**

ಜನರಿಗೆ ಒಟ್ಟು ₹41,188 ಕೋಟಿ ಮೌಲ್ಯದ ಸಾಲಗಳನ್ನು ಮಂಜೂರು ಮಾಡಲಾಗಿದೆ.

**26,36,865**

ಕುಶಲಕರ್ಮಿಗಳ ಕೌಶಲ್ಯ ಪರಿಶೀಲನೆ ಪೂರ್ಣಗೊಂಡಿದೆ.

**23,69,249**

ಇ-ವೋಚರ್ ಗಳನ್ನು ವಿತರಿಸಲಾಗಿದೆ.

**ವಿಕಸಿತ ಭಾರತ - ಉದ್ಯೋಗ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ ಕಾಯ್ದೆ, 2025)**

ಈ ಕಾಯ್ದೆಯಡಿ, ಪ್ರತಿ ಗ್ರಾಮೀಣ ಕುಟುಂಬಕ್ಕೆ ಪ್ರತಿ ಹಣಕಾಸು ವರ್ಷದಲ್ಲಿ ಕನಿಷ್ಠ 125 ದಿನಗಳ ವೇತನ ಉದ್ಯೋಗವನ್ನು ಖಾತರಿಪಡಿಸಲಾಗಿದೆ. ಇದು ಹಿಂದಿನ 100 ದಿನಗಳ ಖಾತರಿಯಿಂದ ಮಾಡಲಾದ ಹೆಚ್ಚಳವಾಗಿದೆ.



“

**ಯಾರಿಗೆ ಈ ಹಿಂದೆ ಸರ್ಕಾರಿ ಕಚೇರಿಗಳ ಬಾಗಿಲುಗಳೂ ಸಹ ಮುಚ್ಚಿರುತ್ತಿದ್ದವೋ, ಅಂತಹ ಬಡವರು, ವಂಚಿತರು ಮತ್ತು ನಿರ್ಲಕ್ಷಿತ ಜನರೇ ನನ್ನ ಆದ್ಯತೆಯಾಗಿದ್ದಾರೆ. ಅಂತವರನ್ನು ಮೋದಿ ಮೊದಲು ಪರಿಗಣಿಸುವುದು ಮಾತ್ರವಲ್ಲದೆ, ಪೂಜಿಸುತ್ತಾರೆ. ನನಗೆ, ದೇಶದ ಪ್ರತಿಯೊಬ್ಬ ಬಡ ವ್ಯಕ್ತಿಯೂ ಒಬ್ಬ ವಿಐಪಿ. ದೇಶದ ಪ್ರತಿಯೊಬ್ಬ ತಾಯಿ, ಸಹೋದರಿ ಮತ್ತು ಮಗಳು ನನಗೆ ವಿಐಪಿ. ದೇಶದ ಪ್ರತಿಯೊಬ್ಬ ರೈತನೂ ನನಗೆ ವಿಐಪಿ. ದೇಶದ ಪ್ರತಿಯೊಬ್ಬ ಯುವಕನೂ ನನಗೆ ವಿಐಪಿ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

# ಆತ್ಮನಿರ್ಭರ ಭಾರತದ ಬುನಾದಿ

*ಸ್ವಾವಲಂಬಿ ಕೃಷಿಯೇ ಆತ್ಮನಿರ್ಭರ ಭಾರತದ ಮೂಲಾಧಾರವಾಗಿದೆ. ಶ್ರೀ ಅನ್ನಕ್ಕೆ (ಸಿರಿಧಾನ್ಯಗಳು) ಜಾಗತಿಕ ಮನ್ನಣೆ ನೀಡುವುದಾಗಲಿ, ರೈತರಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಆದಾಯ ಸಿಗುವಂತೆ ಮಾಡಲು ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸುವುದಾಗಲಿ ಅಥವಾ ರೈತರ ಆದಾಯವನ್ನು ದ್ವಿಗುಣಗೊಳಿಸಲು ಶ್ರಮಿಸುವುದಾಗಲಿ, ಇವು ಕೇವಲ ಭರವಸೆಗಳಲ್ಲ ಬದಲಿಗೆ ಸರ್ಕಾರದ ದೃಢವಾದ ಬದ್ಧತೆಯಾಗಿದೆ. ಕಳೆದ 12 ವರ್ಷಗಳಲ್ಲಿ, ಕೃಷಿಯನ್ನು ಒಂದು ಉದ್ಯಮದಂತೆ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದ ನೀತಿಗಳು ಮತ್ತು ಉಪಕ್ರಮಗಳು ರೈತರ ಆರ್ಥಿಕ ಸಬಲೀಕರಣಕ್ಕೆ ದಾರಿ ಮಾಡಿಕೊಟ್ಟಿವೆ. ಭಾರತವು ಆಮದುಗಳ ಮೇಲೆ ಅವಲಂಬಿತವಾಗಿದ್ದ ಕ್ಷೇತ್ರಗಳನ್ನು ಗುರುತಿಸಿ, ಸ್ವಾವಲಂಬನೆಯತ್ತ ನಿರ್ಣಾಯಕ ಹೆಜ್ಜೆಗಳನ್ನು ಇಡುವ ಮೂಲಕ, ದೇಶವು "ಸಬಲ ರೈತ, ಸಮೃದ್ಧ ರಾಷ್ಟ್ರ" ಎಂಬ ದೂರದೃಷ್ಟಿಯೊಂದಿಗೆ ಮುನ್ನಡೆಯುತ್ತಿದೆ.*

## ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇ-ನ್ಯಾಮ್)

ಮಾರ್ಚ್ 2026ರ ವೇಳೆಗೆ 23 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳಾದ್ಯಂತ

**1,656**

ಮಂಡಿಗಳನ್ನು (ಗೌರವಾನ್ವಿತ ಸಗಟು ಮಾರುಕಟ್ಟೆಗಳು) ಸಂಯೋಜಿಸಲಾಗಿದೆ.

ಇದರ ಜೊತೆಗೆ,

**1.80**

ಕೋಟಿಗೂ ಹೆಚ್ಚು ರೈತರು, 2.73 ಲಕ್ಷ ವ್ಯಾಪಾರಿಗಳು ಮತ್ತು 4,724 ರೈತ ಉತ್ಪಾದಕ ಸಂಸ್ಥೆಗಳು (ಎಫ್ ಪಿ ಒ) ಇ-ನಾಮ್ ವೇದಿಕೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ.

- 2016 ರಿಂದ ಮಾರ್ಚ್ 2026ರ ನಡುವೆ, ಒಟ್ಟು 13.25 ಕೋಟಿ ಮೆಟ್ರಿಕ್ ಟನ್ ವ್ಯಾಪಾರದ ಪ್ರಮಾಣವನ್ನು ದಾಖಲಿಸಲಾಗಿದೆ, ಇದರ ಒಟ್ಟು ಮೌಲ್ಯ ₹4.84 ಲಕ್ಷ ಕೋಟಿ ಆಗಿದೆ.
- ವ್ಯಾಪಾರದ ಮೌಲ್ಯವು 2024 ರಲ್ಲಿ ಇದ್ದ ₹3.19 ಲಕ್ಷ ಕೋಟಿಯಿಂದ 2026 ರಲ್ಲಿ ₹4.84 ಲಕ್ಷ ಕೋಟಿಗೆ ಏರಿಕೆಯಾಗಿದೆ, ಇದು ಮಾರುಕಟ್ಟೆ ಸಂಯೋಜನೆಯ ಬೆಳೆಯುತ್ತಿರುವ ಪ್ರಮಾಣ ಮತ್ತು ಆಳವನ್ನು ಪ್ರತಿಫಲಿಸುತ್ತದೆ.
- ಮಾರ್ಚ್ 2026 ರ ಹೊತ್ತಿಗೆ, 204.76 ಲಕ್ಷ ಮೆಟ್ರಿಕ್ ಟನ್ ಕೃಷಿ ಉತ್ಪನ್ನಗಳ ವ್ಯಾಪಾರ ನಡೆದಿದ್ದು, ಇದು ನಿರಂತರ ಕಾರ್ಯಾಚರಣೆಯ ವೇಗವನ್ನು ಪ್ರದರ್ಶಿಸುತ್ತದೆ.
- ಇ-ನಾಮ್ ಅಪ್ಲಿಕೇಶನ್ ಮೂಲಕ ಒದಗಿಸಲಾಗುವ ಮೊಬೈಲ್ ಆಧಾರಿತ ಬೆಲೆ ಮಾಹಿತಿ ಸೇವೆಗಳ ಅಡಿಯಲ್ಲಿ, 247 ಸರಕುಗಳನ್ನು ಒಳಪಡಿಸಲಾಗಿದೆ.





**ಶ್ರೀ ಅನ್ನ** - 2018 ರಲ್ಲಿ, ಸಿರಿಧಾನ್ಯಗಳ (ಶ್ರೀ ಅನ್ನ) ಮಹತ್ವವನ್ನು ಎತ್ತಿ ತೋರಿಸುತ್ತಾ, ಪ್ರಧಾನಿ ಮೋದಿಯವರು ವಿಶ್ವಸಂಸ್ಥೆಯಲ್ಲಿ ಮಂಡಿಸಿದ ಪ್ರಸ್ತಾವನೆಯ ಫಲವಾಗಿ 2023 ಅನ್ನು "ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ" ಎಂದು ಘೋಷಿಸಲಾಯಿತು.

- 2024-25 ರ ಸಾಲಿನಲ್ಲಿ, ಇದರ ಉತ್ಪಾದನೆಯು ಸರಿಸುಮಾರು 18.59 ಮಿಲಿಯನ್ ಟನ್ ತಲುಪಿದೆ. ಈ ಸಾಧನೆಯೊಂದಿಗೆ, ಭಾರತವು ಜಾಗತಿಕವಾಗಿ ಸಿರಿಧಾನ್ಯ ಉತ್ಪಾದನೆಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಈ ನಿಟ್ಟಿನಲ್ಲಿ ರಾಜಸ್ಥಾನ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಮುಖ ಕೊಡುಗೆಯನ್ನು ನೀಡಿವೆ.

## ಪ್ರಧಾನ ಮಂತ್ರಿ ಕಿಸಾನ್ ಮಾನ್-ಧನ್ ಯೋಜನೆ (ಪಿಎಂ-ಕೆಎಂವೈ)

ಈ ಯೋಜನೆಯಡಿ, ಫೆಬ್ರವರಿ 2, 2026ರ ಹೊತ್ತಿಗೆ 24.95 ಲಕ್ಷ ರೈತರನ್ನು ನೋಂದಾಯಿಸಿಕೊಳ್ಳಲಾಗಿದ್ದು, ಆ ಮೂಲಕ ಸಣ್ಣ ಮತ್ತು ಅಲ್ಪಾವಧಿ ರೈತರಿಗೆ ಸಾಮಾಜಿಕ ಭದ್ರತೆಯ ಪ್ರಯೋಜನಗಳನ್ನು ಒದಗಿಸಲಾಗುತ್ತಿದೆ.



## ಬೆಳೆ ವಿಮೆ ರಕ್ಷಣೆ

- 4.19 ಕೋಟಿ ರೈತರು 2024-25 ರ ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂ ಎಫ್ ಬಿ ವೈ) ಅಡಿಯಲ್ಲಿ ವಿಮೆ ಪಡೆದಿದ್ದಾರೆ, ಇದು 6.2 ಕೋಟಿ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ.
- 2016-17 ರಿಂದ ಮಾರ್ಚ್ 2026 ರವರೆಗೆ ₹1.90 ಲಕ್ಷ ಕೋಟಿಗೂ ಅಧಿಕ ಮೊತ್ತದ ಕ್ಲೈಮುಗಳನ್ನು (ವಿಮಾ ಹಣ) ವಿತರಿಸಲಾಗಿದೆ. ಈ ಅವಧಿಯಲ್ಲಿ ಬೆಳೆ ವಿಮೆಗಾಗಿ 86 ಕೋಟಿಗೂ ಹೆಚ್ಚು ಅರ್ಜಿಗಳು ಸ್ವೀಕೃತವಾಗಿವೆ.
- 2022-23 ರ ಸಾಲಿಗೆ ಹೋಲಿಸಿದರೆ ವಿಮಾ ವ್ಯಾಪ್ತಿಯು ಶೇಕಡಾ 32 ರಷ್ಟು ಹೆಚ್ಚಳಕ್ಕೆ ಸಾಕ್ಷಿಯಾಗಿದೆ, ಆ ಮೂಲಕ ಹವಾಮಾನ ಮತ್ತು ಮಾರುಕಟ್ಟೆ ಸಂಬಂಧಿತ ಅಪಾಯಗಳ ವಿರುದ್ಧ ರಕ್ಷಣೆಯನ್ನು ಮತ್ತಷ್ಟು ಬಲಪಡಿಸಲಾಗಿದೆ.

ಮುಖಪುಟ ಲೇಖನ
12 ವರ್ಷಗಳ
ವಿಕಾಸ ಯಾತ್ರೆ

## ಪ್ರಮುಖ ಯೋಜನೆಗಳಿಗೆ ಚಾಲನೆ



- ರಾಷ್ಟ್ರದ ಸ್ವಾವಲಂಬನೆಯನ್ನು ಉತ್ತೇಜಿಸಲು ಮತ್ತು ರೈತರ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಕ್ಟೋಬರ್ 11, 2025 ರಂದು ಎರಡು ಪ್ರಮುಖ ಹೊಸ ಯೋಜನೆಗಳನ್ನು ಪ್ರಾರಂಭಿಸಿದರು.
- ಮೊದಲನೆಯದು ಪ್ರಧಾನ ಮಂತ್ರಿ ಧನ ಧಾನ್ಯ ಕೃಷಿ ಯೋಜನೆ, ಮತ್ತು ಎರಡನೆಯದು ಬೇಳೆಕಾಳುಗಳ ಸ್ವಾವಲಂಬನೆ ಮಿಷನ್.

ಪ್ರಧಾನ ಮಂತ್ರಿ ಧನ ಧಾನ್ಯ ಕೃಷಿ ಯೋಜನೆಗೆ

**₹24,000**

ಕೋಟಿ ಬಜೆಟ್ ಹಂಚಿಕೆ ಮಾಡಲಾಗಿದ್ದರೆ, ಬೇಳೆಕಾಳುಗಳಲ್ಲಿ ಆತ್ಮನಿರ್ಭರತೆಗಾಗಿ ಇರುವ ಮಿಷನ್ ಗೆ ₹1,440 ಕೋಟಿ ಬಜೆಟ್ ಅನ್ನು ಮೀಸಲಿಡಲಾಗಿದೆ.

- ಸರ್ಕಾರವು ಈ ಯೋಜನೆಗಳಿಗಾಗಿ ಒಟ್ಟು ₹35,000 ಕೋಟಿಗೂ ಅಧಿಕ ಹಣವನ್ನು ವೆಚ್ಚ ಮಾಡಲು ಸಿದ್ಧವಾಗಿದೆ. ಈ ಎರಡು ಉಪಕ್ರಮಗಳು ಭಾರತದಾದ್ಯಂತ ಇರುವ ಕೋಟ್ಯಂತರ ರೈತರ ಭವಿಷ್ಯವನ್ನು ಬದಲಾಯಿಸಲು ಸಜ್ಜಾಗಿವೆ.




### ಕಿಸಾನ್ ಕ್ರೆಡಿಟ್ ಕಾರ್ಡ್

ಡಿಸೆಂಬರ್ 31, 2025 ರ ಹೊತ್ತಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಯೋಜನೆಯ ಮೂಲಕ 7.57 ಕೋಟಿ ರೈತರಿಗೆ

**₹10**

ಲಕ್ಷ ಕೋಟಿಗೂ ಹೆಚ್ಚು ವಿತರಿಸಲಾಗಿದೆ.

- ರೈತರು ತಮ್ಮ ಕೃಷಿ ಮತ್ತು ಪಶುಸಂಗೋಪನೆಗೆ ಸಂಬಂಧಿಸಿದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಕಡಿಮೆ ಬಡ್ಡಿದರದಲ್ಲಿ ಸುಲಭವಾಗಿ ಸಾಲವನ್ನು ಪಡೆಯಲು ಸಾಧ್ಯವಾಗುತ್ತಿದೆ.

ಜನವರಿ 31, 2026 ರ ಹೊತ್ತಿಗೆ ಸಹಕಾರ ಸಂಘಗಳ ಸದಸ್ಯರಿಗೆ

**1.55**

ಕೋಟಿ ರುಪೇ ಕಿಸಾನ್ ಕಾರ್ಡ್ ಗಳನ್ನು ವಿತರಿಸಲಾಗಿದೆ.





## 12 ವರ್ಷಗಳ ಸಾಧನೆಗಳು

- ಕಳೆದ 12 ವರ್ಷಗಳಲ್ಲಿ, ಭಾರತದ ಕೃಷಿ ರಫ್ತು ದುಪ್ಪಟ್ಟಾಗಿದೆ ಮತ್ತು ಧಾನ್ಯಗಳ ಉತ್ಪಾದನೆಯು ಸರಿಸುಮಾರು 90 ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಹೆಚ್ಚಾಗಿದೆ.
- ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯು 64 ಮಿಲಿಯನ್ ಮೆಟ್ರಿಕ್ ಟನ್ ಗಿಂತಲೂ ಹೆಚ್ಚು ಏರಿಕೆಯಾಗಿದೆ. ಇಂದು ನಾವು ಹಾಲು ಉತ್ಪಾದನೆಯಲ್ಲಿ ಜಾಗತಿಕವಾಗಿ ಪ್ರಥಮ ಸ್ಥಾನದಲ್ಲಿದ್ದೇವೆ.
- ಭಾರತವು ವಿಶ್ವದ ಎರಡನೇ ಅತಿ ದೊಡ್ಡ ಮೀನು ಉತ್ಪಾದಕ ರಾಷ್ಟ್ರವಾಗಿದೆ. ಭಾರತದಲ್ಲಿ ಜೇನುತುಪ್ಪದ ಉತ್ಪಾದನೆಯು 2014 ರ ಮಟ್ಟಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ. ಕಳೆದ 12 ವರ್ಷಗಳಲ್ಲಿ ಮೊಟ್ಟೆ ಉತ್ಪಾದನೆಯೂ ಸಹ ದುಪ್ಪಟ್ಟಾಗಿದೆ.
- ಈ ಅವಧಿಯಲ್ಲಿ ಆರು ಪ್ರಮುಖ ರಸಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. 25 ಕೋಟಿಗೂ ಹೆಚ್ಚು ಮಣ್ಣಿನ ಆರೋಗ್ಯ ಕಾರ್ಡ್ ಗಳನ್ನು ವಿತರಿಸಲಾಗಿದೆ.
- ಕಿರು ನೀರಾವರಿ ಸೌಲಭ್ಯಗಳನ್ನು 10 ಮಿಲಿಯನ್ ಹೆಕ್ಟೇರ್ ಪ್ರದೇಶವನ್ನು ಒಳಗೊಳ್ಳುವಂತೆ ವಿಸ್ತರಿಸಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ ರೈತರು ಸರಿಸುಮಾರು ₹2,000 ಕೋಟಿ ಮೌಲ್ಯದ ಕ್ಲೈಮುಗಳನ್ನು ಸ್ವೀಕರಿಸಿದ್ದಾರೆ.
- ಕಳೆದ 12 ವರ್ಷಗಳಲ್ಲಿ 10,000 ಕ್ಕೂ ಹೆಚ್ಚು ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲಾಗಿದೆ.

## ಜಾಗತಿಕ ಕೃಷಿ ಮಾರುಕಟ್ಟೆಯಲ್ಲಿ ಭಾರತ

- ಹಣಕಾಸು ವರ್ಷ 2020 ರಲ್ಲಿ ಕೃಷಿ ರಫ್ತಿನಿಂದ ಬಂದ ಆದಾಯವು 34.5 ಬಿಲಿಯನ್ ಯುಎಸ್ ಡಾಲರ್ ಆಗಿತ್ತು, ಅದು ಹಣಕಾಸು ವರ್ಷ 2025 ರಲ್ಲಿ 51.1 ಬಿಲಿಯನ್ ಯುಎಸ್ ಡಾಲರ್ ಗೆ ಏರಿದೆ.
- ಹಣಕಾಸು ವರ್ಷ 2025 ರಲ್ಲಿ, ಸಂಸ್ಕರಿಸಿದ ಆಹಾರ ಉತ್ಪನ್ನಗಳು ಸೇರಿದಂತೆ ಕೃಷಿ-ಆಹಾರ ರಫ್ತುಗಳು 49.43 ಬಿಲಿಯನ್ ಯುಎಸ್ ಡಾಲರ್ ಆಗಿದ್ದು, ಇದು ದೇಶದ ಒಟ್ಟು ರಫ್ತಿನ ಸರಿಸುಮಾರು ಶೇಕಡಾ 11.2 ರಷ್ಟಾಗಿದೆ.

ಕೃಷಿ ಮತ್ತು ರೈತರ ಕಲ್ಯಾಣಕ್ಕಾಗಿ ಬಜೆಟ್ 12 ವರ್ಷಗಳಲ್ಲಿ ಆರು ಪಟ್ಟು ಹೆಚ್ಚಳ




"ಸ್ವಾತಂತ್ರ್ಯ ಬಂದು ಇಷ್ಟು ದಶಕಗಳ ನಂತರ, ಇಂದು ದೇಶದಲ್ಲಿ ರೈತರ ನೋವು ಮತ್ತು ಕಳಕಳಿಯನ್ನು ಅರ್ಥಮಾಡಿಕೊಳ್ಳುವ ಸರ್ಕಾರವಿದೆ. ಆದ್ದರಿಂದ ಭಾರತ ಸರ್ಕಾರವು ರೈತರ ಹಿತದೃಷ್ಟಿಯಿಂದ ನಿರಂತರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ನಾವು ಬಿತ್ತನೆ ಬೀಜದಿಂದ ಹಿಡಿದು ಮಾರುಕಟ್ಟೆಯವರೆಗೆ ರೈತರಿಗಾಗಿ ಹೊಸ ವ್ಯವಸ್ಥೆಗಳನ್ನು ಸ್ಥಾಪಿಸಿದ್ದೇವೆ."

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*



ಮುಖಪುಟ ಲೇಖನ
12 ವರ್ಷಗಳ
ವಿಕಾಸ ಯಾತ್ರೆ

# ರಾಷ್ಟ್ರ ನಿರ್ಮಾಣ

## 'ವಿಕಸಿತ ಭಾರತದ ಸಂಕಲ್ಪವೇ ನಿಜವಾದ ರಾಷ್ಟ್ರೀಯ ನೀತಿ'

*ಇಂಗ್ಲಿಷಿನಲ್ಲಿ ಒಂದು ಗಾದೆಯಿದೆ: "the size of the cake matters" — ಅಂದರೆ, ಕೇಕ್ ಎಷ್ಟು ದೊಡ್ಡದಾಗಿರುತ್ತದೆಯೋ, ಜನರು ಅಷ್ಟೇ ದೊಡ್ಡ ಪಾಲನ್ನು ಪಡೆಯಲು ಸಾಧ್ಯವಾಗುತ್ತದೆ. ಇದೇ ತತ್ವದಿಂದ ಪ್ರೇರಿತರಾಗಿ, ಕೇಂದ್ರ ಸರ್ಕಾರವು ಭಾರತದ ಆರ್ಥಿಕತೆಯ ಗಾತ್ರವನ್ನು ಐದು ಟ್ರಿಲಿಯನ್ ಡಾಲರ್ ಗೆ ತಲುಪಿಸುವ ಗುರಿಯನ್ನು ಹೊಂದಿದೆ. ಆರ್ಥಿಕತೆಯ ಗಾತ್ರವು ಎಷ್ಟು ದೊಡ್ಡದಾಗುತ್ತದೆಯೋ, ದೇಶದ ಸಮೃದ್ಧಿಯು ಸಹಜವಾಗಿಯೇ ಅಷ್ಟೇ ಹೆಚ್ಚಾಗುತ್ತದೆ. ಇದೇ ಸಮೃದ್ಧಿಯು ಪ್ರತಿಯೊಂದು ಕುಟುಂಬ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಆದಾಯ ಹಾಗೂ ಜೀವನ ಮಟ್ಟದಲ್ಲಿ ಸ್ಥಿತ್ಯಂತರವನ್ನು ತರುತ್ತದೆ. ಇದು ಈಗ ಭಾರತೀಯ ಆರ್ಥಿಕತೆಯ ಪ್ರಯಾಣದ ಭದ್ರಬುನಾದಿಯಾಗಿದೆ. ಅದೇ ರೀತಿ, ಮೂಲಸೌಕರ್ಯವು ಯಾವುದೇ ರಾಷ್ಟ್ರದ ಪ್ರಗತಿಯ ಆಧಾರವಾಗಿ ಕಾರ್ಯನಿರ್ವಹಿಸುತ್ತದೆ. ಇದು ಉತ್ಪಾದನೆ ಮತ್ತು ಲಾಜಿಸ್ಟಿಕ್ಸ್ ನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದಲ್ಲದೆ, ಸಾಮಾಜಿಕ ಸಾಮರಸ್ಯವನ್ನು ಬಲಪಡಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆಯ ಕಥನಕ್ಕೆ ಹೊಸ ವೇಗವನ್ನು ನೀಡುತ್ತದೆ. ಈ ಬೆಳವಣಿಗೆಯ ಕಥನದೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಯೋಜಿಸಿದಾಗ, ಅದರ ಪರಿಣಾಮವಾಗಿ ಮೂಡಿಬರುವ 'ವ್ಯವಹಾರವನ್ನು ಸುಲಭಗೊಳಿಸುವಿಕೆ' ಸಾರ್ವಜನಿಕ ನಂಬಿಕೆಯನ್ನು ವೃದ್ಧಿಸುತ್ತದೆ ಮತ್ತು ನಾಗರಿಕರ 'ಜೀವನ ಸುಲಭಗೊಳಿಸುವಿಕೆಯನ್ನು' ಹೆಚ್ಚಿಸುತ್ತದೆ. ಕಳೆದ 12 ವರ್ಷಗಳ ರಾಷ್ಟ್ರ ನಿರ್ಮಾಣದ ಪ್ರಯಾಣದಲ್ಲಿ, 'ಅಷ್ಟಲಕ್ಷ್ಮಿ' — ಅಂದರೆ ಈಶಾನ್ಯ ವಲಯವು — ಬೆಳವಣಿಗೆಯ ಪ್ರಮುಖ ಇಂಜಿನ್ ಆಗಿ ಹೊರಹೊಮ್ಮಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಅಭಿವೃದ್ಧಿಯ ಸಮಗ್ರ ದೃಷ್ಟಿಕೋನವು ಸಾಮಾಜಿಕ ಪ್ರಗತಿ ಮತ್ತು ಆರ್ಥಿಕ ಸಮತೋಲನದತ್ತ ಮುನ್ನಡೆಸಿದ್ದರೆ, ನೀತಿ ಸುಧಾರಣೆಗಳು ರಾಷ್ಟ್ರ ನಿರ್ಮಾಣದಲ್ಲಿ ಹೊಸ ಅಧ್ಯಾಯವನ್ನು ಬರೆದಿವೆ, ಆ ಮೂಲಕ ವಿಕಸಿತ ಭಾರತದ ಸಂಕಲ್ಪದ ಸಾಕಾರಕ್ಕೆ ದಾರಿ ಮಾಡಿಕೊಟ್ಟಿವೆ.*

# ಆರ್ಥಿಕತೆಯ ಅಮೃತ ಯಾತ್ರೆ

*ಸಮಗ್ರ ಅಭಿವೃದ್ಧಿಯ ದೃಷ್ಟಿಕೋನದೊಂದಿಗೆ, ಸಾಮಾಜಿಕ ಪ್ರಗತಿ ಮತ್ತು ಆರ್ಥಿಕ ಸಮತೋಲನದ ಕಡೆಗೆ ಕ್ರಮಗಳನ್ನು ತೆಗೆದುಕೊಳ್ಳಲಾಯಿತು, ಅದೇ ಸಮಯದಲ್ಲಿ ನೀತಿ ಸುಧಾರಣೆಗಳು ಆರ್ಥಿಕ ಬೆಳವಣಿಗೆಯ ಹೊಸ ಅಧ್ಯಾಯವನ್ನು ಆರಂಭಿಸಿದವು. ಆರ್ಥಿಕ ನೀತಿಗಳು ಮತ್ತು ಆರ್ಥಿಕ ವಿಷಯಗಳನ್ನು ಸಾಮಾನ್ಯ ಜನರೊಂದಿಗೆ ಎಷ್ಟು ಸರಳವಾಗಿ ಜೋಡಿಸಲಾಯಿತು ಎಂದರೆ, ಪ್ರತಿಯೊಬ್ಬ ನಾಗರಿಕರೂ ತನ್ನನ್ನು ತಾನು ಒಬ್ಬ ಸಕ್ರಿಯ ಪಾಲ್ಗೊಳ್ಳುವವನಾಗಿ ನೋಡಿಕೊಳ್ಳಲು ಪ್ರಾರಂಭಿಸಿದರು. ತಮ್ಮ ಕಳಕಳಿಗಳ ಬಗ್ಗೆಯೂ ನಿಜವಾಗಿಯೂ ಕಾಳಜಿ ವಹಿಸುವ ಯಾರೋ ಒಬ್ಬರು ಇದ್ದಾರೆ ಎಂದು ಜನರು ಭಾವಿಸಿದರು. ತೆರಿಗೆ ಸುಧಾರಣೆಗಳು ಇರಲಿ ಅಥವಾ ಆರ್ಥಿಕತೆಗೆ ಹೊಸ ದಿಕ್ಕು ನೀಡುವ ಉಪಕ್ರಮಗಳಿರಲಿ, ಜಿ ಎಸ್ ಟಿ, ತೆರಿಗೆದಾರರ ಸನ್ನದು ಅಥವಾ ಮುಖಾಮುಖಿರಹಿತ ವ್ಯವಸ್ಥೆ ಇರಲಿ, ರಚನಾತ್ಮಕ ಸುಧಾರಣೆಗಳು ಆರ್ಥಿಕತೆಗೆ ಹೊಸ ವೇಗವನ್ನು ನೀಡಿವೆ. ಇದರ ಪರಿಣಾಮವಾಗಿ, ಭಾರತದ ವಿಕಸನಗೊಳ್ಳುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯ ಹೊಸ ಕಥೆ ಪ್ರಾರಂಭವಾಗಿದೆ.*



## ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳು

- ಭಾರತದ ಆರ್ಥಿಕತೆಯು ನಿರಂತರವಾಗಿ ಹೊಸ ಎತ್ತರವನ್ನು ತಲುಪುತ್ತಿದೆ. ವಿದೇಶಿ ವ್ಯಾಪಾರದ ಕ್ಷೇತ್ರದಲ್ಲಿ, ವಿಶೇಷವಾಗಿ ರಫ್ತುಗಳಲ್ಲಿ, ಇದು ದಿನನಿತ್ಯ ಹೊಸ ದಾಖಲೆಗಳನ್ನು ನಿರ್ಮಿಸುತ್ತಿದೆ.
- ಈ ಕ್ಷಿಪ್ರ ಆರ್ಥಿಕ ಬೆಳವಣಿಗೆಯ ಹಿಂದಿನ ಪ್ರಮುಖ ಚಾಲನಾ ಶಕ್ತಿಯೆಂದರೆ ಇತ್ತೀಚಿನ ವರ್ಷಗಳಲ್ಲಿ ಮುಕ್ತ ವ್ಯಾಪಾರ ಒಪ್ಪಂದಗಳ ಮೂಲಕ ಭಾರತೀಯ ಮಾರುಕಟ್ಟೆಯ ಜಾಗತಿಕ ವಿಸ್ತರಣೆಯಾಗಿದೆ.

ಏಪ್ರಿಲ್ 27, 2026 ರಂದು, ಭಾರತವು ನ್ಯೂಜಿಲೆಂಡ್ ನೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿತು, ಇದು ಇತ್ತೀಚಿನ ವರ್ಷಗಳಲ್ಲಿ

**38** ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಭಾರತದ ಒಂಬತ್ತನೇ ಅಂತಹ ಒಪ್ಪಂದವಾಗಿದೆ.

## ಬೆಳವಣಿಗೆಯ ವೇಗವನ್ನು ಬಲಪಡಿಸುವುದು

2025 ರಲ್ಲಿ, ಭಾರತವು ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿತು.

2030ರ ಹೊತ್ತಿಗೆ, ಒಟ್ಟು ದೇಶೀಯ ಉತ್ಪನ್ನವು (ಜಿಡಿಪಿ) **7.3** ಟ್ರಿಲಿಯನ್ ಯುಎಸ್ ಡಾಲರ್ ತಲುಪಲಿದೆ ಎಂದು ಅಂದಾಜಿಸಲಾಗಿದೆ.




- ಜಾಗತಿಕ ವ್ಯಾಪಾರ ಮತ್ತು ನೀತಿ ಅನಿಶ್ಚಿತತೆಗಳ ನಡುವೆಯೂ, ಬಲವಾದ ದೇಶೀಯ ಬೇಡಿಕೆಯು ಭಾರತದ ನೈಜ ಜಿಡಿಪಿ ಹಣಕಾಸು ವರ್ಷ 2025-26 ರ ಎರಡನೇ ತ್ರೈಮಾಸಿಕದಲ್ಲಿ ಶೇಕಡಾ 8.2 ರಷ್ಟು ಬೆಳೆಯಲು ಸಹಾಯ ಮಾಡಿತು, ಇದು ಹಣಕಾಸು ವರ್ಷ 2024-25 ರ ನಾಲ್ಕನೇ ತ್ರೈಮಾಸಿಕದ ಶೇಕಡಾ 7.4 ಕ್ಕಿಂತ ಹೆಚ್ಚಾಗಿದೆ. ಇದು ವಿಶ್ವದ ಎಲ್ಲಾ ಪ್ರಮುಖ ಆರ್ಥಿಕತೆಗಳಲ್ಲಿ ಅತ್ಯಂತ ಹೆಚ್ಚಿನದಾಗಿದೆ.
- ಕೈಗಾರಿಕಾ ಮತ್ತು ಸೇವಾ ವಲಯಗಳ ಭಾರಿ ಬೆಳವಣಿಗೆಯಿಂದಾಗಿ ನೈಜ ಒಟ್ಟು ಮೌಲ್ಯವರ್ಧನೆ ಶೇಕಡಾ 8.1 ರಷ್ಟು ವಿಸ್ತರಿಸಿದೆ.

## ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

- 2026-27 ರಲ್ಲಿ ಭಾರತದ ಆರ್ಥಿಕತೆಯು ಸುಮಾರು ಶೇಕಡಾ 6.6 ರಷ್ಟು ಬೆಳೆಯಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ, ಇದು ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ.

## ಜಾಗತಿಕ ಆರ್ಥಿಕ ದೃಷ್ಟಿಕೋನ

- ಔಟ್ ಲುಕ್ 2026 ರ ಪ್ರಕಾರ, ಭಾರತದ ಬೆಳವಣಿಗೆಯ ದರವನ್ನು ಶೇಕಡಾ 6.5 ಎಂದು ಅಂದಾಜಿಸಲಾಗಿದೆ. ಇದಕ್ಕೆ ಹೋಲಿಸಿದರೆ ಇತರ ದೇಶಗಳ ಹಾಗೂ ಜಾಗತಿಕ ಬೆಳವಣಿಗೆಯ ದರ ಹೀಗಿದೆ: ಅಭಿವೃದ್ಧಿ ಹೊಂದಿದ ದೇಶಗಳಿಗೆ 1.8%, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ 3.9% ಮತ್ತು ಜಾಗತಿಕ ಆರ್ಥಿಕತೆಗೆ 3.1%.
- ಅಮೇರಿಕಾ: 2.3% ■ ಜರ್ಮನಿ: 0.8% ■ ಯುಕೆ: 0.8%
- ಚೀನಾ: 4.4% ■ ಬ್ರೆಜಿಲ್: 1.9%

## ಆತ್ಮನಿರ್ಭರತೆಯ ಮೂಲಕ ಹೆಚ್ಚುತ್ತಿರುವ ರಫ್ತು

ಸರಕು ಮತ್ತು ಸೇವೆಗಳ ಭಾರತದ ರಫ್ತು 2025-26ರ ಹಣಕಾಸು ವರ್ಷದಲ್ಲಿ ದಾಖಲೆಯ 860.09 ಬಿಲಿಯನ್ ಯುಎಸ್ ಡಾಲರ್ ತಲುಪಿದ್ದು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 4.22 ರಷ್ಟು ಹೆಚ್ಚಳವನ್ನು ದಾಖಲಿಸಿದೆ. 2014 ರಲ್ಲಿ ರಫ್ತು 479 ಬಿಲಿಯನ್ ಯುಎಸ್ ಡಾಲರ್ ಆಗಿತ್ತು.



2014-15ರಲ್ಲಿ 6.3 ಬಿಲಿಯನ್ ಡಾಲರ್ ಆಗಿದ್ದ ಎಲೆಕ್ಟ್ರಾನಿಕ್ ಸರಕುಗಳ ರಫ್ತು, 2025-26ರಲ್ಲಿ

**$48**


ಬಿಲಿಯನ್ ಗೆ ಏರಿಕೆಯಾಗಿದೆ. ಇದು ಸರಾಸರಿ ಶೇಕಡಾ 20.3ರಷ್ಟು ವಾರ್ಷಿಕ ಬೆಳವಣಿಗೆ ದರವನ್ನು ಪ್ರತಿನಿಧಿಸುತ್ತದೆ.

- 2013-14ರಲ್ಲಿ 39.6 ಬಿಲಿಯನ್ ಡಾಲರ್ ಆಗಿದ್ದ ಭಾರತದ ಕೃಷಿ, ತೋಟಗಾರಿಕೆ ಮತ್ತು ಕಡಲ ಉತ್ಪನ್ನಗಳ ರಫ್ತು 2025-26ರ ಹಣಕಾಸು ವರ್ಷದಲ್ಲಿ 52.6 ಬಿಲಿಯನ್ ಡಾಲರ್ ತಲುಪಿದೆ.


### ಮೊಬೈಲ್ ಫೋನ್ ರಫ್ತಿನಲ್ಲಿ 166 ಪಟ್ಟು ಬೆಳವಣಿಗೆ ದಾಖಲಾಗಿದೆ

*(ಲಕ್ಷ ಕೋಟಿ ರೂಪಾಯಿಗಳಲ್ಲಿ)*






ರಕ್ಷಣಾ ರಫ್ತಿನಲ್ಲಿ 20 ಪಟ್ಟು ಬೆಳವಣಿಗೆ ದಾಖಲಾಗಿದೆ






## ಎಂ ಎಸ್ ಎಂ ಇ: ಆರ್ಥಿಕತೆಯನ್ನು ಬಲಪಡಿಸುವುದು



**7.47**

ಕೋಟಿಗೂ ಹೆಚ್ಚು ಎಂ ಎಸ್ ಎಂ ಇ ಗಳು ಉತ್ಪಾದನೆ, ಸೇವೆಗಳು ಮತ್ತು ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ.

ಭಾರತದ ಜಿಡಿಪಿಗೆ ಈ ವಲಯದ ಕೊಡುಗೆ **ಶೇಕಡಾ 31.1 ರಷ್ಟು ಆಗಿದೆ.**

ದೇಶದ ಒಟ್ಟು ರಫ್ತಿಗೆ ಎಂ ಎಸ್ ಎಂ ಇ ಗಳಿಂದ **ಶೇಕಡಾ 48.58 ರಷ್ಟು** ಕೊಡುಗೆ ನೀಡಲಾಗುತ್ತಿದೆ.

ತಯಾರಿಕಾ ವಲಯದ ಒಟ್ಟು ಉತ್ಪಾದನೆಯಲ್ಲಿ **ಶೇಕಡಾ 35.4 ರಷ್ಟು** ಪಾಲು ಎಂ ಎಸ್ ಎಂ ಇ ಗಳಿಂದ ಬರುತ್ತದೆ.

**32.8**

ಕೋಟಿ ಜನರು ಎಂ ಎಸ್ ಎಂ ಇ ಗಳ ಮೂಲಕ ಜೀವನೋಪಾಯದ ಬೆಂಬಲವನ್ನು ಪಡೆಯುತ್ತಿದ್ದಾರೆ.

## ಸಾಮರ್ಥ್ಯ ಮತ್ತು ಸ್ಥಿತಿಸ್ಥಾಪಕತ್ವವನ್ನು ಪ್ರತಿಬಿಂಬಿಸುವ ಅಂಕಿ-ಅಂಶಗಳು

**357.14**

ಲಕ್ಷ ಕೋಟಿ ರೂಪಾಯಿ

ಇದು 2025-26ರ ಹಣಕಾಸು ವರ್ಷದಲ್ಲಿ ಪ್ರಸ್ತುತ ಬೆಲೆಗಳಲ್ಲಿ ಭಾರತದ ಅಂದಾಜು ಜಿಡಿಪಿ ಆಗಿದ್ದು, ಇದು ಭಾರತೀಯ ಆರ್ಥಿಕತೆಯ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ.

**484**

ಲಕ್ಷ ಕೋಟಿ ರೂಪಾಯಿ

ಬಿ ಎಸ್ ಇ ಯ 484 ಲಕ್ಷ ಕೋಟಿ ರೂಪಾಯಿಗಳ ಮಾರುಕಟ್ಟೆ ಬಂಡವಾಳೀಕರಣವು ಭಾರತೀಯ ಶೇರು ಮಾರುಕಟ್ಟೆಯ ಹೆಚ್ಚುತ್ತಿರುವ ಬಲವನ್ನು ಪ್ರದರ್ಶಿಸಿದೆ. (ಮಾಹಿತಿ: ಮೇ 14, 2026ರ ಅನ್ವಯ).

- ಪಿ ಎಲ್ ಐ ಯೋಜನೆಯಡಿ ಮಾರ್ಚ್ 2026 ರವರೆಗೆ 20.41 ಲಕ್ಷ ಕೋಟಿ ರೂಪಾಯಿ ಮೌಲ್ಯದ ಮಾರಾಟ ದಾಖಲಾಗಿದೆ.
- 2025-26 ರಲ್ಲಿ ಸ್ವೀಕರಿಸಲಾದ 135.4 ಬಿಲಿಯನ್ ಡಾಲರ್ ವಿದೇಶಿ ಹಣದ ರವಾನೆ ಭಾರತವನ್ನು ವಿಶ್ವದಲ್ಲೇ ಅತಿ ಹೆಚ್ಚು ವಿದೇಶಿ ಹಣವನ್ನು ಸ್ವೀಕರಿಸುವ ದೇಶವನ್ನಾಗಿ ಮಾಡಿದೆ.
- ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ಅನುತ್ಪಾದಕ ಆಸ್ತಿ ಅನುಪಾತವು ಡಿಸೆಂಬರ್ 2025 ರಲ್ಲಿ ಶೇಕಡಾ 1.89 (4.03 ಲಕ್ಷ ಕೋಟಿ ರೂಪಾಯಿ) ಆಗಿತ್ತು, ಇದು ಮಾರ್ಚ್ 2015 ರಲ್ಲಿದ್ದ ಶೇಕಡಾ 4.28 (3.23 ಲಕ್ಷ ಕೋಟಿ ರೂಪಾಯಿ) ಕ್ಕೆ ಹೋಲಿಸಿದರೆ ಗಣನೀಯವಾಗಿ ಕಡಿಮೆಯಾಗಿದೆ.
- 2025-26 ರಲ್ಲಿ 22 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ದಾಖಲೆಯ ಜಿ ಎಸ್ ಟಿ ಸಂಗ್ರಹಣೆಯನ್ನು ಸಾಧಿಸಲಾಗಿದೆ.
- ಐಬಿಸಿ ಪ್ರಕ್ರಿಯೆಯ ಮೂಲಕ ಸೆಪ್ಟೆಂಬರ್ 2025 ರವರೆಗೆ ಸಾಲ ಕೊಡುವವರಿಗಾಗಿ 3.99 ಲಕ್ಷ ಕೋಟಿ ರೂಪಾಯಿಗಳನ್ನು ಮರುಪಡೆಯಲಾಗಿದೆ.

# 701
**ಬಿಲಿಯನ್ ಡಾಲರ್**




ಮಾರ್ಚ್ 2025 ರಲ್ಲಿದ್ದ 668.3 ಬಿಲಿಯನ್ ಡಾಲರ್ ಗೆ ಹೋಲಿಸಿದರೆ, ಜನವರಿ 2026 ರಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು ನಿಧಿಯು 701 ಬಿಲಿಯನ್ ಡಾಲರ್ ತಲುಪಿತ್ತು.

## ಈಗ, ಹೆಚ್ಚುವರಿ ವೆಚ್ಚಗಳಿಗಾಗಿ ಹಣ ಉಳಿತಾಯವಾಗಲಿದೆ

ಹೊಸ ತೆರಿಗೆ ಪದ್ಧತಿಯಡಿ ವಾರ್ಷಿಕ **12.75** ಲಕ್ಷ ರೂಪಾಯಿ ಆದಾಯದವರೆಗೆ ಈಗ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲಾಗಿದ್ದು, ಇದು ನಾಗರಿಕರ ಬಳಿ ಖರ್ಚು ಮಾಡಲು ಹೆಚ್ಚಿನ ಹಣವನ್ನು ಉಳಿಸುತ್ತದೆ.






## ಸರ್ಕಾರದ ಮೇಲಿನ ವಿಶ್ವಾಸ ಹೆಚ್ಚುತ್ತಿದೆ...

**ಸಲ್ಲಿಕೆಯಾದ ಆದಾಯ ತೆರಿಗೆ ರಿಟರ್ನ್ಸ್ ಸಂಖ್ಯೆ ದ್ವಿಗುಣಗೊಂಡಿದೆ**




2025-26ರ ಸಾಲಿನಲ್ಲಿ ಒಟ್ಟು ನೇರ ತೆರಿಗೆ ಸಂಗ್ರಹವು **28** ಲಕ್ಷ ಕೋಟಿ ರೂಪಾಯಿಗೂ ಅಧಿಕ ಆಗಿತ್ತು.

- ಮುಂದಿನ ಪೀಳಿಗೆಯ ಜಿ ಎಸ್ ಟಿ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿದೆ ಮತ್ತು ತೆರಿಗೆದಾರರ ನೆಲೆಯನ್ನು 1.5 ಕೋಟಿಗೆ ವಿಸ್ತರಿಸಿದೆ, ಇದರ ಪರಿಣಾಮವಾಗಿ ಏಪ್ರಿಲ್ 2025 ರಲ್ಲಿ ₹2.36 ಲಕ್ಷ ಕೋಟಿ ಜಿ ಎಸ್ ಟಿ ಸಂಗ್ರಹಣೆಯಾಗಿದೆ.

ಏಪ್ರಿಲ್ 2026ರಲ್ಲಿ **2.43** ಲಕ್ಷ ಕೋಟಿ ರೂಪಾಯಿ ದಾಖಲೆಯ ಜಿ ಎಸ್ ಟಿ ಸಂಗ್ರಹಣೆಯಾಗಿದೆ.




# 10.9%

ಇದು 2026-27ರ ಹಣಕಾಸು ವರ್ಷದ ಅಂದಾಜು ತೆರಿಗೆ ಆದಾಯ ಮತ್ತು ಜಿಡಿಪಿ ಅನುಪಾತವಾಗಿದ್ದು, ಇದು 2025-26ರ ಪರಿಷ್ಕೃತ ಅಂದಾಜಾದ 10.8% ಕ್ಕಿಂತ ಸ್ವಲ್ಪ ಹೆಚ್ಚಾಗಿದೆ.

## ಪ್ರಗತಿ ಮತ್ತು ಸಮೃದ್ಧಿಗೆ ಕಾರಣವಾಗುತ್ತಿರುವ ಹೊಸ ಉದ್ಯೋಗಗಳು


- ಭಾರತದ ಕುಸಿಯುತ್ತಿರುವ ನಿರುದ್ಯೋಗ ದರವು ಅದರ ಆರ್ಥಿಕ ಉತ್ತೇಜನದ ಆಂತರಿಕ ಬಲವನ್ನು ಪ್ರತಿಬಿಂಬಿಸುತ್ತದೆ.
- 2025ರ ಪಿ ಎಲ್ ಎಫ್ ಎಸ್ ಸಮೀಕ್ಷೆಯು ನಿರುದ್ಯೋಗದಲ್ಲಿ ಗಮನಾರ್ಹ ಇಳಿಕೆಯನ್ನು ಸೂಚಿಸುತ್ತದೆ, ಜೊತೆಗೆ ಒಟ್ಟಾರೆ ಪಾಲ್ಗೊಳ್ಳುವಿಕೆ ದರ ಮತ್ತು ಕಾರ್ಮಿಕ-ಜನಸಂಖ್ಯೆಯ ಅನುಪಾತ ಎರಡರಲ್ಲೂ ಮಹತ್ತರ ಸುಧಾರಣೆಯನ್ನು ತೋರಿಸುತ್ತದೆ.
- ನವೆಂಬರ್ 2025 ರಲ್ಲಿ, 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳ ನಿರುದ್ಯೋಗ ದರವು ಶೇಕಡಾ 4.8 ಕ್ಕೆ ಇಳಿದಿದೆ, ಇದು ಅಕ್ಟೋಬರ್ 2025 ರಲ್ಲಿದ್ದ ಶೇಕಡಾ 5.4 ಕ್ಕಿಂತ ಕಡಿಮೆಯಾಗಿದೆ.
- ಇದು ಏಪ್ರಿಲ್ 2025ರ (ಶೇಕಡಾ 5.1) ನಂತರ ದಾಖಲಾದ ಅತ್ಯಂತ ಕನಿಷ್ಠ ಮಟ್ಟವಾಗಿದೆ.



# ಆಧುನಿಕ ಮೂಲಸೌಕರ್ಯವು ಭಾರತದ ಭದ್ರ ಬುನಾದಿಯನ್ನು ಬಲಪಡಿಸುತ್ತಿದೆ

'ನವ ಭಾರತದ ನಿರ್ಮಾಣ'ವು ಕೇವಲ ದಿಟ್ಟ ಸುಧಾರಣೆಗಳು ಮತ್ತು ಅಭೂತಪೂರ್ವ ಮೂಲಸೌಕರ್ಯ ಅಭಿವೃದ್ಧಿಯ ಮೂಲಕವೇ ಸಾಧ್ಯವಾಗಿದೆ. ಮೂಲಸೌಕರ್ಯ-ಆಧಾರಿತ ಬೆಳವಣಿಗೆಯನ್ನು ತನ್ನ ಕೇಂದ್ರಬಿಂದುವಾಗಿಸಿಕೊಂಡು, ದೇಶವು ನೀರು, ಭೂಮಿ ಅಥವಾ ವಾಯು ಹೀಗೆ ಪ್ರತಿಯೊಂದು ವಲಯದಲ್ಲೂ ಅಸಾಧಾರಣ ವೇಗ ಮತ್ತು ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ನೂರಾರು ಸೇತುವೆಗಳ ಜೊತೆಗೆ, ಸಂಸತ್ ಭವನ, ಭಾರತ ಮಂಟಪಂ ಮತ್ತು ಯಶೋಭೂಮಿಯಂತಹ ಹೆಗ್ಗುರುತಿನ ರಚನೆಗಳು ಭಾರತದ ಭವಿಷ್ಯವನ್ನು ರೂಪಿಸುತ್ತಿವೆ. ಈಗ, ತನ್ನ ಸ್ವಾತಂತ್ರ್ಯದ ಶತಮಾನೋತ್ಸವದ ಹೊಸ್ತಿಲಲ್ಲಿ ನಿಂತಿರುವ ಭಾರತವು ತನ್ನ ಮೂಲಸೌಕರ್ಯವನ್ನು ವೇಗವಾಗಿ ಮುನ್ನಡೆಸುತ್ತಿದ್ದು, ಆ ಮೂಲಕ 'ವಿಕಸಿತ ಭಾರತ'ದ ಕನಸನ್ನು ನನಸಾಗಿಸಲು ದಾರಿ ಮಾಡಿಕೊಡುತ್ತಿದೆ...

### 12 ವರ್ಷಗಳಲ್ಲಿ ಮೂಲಸೌಕರ್ಯಗಳ ಮೇಲಿನ ಸರ್ಕಾರದ ವೆಚ್ಚ ಆರು ಪಟ್ಟು ಹೆಚ್ಚಳ





### ಆಧುನಿಕ ಭಾರತವನ್ನು ಬಲಪಡಿಸಲು 2,000 ಮೂಲಸೌಕರ್ಯ ಯೋಜನೆಗಳು

ದೇಶಾದ್ಯಂತ 1,900 ಕ್ಕೂ ಹೆಚ್ಚು ಮೂಲಸೌಕರ್ಯ ಯೋಜನೆಗಳಲ್ಲಿ

**41.5**

ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಮೌಲ್ಯದ ಯೋಜನೆಗಳು ಪ್ರಸ್ತುತ ಸಕ್ರಿಯವಾಗಿ ಪ್ರಗತಿಯಲ್ಲಿವೆ. ಈ ಪ್ರತಿಯೊಂದು ಯೋಜನೆಯ ವೆಚ್ಚವೂ 150 ಕೋಟಿ ರೂಪಾಯಿಗಳನ್ನು ಮೀರಿದೆ.

- ಭಾರತ ಸರ್ಕಾರವು ಈ ಕೇಂದ್ರ ವಲಯದ ಮೂಲಸೌಕರ್ಯ ಯೋಜನೆಗಳನ್ನು 'ಪೈಮಾನಾ' (PAIMANA) ಡಿಜಿಟಲ್ ವೇದಿಕೆಯ ಮೂಲಕ ಮೇಲ್ವಿಚಾರಣೆ ಮಾಡುತ್ತಿದೆ. ಇದು ಸಕಾಲಿಕ ಪರಿಶೀಲನೆಗಳನ್ನು ಸುಗಮಗೊಳಿಸುತ್ತದೆ ಮತ್ತು ಡೇಟಾ-ಚಾಲಿತ ನಿರ್ಧಾರ ಕೈಗೊಳ್ಳುವಿಕೆಯನ್ನು ಸಕ್ರಿಯಗೊಳಿಸುತ್ತದೆ.
- ಮಾರ್ಚ್ 2026ರ ಹೊತ್ತಿಗೆ, ದೇಶದಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಈ ಮೂಲಸೌಕರ್ಯ ಯೋಜನೆಗಳಿಗಾಗಿ ಸರಿಸುಮಾರು 20 ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ; ಈ ಅಂಕಿ-ಅಂಶವು ಯೋಜನೆಗಳ ಪರಿಷ್ಕೃತ ಅಂದಾಜು ವೆಚ್ಚದ ಸರಿಸುಮಾರು ಶೇಕಡಾ 48.02 ರಷ್ಟನ್ನು ಪ್ರತಿನಿಧಿಸುತ್ತದೆ.



**1,428**

ಯೋಜನೆಗಳು ಸಾರಿಗೆ ಮತ್ತು ಲಾಜಿಸ್ಟಿಕ್ಸ್ (ಸರಕು ಸಾಗಣೆ) ವಲಯಕ್ಕೆ ಸಂಬಂಧಿಸಿವೆ (ಅತಿ ಹೆಚ್ಚು ಸಂಖ್ಯೆ), ಇದು 22.66 ಲಕ್ಷ ಕೋಟಿ ರೂಪಾಯಿಗಳ ವೆಚ್ಚವನ್ನು ಒಳಗೊಂಡಿದೆ. ದೇಶವು ಸಂಪರ್ಕ-ಆಧಾರಿತ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ.

**777**

ಯೋಜನೆಗಳು ಶೇಕಡಾ 80 ಕ್ಕಿಂತ ಹೆಚ್ಚು ಪ್ರಗತಿಯ ದರವನ್ನು ಸಾಧಿಸಿವೆ.

ನಿರ್ಮಾಣ ಹಂತದಲ್ಲಿರುವ

**1,941**

ಮೂಲಸೌಕರ್ಯ ಯೋಜನೆಗಳಲ್ಲಿ, 786 ಯೋಜನೆಗಳು 1,000 ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚದ "ಮೆಗಾ ಯೋಜನೆಗಳು" ಆಗಿವೆ.

### ಯೋಜನೆಗಳು ಇನ್ನು ಮುಂದೆ ಸ್ಥಗಿತಗೊಳ್ಳುವುದಿಲ್ಲ ಅಥವಾ ವಿಳಂಬವಾಗುವುದಿಲ್ಲ

- ಪ್ರಗತಿ (**PRAGATI**) - ಅಂದರೆ ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನ ವ್ಯವಸ್ಥೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2015 ರಲ್ಲಿ ಪ್ರಾರಂಭಿಸಿದರು; ಈ ಉಪಕ್ರಮದ ಅಡಿಯಲ್ಲಿ, ತಂತ್ರಜ್ಞಾನದ ನೆರವಿನೊಂದಿಗೆ ಅವರ ನಾಯಕತ್ವದಲ್ಲಿ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ.
- ಯೋಜನೆಗಳಲ್ಲಿನ ವಿಳಂಬವನ್ನು ಕಡಿಮೆ ಮಾಡಲಾಗಿದೆ ಮತ್ತು ವೆಚ್ಚದ ಹೆಚ್ಚಳವನ್ನು ಸಹ ನಿಯಂತ್ರಿಸಲಾಗಿದೆ.

ಪ್ರಗತಿ ವೇದಿಕೆಯ ಮೂಲಕ

**₹85**

ಲಕ್ಷ ಕೋಟಿಗಳಿಗಿಂತಲೂ ಹೆಚ್ಚು ಮೌಲ್ಯದ 382 ಯೋಜನೆಗಳನ್ನು ಪರಿಶೀಲಿಸಲಾಗಿದೆ. ಎಲ್ಲೆಲ್ಲಿ ಅಡೆತಡೆಗಳು ಇದ್ದವೋ, ಅವುಗಳನ್ನು ಪ್ರಧಾನಿ ಮೋದಿ ಅವರ ನಿರ್ದೇಶನದ ಮೇರೆಗೆ ಕಾಲಮಿತಿಯಲ್ಲಿ ಪರಿಹರಿಸಲಾಗಿದೆ.

ಮುಖಪುಟ ಲೇಖನ
12 ವರ್ಷಗಳ
ವಿಕಾಸ ಯಾತ್ರೆ

## ಭಾರತವು ಈಗ ವಿಶ್ವದ ಎರಡನೇ ಅತಿ ದೊಡ್ಡ ರಸ್ತೆ ಜಾಲವನ್ನು ಹೊಂದಿದೆ

ರಾಷ್ಟ್ರೀಯ ಹೆದ್ದಾರಿ ಜಾಲದ ವಿಸ್ತರಣೆ

| ಮಾರ್ಚ್ 2014 | ಫೆಬ್ರವರಿ 2026 |
|---|---|
| 91,287 ಕಿ.ಮೀ | 1,46,572 ಕಿ.ಮೀ |

ಪ್ರವೇಶ ನಿಯಂತ್ರಿತ ರಾಷ್ಟ್ರೀಯ ಹೈ-ಸ್ಪೀಡ್ ಕಾರಿಡಾರ್ ಗಳು/ಎಕ್ಸ್ ಪ್ರೆಸ್ ವೇ ಗಳ ಉದ್ದವು 2014 ರಲ್ಲಿದ್ದ ಕೇವಲ 93 ಕಿ.ಮೀ ನಿಂದ ಈಗ **3,052** ಕಿ.ಮೀ ಗೆ ತಲುಪಿದೆ.

ಭಾರತಮಾಲಾ ಪರಿಯೋಜನೆಯಡಿ, ಫೆಬ್ರವರಿ 2026 ರ ಹೊತ್ತಿಗೆ **22,223** ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ, ಹಾಗೂ 26,425 ಕಿ.ಮೀ ಹೆದ್ದಾರಿಗಳನ್ನು ಮಂಜೂರು ಮಾಡಲಾಗಿದೆ.



## ರೈಲ್ವೆ: ಹೆಚ್ಚು ಸ್ವಚ್ಛ, ಸುರಕ್ಷಿತ ಮತ್ತು ವೇಗ

- ರೈಲ್ವೆ ಇಲಾಖೆಗೆ ನೀಡುವ ಬಜೆಟ್ ಬೆಂಬಲವು ಒಂಬತ್ತು ಪಟ್ಟು ಹೆಚ್ಚಾಗಿದೆ; 2014-15 ರಲ್ಲಿ ಇದ್ದ 32,000 ಕೋಟಿ ರೂಪಾಯಿಗಳಿಂದ, ಇದು 2025-26 ರಲ್ಲಿ 2.78 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ.

**1,338** ನಿಲ್ದಾಣಗಳನ್ನು ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿ ಮರುಅಭಿವೃದ್ಧಿ ಮಾಡಲಾಗುತ್ತಿದೆ, ಇದರಲ್ಲಿ 200ಕ್ಕೂ ಹೆಚ್ಚು ನಿಲ್ದಾಣಗಳ ಕೆಲಸ ಪೂರ್ಣಗೊಂಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2025-26 ರಲ್ಲಿ 119 ನಿಲ್ದಾಣಗಳನ್ನು ಉದ್ಘಾಟಿಸಿದರು.

ಪಿಎಂ ಗತಿ ಶಕ್ತಿ ಅಡಿಯಲ್ಲಿ **139** ಟರ್ಮಿನಲ್ ಗಳು ಕಾರ್ಯಾರಂಭ ಮಾಡಿವೆ; ಹೆಚ್ಚುವರಿಯಾಗಿ 300 ಸ್ಥಳಗಳಲ್ಲಿ ಹೊಸ ಟರ್ಮಿನಲ್ ಗಳ ಅಭಿವೃದ್ಧಿಗೆ ಅನುಮೋದನೆ ನೀಡಲಾಗಿದೆ.

**162** ವಂದೇ ಭಾರತ್ ರೈಲು ಸೇವೆಗಳನ್ನು ಪ್ರಾರಂಭಿಸಲಾಗಿದ್ದು, 4,500 ರೈಲು ಸೆಟ್ ಗಳ ಗುರಿಯನ್ನು ಹೊಂದಲಾಗಿದೆ. 2030ರ ಹೊತ್ತಿಗೆ, 800 ರೈಲುಗಳು ಕಾರ್ಯಾಚರಣೆ ನಡೆಸುವ ನಿರೀಕ್ಷೆಯಿದೆ.

- ವಂದೇ ಭಾರತ್ ಸ್ಲೀಪರ್ ಸೇವೆಯನ್ನು ಜನವರಿ 2026 ರಲ್ಲಿ ಗುವಾಹಟಿ-ಹೌರಾ ಮಾರ್ಗದಲ್ಲಿ ಪ್ರಾರಂಭಿಸಲಾಯಿತು; ವಂದೇ ಭಾರತ್ ಸ್ಲೀಪರ್ ರೈಲುಗಳ 260 ರೈಲು ಸೆಟ್ ಗಳನ್ನು ಪ್ರಾರಂಭಿಸುವ ಯೋಜನೆಗಳು ಜಾರಿಯಲ್ಲಿವೆ.
- 51 ಕಿಲೋಮೀಟರ್ ಉದ್ದದ ಬೈರಾಬಿ-ಸೈರಾಂಗ್ ರೈಲು ಮಾರ್ಗ ಪೂರ್ಣಗೊಳ್ಳುವುದರೊಂದಿಗೆ, ಮಿಜೋರಾಂ ಈಗ ರೈಲು ಜಾಲಕ್ಕೆ ಸಂಪರ್ಕ ಹೊಂದಿದೆ.
- ಜನವರಿ 22, 2026 ರಂದು, 42 ವ್ಯಾಗನ್ ಗಳನ್ನು ಒಳಗೊಂಡ ಮತ್ತು 2,768 ಮೆಟ್ರಿಕ್ ಟನ್ ಅಕ್ಕಿಯನ್ನು ಹೊತ್ತ ಮೊದಲ ಸಂಪೂರ್ಣ ಸರಕು ಸಾಗಣೆ ರೈಲು ಅನಂತನಾಗ್ ಗೆ ತಲುಪಿತು.
- ಏಳು ಹೊಸ ಹೈ-ಸ್ಪೀಡ್ ರೈಲು ಕಾರಿಡಾರ್ ಗಳನ್ನು ಅಭಿವೃದ್ಧಿಪಡಿಸಲಾಗುವುದು. ಸರಿಸುಮಾರು 4,000 ಕಿ.ಮೀ ವಿಸ್ತಾರದ ಜಾಲವನ್ನು ರಚಿಸಲಾಗುವುದು. ಇದಕ್ಕೆ 16 ಲಕ್ಷ ಕೋಟಿ ರೂಪಾಯಿಗಳ ಹೂಡಿಕೆಯನ್ನು ನಿರೀಕ್ಷಿಸಲಾಗಿದೆ.

## ಕಡಲ ಮೂಲಸೌಕರ್ಯವನ್ನು ಬಲಪಡಿಸುವುದು

**ಅಧಿಸೂಚಿತ ರಾಷ್ಟ್ರೀಯ ಜಲಮಾರ್ಗಗಳು**
2014 ರಲ್ಲಿದ್ದ 5 ರಿಂದ 2026 ರಲ್ಲಿ 111 ಕ್ಕೆ ಹೆಚ್ಚಾಗಿವೆ.

**ಭಾರತೀಯ ಧ್ವಜದೊಂದಿಗಿನ ಹಡಗುಗಳು/ನೌಕೆಗಳ ಸಂಖ್ಯೆ**
2014 ರಲ್ಲಿದ್ದ 1,250 ರಿಂದ 2026 ರಲ್ಲಿ 1,593 ಕ್ಕೆ ಹೆಚ್ಚಾಗಿದೆ.

**ಪ್ರಮುಖ ಬಂದರುಗಳ ಸಾಮರ್ಥ್ಯವು ಸುಮಾರು ದುಪ್ಪಟ್ಟಾಗಿದೆ**
2014 ರಲ್ಲಿದ್ದ 873 ಎಂಎಂಟಿಪಿಎ (ವರ್ಷಕ್ಕೆ ಮಿಲಿಯನ್ ಮೆಟ್ರಿಕ್ ಟನ್) ನಿಂದ 2026 ರಲ್ಲಿ 1,726 ಎಂಎಂಟಿಪಿಎ ಗೆ ಹೆಚ್ಚಾಗಿದೆ.



**"ಇಂದು ದೇಶಾದ್ಯಂತ ಬೃಹತ್ ಯೋಜನೆಗಳ ಕೆಲಸಗಳು ಅತ್ಯಂತ ವೇಗವಾಗಿ ಪ್ರಗತಿಯಲ್ಲಿವೆ. ನೀವು ಉತ್ತರದ ಕಡೆಗೆ ನೋಡಿದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ವಿಶ್ವದ ಅತ್ಯಂತ ಎತ್ತರದ ರೈಲ್ವೆ ಸೇತುವೆಗಳಲ್ಲಿ ಒಂದಾದ ಚೆನಾಬ್ ಸೇತುವೆಯನ್ನು ನಿರ್ಮಿಸಲಾಗಿದೆ. ನೀವು ಪಶ್ಚಿಮಕ್ಕೆ ಸಾಗಿದರೆ, ದೇಶದ ಅತಿ ಉದ್ದದ ಸಮುದ್ರ ಸೇತುವೆಯಾದ ಅಟಲ್ ಸೇತುವೆಯನ್ನು ಮುಂಬೈನಲ್ಲಿ ನಿರ್ಮಿಸಲಾಗಿದೆ. ಮತ್ತು ನೀವು ಪೂರ್ವಕ್ಕೆ ಪ್ರಯಾಣಿಸಿದರೆ, ಅಸ್ಸಾಂನಲ್ಲಿನ ಬೋಗಿಬೀಲ್ ಸೇತುವೆಗೆ ನೀವು ಸಾಕ್ಷಿಯಾಗುತ್ತೀರಿ. ದಕ್ಷಿಣದಲ್ಲಿ, ವಿಶ್ವದ ಆಯ್ದ ವರ್ಟಿಕಲ್ ಲಿಫ್ಟ್ (ಲಂಬವಾಗಿ ಎತ್ತರಕ್ಕೆ ತೆರೆದುಕೊಳ್ಳುವ) ಸೇತುವೆಗಳಲ್ಲಿ ಒಂದಾದ ಪಂಬನ್ ಸೇತುವೆಯ ನಿರ್ಮಾಣವು ಪೂರ್ಣಗೊಂಡಿದೆ. ದೇಶದ ಮೊದಲ ಬುಲೆಟ್ ರೈಲಿನ ಕೆಲಸವೂ ವೇಗವಾಗಿ ಪ್ರಗತಿಯಲ್ಲಿದೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

ಮುಖಪುಟ ಲೇಖನ
12 ವರ್ಷಗಳ
ವಿಕಾಸ ಯಾತ್ರೆ



## ಮೆಟ್ರೋ ರೈಲು ಜಾಲ

**1,155**

ಕಿಲೋಮೀಟರ್ — ಇದು 2026 ರ ವೇಳೆಗೆ ಇರುವ ಭಾರತದ ಮೆಟ್ರೋ ಜಾಲದ ಒಟ್ಟು ಉದ್ದವಾಗಿದೆ. ಇದು 2014 ರಲ್ಲಿದ್ದ 248 ಕಿಲೋಮೀಟರ್ ಗಳಿಗೆ ಹೋಲಿಸಿದರೆ ಗಮನಾರ್ಹ ವಿಸ್ತರಣೆಯಾಗಿದೆ.

- ಕೇಂದ್ರ ಬಜೆಟ್ 2026-27 ರಲ್ಲಿ ಮೂಲಸೌಕರ್ಯ-ಆಧಾರಿತ ಬೆಳವಣಿಗೆ ಮತ್ತು ಸಮತೋಲಿತ ನಗರಾಭಿವೃದ್ಧಿಯನ್ನು ಬಲಪಡಿಸುವ ಉದ್ದೇಶದಿಂದ 'ಮೂಲಸೌಕರ್ಯ ಅಪಾಯ ಖಾತರಿ ನಿಧಿ' ಮತ್ತು 'ನಗರ ಆರ್ಥಿಕ ವಲಯ'ಗಳಂತಹ ಹೊಸ ಕ್ರಮಗಳನ್ನು ಪರಿಚಯಿಸಲಾಗಿದೆ.
- ಸರ್ಕಾರದ ಆಸ್ತಿಗಳ ನಗದೀಕರಣದಿಂದ 1.5 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಆದಾಯ ಬಂದಿದ್ದು, ಈ ಹಣವನ್ನು ಹೊಸ ಯೋಜನೆಗಳಿಗೆ ಮರುಬಳಕೆ ಮಾಡಲು ಸುಗಮಗೊಳಿಸಲಾಗಿದೆ. ಈ ಉಪಕ್ರಮವು ಜಾಗತಿಕ ಹೂಡಿಕೆದಾರರನ್ನು ಯಶಸ್ವಿಯಾಗಿ ಆಕರ್ಷಿಸಿದೆ.

## ಮೂಲಸೌಕರ್ಯದಲ್ಲಿ ಹೆಚ್ಚಿದ ಖಾಸಗಿ ಸಹಭಾಗಿತ್ವ

- ವಿಶ್ವಬ್ಯಾಂಕ್ ಪ್ರಕಾರ, ದಕ್ಷಿಣ ಏಷ್ಯಾದಲ್ಲಿ ಮೂಲಸೌಕರ್ಯದಲ್ಲಿ ಖಾಸಗಿ ಸಹಭಾಗಿತ್ವದ (ಪಿಪಿಐ) ಹೂಡಿಕೆಯನ್ನು ಸ್ವೀಕರಿಸುವಲ್ಲಿ ಭಾರತವು ಅತಿ ದೊಡ್ಡ ದೇಶವಾಗಿ ಹೊರಹೊಮ್ಮಿದೆ. ಇದು ಇಡೀ ವಲಯದ ಒಟ್ಟು ಹೂಡಿಕೆಯ ಶೇಕಡಾ 90 ಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದೆ.



## ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುತ್ತಿರುವ ಮೂಲಸೌಕರ್ಯ ವೆಚ್ಚ

- ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪ್ರಕಾರ, ಮೂಲಸೌಕರ್ಯದಲ್ಲಿ ಹೂಡಿಕೆ ಮಾಡುವ ಪ್ರತಿ 1 ಮಿಲಿಯನ್ ಡಾಲರ್ (ಸುಮಾರು 8.3 ಕೋಟಿ ರೂಪಾಯಿ) ಹಣವು 7 ರಿಂದ 30 ಹೊಸ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಇದು ಉಕ್ಕು, ಸಿಮೆಂಟ್ ಮತ್ತು ಸಾರಿಗೆಯಂತಹ ವಲಯಗಳಿಗೆ ನೇರ ಪ್ರಯೋಜನಗಳನ್ನು ನೀಡುತ್ತದೆ, ಈ ವಲಯಗಳಲ್ಲಿ ಹೊಸ ಉದ್ಯೋಗಾವಕಾಶಗಳು ವೇಗವಾಗಿ ಬೆಳವಣಿಗೆ ಹೊಂದುತ್ತಿವೆ.
- ಕೇವಲ ಒಂದೇ ವರ್ಷದಲ್ಲಿ ಮೂಲಸೌಕರ್ಯಗಳಿಗಾಗಿ 12 ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ಮಾಡುತ್ತಿರುವುದು ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸುವ ನಿರೀಕ್ಷೆಯಿದೆ. ಅಂದಾಜುಗಳ ಪ್ರಕಾರ, ಕೇವಲ ನಿರ್ಮಾಣ ವಲಯವೊಂದೇ 2030 ರ ಹೊತ್ತಿಗೆ 10 ಕೋಟಿ ಜನರಿಗೆ ಉದ್ಯೋಗವನ್ನು ಸೃಷ್ಟಿಸುವ ನಿರೀಕ್ಷೆಯಿದೆ.

## ಗ್ರಾಮೀಣ ಸಂಪರ್ಕದ ಹೆಚ್ಚಳ...
## ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ




**8.25**

ಲಕ್ಷ ಕಿಲೋಮೀಟರ್: ಡಿಸೆಂಬರ್ 2025ರ ವೇಳೆಗೆ ನಿರ್ಮಿಸಲಾದ ರಸ್ತೆಗಳ ಒಟ್ಟು ಉದ್ದ.

**7.87** ಲಕ್ಷ ಕಿಮೀ: ಯೋಜನೆಯ ಪ್ರಾರಂಭದಿಂದ ಡಿಸೆಂಬರ್ 2025 ರವರೆಗೆ ಅನುಮೋದಿಸಲಾದ ಗ್ರಾಮೀಣ ರಸ್ತೆಗಳ ಉದ್ದ.

## ಮೂಲಸೌಕರ್ಯ ಯೋಜನೆಗಳಿಗೆ ವೇಗ ನೀಡುತ್ತಿರುವ 'ಪಿಎಂ ಗತಿ ಶಕ್ತಿ'

**16.10** ಲಕ್ಷ ಕೋಟಿ ರೂಪಾಯಿ

ಮೌಲ್ಯದ 352 ಮೂಲಸೌಕರ್ಯ ಯೋಜನೆಗಳನ್ನು ಪಿಎಂ ಗತಿ ಶಕ್ತಿ ರಾಷ್ಟ್ರೀಯ ಮಹಾ ಯೋಜನೆ ಮೂಲಕ ನೆಟ್ವರ್ಕ್ ಪ್ಲಾನಿಂಗ್ ಗ್ರೂಪ್ ಪರಿಶೀಲಿಸಿದೆ.

ಇದರಲ್ಲಿ 201 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪೈಕಿ 167 ಯೋಜನೆಗಳು ಪ್ರಸ್ತುತ ಅನುಷ್ಠಾನದ ಹಂತದಲ್ಲಿವೆ.



# ವಿಜ್ಞಾನ ಮತ್ತು ತಂತ್ರಜ್ಞಾನ: ಪಾರದರ್ಶಕತೆ ಮತ್ತು ರೂಪಾಂತರದ ಯುಗ

*ಶಾಸ್ತ್ರಗಳು ಹೀಗೆ ಹೇಳುತ್ತವೆ: "ಜ್ಞಾನಮ್ ವಿಜ್ಞಾನ ಸಹಿತಮ್ ಯತ್ ಜ್ಞಾತ್ವಾ ಮೋಕ್ಷ್ಯಸೇ ಅಶುಭಾತ್" (ಜ್ಞಾನ ಮತ್ತು ವಿಜ್ಞಾನ ಎರಡನ್ನೂ ತಿಳಿದಾಗ ಮಾತ್ರ ಮನುಷ್ಯನು ಎಲ್ಲಾ ಸಂಕಟಗಳಿಂದ ಮುಕ್ತಿ ಹೊಂದುತ್ತಾನೆ.) ವಿಜ್ಞಾನವು ಪರಿಹಾರಗಳು, ಅಭಿವೃದ್ಧಿ ಮತ್ತು ನಾವೀನ್ಯತೆಗಳಿಗೆ ಅತ್ಯಂತ ಭದ್ರವಾದ ಬುನಾದಿಯಾಗಿ ಕಾರ್ಯನಿರ್ವಹಿಸುತ್ತದೆ. ಇದೇ ನಂಬಿಕೆಯಿಂದ ಪ್ರೇರಿತವಾದ ಇಂದಿನ 'ನವ ಭಾರತವು', "ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್" ಮತ್ತು ಈಗ ಅದರೊಂದಿಗೆ "ಜೈ ಅನುಸಂಧಾನ್" ಎಂಬ ಘೋಷಣೆಯಡಿ ಮುನ್ನಡೆಯುತ್ತಿದೆ. ಈ ನವ ಭಾರತದ ಯಶೋಗಾಥೆಯನ್ನು ಬರೆಯುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಪ್ರಮುಖ ಸಾಧನಗಳಾಗಿ ಹೊರಹೊಮ್ಮಿವೆ.*

## ಜಾಗತಿಕ ವಿಜ್ಞಾನ ಮತ್ತು ತಂತ್ರಜ್ಞಾನ ಸೂಚ್ಯಂಕಗಳಲ್ಲಿ ಭಾರತದ ಅದ್ಭುತ ಸಾಧನೆ




### ಜಾಗತಿಕ ನಾವೀನ್ಯತೆ ಸೂಚ್ಯಂಕ (ಜಿಐಐ) 2025

ವಿಶ್ವದ ಅಗ್ರಗಣ್ಯ ನಾವೀನ್ಯತೆ ಆರ್ಥಿಕತೆಗಳ ಪೈಕಿ ಭಾರತವು 38 ನೇ ಸ್ಥಾನವನ್ನು ಪಡೆದುಕೊಂಡಿದೆ.

### ಡಬ್ಲ್ಯೂಪಿಒ ವರದಿ 2023

ಬೌದ್ಧಿಕ ಆಸ್ತಿ (ಐಪಿ) ಸಲ್ಲಿಕೆಗಳ ವಿಷಯದಲ್ಲಿ ಭಾರತವು ಜಾಗತಿಕವಾಗಿ 6 ನೇ ಸ್ಥಾನದಲ್ಲಿದೆ.

### ನೆಟ್ವರ್ಕ್ ರೆಡಿನೆಸ್ ಸೂಚ್ಯಂಕ (ಎನ್ ಆರ್ ಐ) 2024




- ಎನ್ ಆರ್ ಐ ಎಂಬುದು ಪ್ರಪಂಚದಾದ್ಯಂತದ 133 ಆರ್ಥಿಕತೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐಸಿಟಿ) ಬಳಕೆ ಹಾಗೂ ಅದರ ಪ್ರಭಾವವನ್ನು ನಿರ್ಣಯಿಸುವ ಪ್ರಮುಖ ಜಾಗತಿಕ ಸೂಚ್ಯಂಕಗಳಲ್ಲಿ ಒಂದಾಗಿದೆ.
- ಜಾಗತಿಕವಾಗಿ ಸಂಶೋಧನಾ ಪ್ರಕಟಣೆಗಳ ಸಂಖ್ಯೆಯಲ್ಲಿ ಭಾರತವು 3 ನೇ ಸ್ಥಾನದಲ್ಲಿದೆ.


## ಕಳೆದ ದಶಕದಲ್ಲಿ ಸಂಭವಿಸಿದ ಪ್ರಮುಖ ರೂಪಾಂತರಗಳು

- ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಮೇಲಿನ ವೆಚ್ಚವು ದುಪ್ಪಟ್ಟಾಗಿದೆ.
- ಮಂಜೂರಾದ ಪೇಟೆಂಟ್ ಗಳ ಸಂಖ್ಯೆಯು 1,00,000 ರ ಗಡಿಯನ್ನು ದಾಟಿದೆ; 2014 ರಲ್ಲಿ ಈ ಸಂಖ್ಯೆ ಕೇವಲ 5,978 ಆಗಿತ್ತು. ಅಂದರೆ ಪೇಟೆಂಟ್ ಗಳ ಪ್ರಮಾಣದಲ್ಲಿ 17 ಪಟ್ಟು ಹೆಚ್ಚಳವಾಗಿದೆ.
- 2,00,000 ಕ್ಕೂ ಹೆಚ್ಚು ನವೋದ್ಯಮಗಳೊಂದಿಗೆ, ಭಾರತವು ಇಂದು ವಿಶ್ವದ ಮೂರನೇ ಅತಿ ದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆಯಾಗಿ ಹೊರಹೊಮ್ಮಿದೆ.

ಇದರಲ್ಲಿ ಸ್ವಚ್ಛ ಇಂಧನ ಮತ್ತು ಸುಧಾರಿತ ವಸ್ತುಗಳಂತಹ ವಲಯಗಳಲ್ಲಿ **6,000ಕ್ಕೂ ಹೆಚ್ಚು** 'ಡೀಪ್ ಟೆಕ್' ನವೋದ್ಯಮಗಳು ಕಾರ್ಯನಿರ್ವಹಿಸುತ್ತಿವೆ.

- ಭಾರತದ ಸೆಮಿಕಂಡಕ್ಟರ್ ವಲಯವು ಹೊಸ ಎತ್ತರಕ್ಕೆ ಜಿಗಿದಿದೆ; ಶೀಘ್ರದಲ್ಲೇ ಸೆಮಿಕಂಡಕ್ಟರ್ ಮಿಷನ್ 2.0 ಚಾಲನೆಗೊಳ್ಳಲಿದೆ.

### ಜೈವಿಕ ಆರ್ಥಿಕತೆ




### ರಾಷ್ಟ್ರೀಯ ಕ್ವಾಂಟಮ್ ಮಿಷನ್

4 ಥೀಮ್ಯಾಟಿಕ್ ಹಬ್ ಗಳನ್ನು ಸ್ಥಾಪಿಸಲಾಗಿದೆ; ಇದರಲ್ಲಿ 43 ಸಂಸ್ಥೆಗಳ 152 ಸಂಶೋಧಕರು ಮತ್ತು 17 ಪ್ರಾಜೆಕ್ಟ್ ತಂಡಗಳು ಒಳಗೊಂಡಿವೆ.

- ಭಾರತವು ವಿಶ್ವದ ಮೊದಲ ಮತ್ತು ಅತ್ಯಂತ ಯಶಸ್ವಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಹೊಂದಿದೆ. 2,18,000 ಗ್ರಾಮ ಪಂಚಾಯತಿಗಳನ್ನು ಆಪ್ಟಿಕಲ್ ಫೈಬರ್ ಮೂಲಕ ಸಂಪರ್ಕಿಸಲಾಗಿದೆ, ಇದು ನಾಗರಿಕರ ಜೀವನವನ್ನು ಸುಗಮಗೊಳಿಸಿದೆ.
- ಇತ್ತೀಚಿನ ವರ್ಷಗಳಲ್ಲಿ ಭಾರತದ ಬಾಹ್ಯಾಕಾಶ ಕಾರ್ಯಕ್ರಮಗಳು ಚಂದ್ರ ಮತ್ತು ಮಂಗಳದವರೆಗೂ ತಲುಪಿವೆಯಾದರೂ, ಈ ಸುಧಾರಿತ ತಂತ್ರಜ್ಞಾನದ ಪ್ರಯೋಜನಗಳನ್ನು ದೇಶದ ರೈತರು ಮತ್ತು ಮೀನುಗಾರರಿಗೂ ವಿಸ್ತರಿಸಲಾಗಿದೆ.
- ಮಹಿಳೆಯರು ಸಲ್ಲಿಸುವ ಪೇಟೆಂಟ್ ಗಳ ವಾರ್ಷಿಕ ಸಂಖ್ಯೆ 5,000 ಮೀರಿದೆ.
- ಇನ್ ಸ್ಪೈರ್ ಮಾನಕ್ (INSPIRE MANAK) ಯೋಜನೆಯು ಸ್ಟೆಮ್ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ) ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡಿದೆ. 2025-26 ರಲ್ಲಿ, ಶಾಲೆಗಳಿಂದ ಒಟ್ಟು 1.147 ಮಿಲಿಯನ್ (11.47 ಲಕ್ಷ) ಆಲೋಚನೆಗಳು ಮತ್ತು ಆವಿಷ್ಕಾರಗಳನ್ನು ಸಂಗ್ರಹಿಸಲಾಗಿದೆ; ವಿಶೇಷವೆಂದರೆ, ಇದರಲ್ಲಿ ದಾಖಲಾದವರ ಪೈಕಿ ಶೇಕಡಾ 52 ರಷ್ಟು ಹೆಣ್ಣುಮಕ್ಕಳಾಗಿದ್ದಾರೆ.
- ಸ್ಟೆಮ್ ಶಿಕ್ಷಣದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಶೇಕಡಾ 43 ಕ್ಕೆ ತಲುಪಿದ್ದು, ಇದು ಜಾಗತಿಕ ಸರಾಸರಿಗಿಂತಲೂ ಹೆಚ್ಚಾಗಿದೆ.
- 10,000 ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಸ್ಥಾಪಿಸಲಾಗಿದ್ದು, ಅಲ್ಲಿ 10 ಮಿಲಿಯನ್ ಗಿಂತಲೂ ಹೆಚ್ಚು ಮಕ್ಕಳು ಪ್ರಸ್ತುತ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಭಾರತವು ಈಗ ಇನ್ನೂ 25,000 ಹೊಸ ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಆರಂಭಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.
- ಕಳೆದ ಕೆಲವು ವರ್ಷಗಳಲ್ಲಿ ದೇಶದಲ್ಲಿ 7 ಹೊಸ ಐಐಟಿಗಳು ಮತ್ತು 16 ಐಐಐಟಿಗಳನ್ನು ಸ್ಥಾಪಿಸಲಾಗಿದೆ.
- ನೂತನ ಶಿಕ್ಷಣ ನೀತಿಯಡಿ (ಎನ್ ಇ ಪಿ), ಯುವ ಪೀಳಿಗೆಯು ಇನ್ನು ಮುಂದೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ನಂತಹ ಸ್ಟೆಮ್ ಕೋರ್ಸ್ ಗಳನ್ನು ತಮ್ಮದೇ ಆದ ಸ್ಥಳೀಯ ಭಾಷೆಗಳಲ್ಲಿ ಕಲಿಯಲು ಸಾಧ್ಯವಾಗುತ್ತದೆ
- ಇಂದು ಚಿಲ್ಲರೆ ವ್ಯಾಪಾರದಿಂದ ಲಾಜಿಸ್ಟಿಕ್ಸ್ ಹಾಗೂ ಗ್ರಾಹಕ ಸೇವೆಯಿಂದ ಮಕ್ಕಳ ಮನೆಗೆಲಸದವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಕೃತಕ ಬುದ್ಧಿಮತ್ತೆ ಬಳಕೆಯಾಗುತ್ತಿದೆ. ಈ ನಿಟ್ಟಿನಲ್ಲಿ ಭಾರತವು ಇಂಡಿಯಾ ಎಐ ಮಿಷನ್ ಗಾಗಿ ₹10,000 ಕೋಟಿಗೂ ಹೆಚ್ಚು ಹೂಡಿಕೆ ಮಾಡುತ್ತಿದೆ.

**ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ರೀತಿಯಲ್ಲಿ ಬೇರೆ ಯಾವ ನಾಯಕರೂ ಮಾಡಿಲ್ಲ. ರಾಜಕೀಯ ಮತ್ತು ನೀತಿ ನಿರೂಪಣೆ ಎರಡೂ ಕ್ಷೇತ್ರಗಳಲ್ಲಿ ಅವರು ಈ ತಂತ್ರಜ್ಞಾನವನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ.**

## ಭಾರತದ ಡಿಜಿಟಲ್ ಜಿಗಿತ

ಕೇವಲ 22 ತಿಂಗಳುಗಳಲ್ಲಿ 5ಜಿ ಸೇವೆಗಳು ದೇಶದ ಶೇಕಡಾ 99.6 ರಷ್ಟು ಜಿಲ್ಲೆಗಳನ್ನು ತಲುಪಿವೆ.

ಪ್ರಸ್ತುತ, ದೇಶದ 70 ಜಿಲ್ಲೆಗಳಲ್ಲಿ **99.9%** 5ಜಿ ಸೇವೆಗಳು ಲಭ್ಯವಿವೆ.

- ಭಾರತದಲ್ಲಿ ಹೊಸ ತಂತ್ರಜ್ಞಾನಗಳ ಅಳವಡಿಕೆಗೆ 5ಜಿ ಅಪಾರ ಅವಕಾಶಗಳನ್ನು ಮುಕ್ತಗೊಳಿಸುತ್ತಿದೆ.
- ಇಂಟರ್ನೆಟ್ ಡೇಟಾ ದರವು ಶೇಕಡಾ 97.07 ರಷ್ಟು ಕುಸಿದಿದೆ, ಇದು ಸಾಮಾನ್ಯ ಜನರಿಗೆ ಇಂಟರ್ನೆಟ್ ಹೆಚ್ಚು ಕೈಗೆಟುಕುವಂತೆ ಮತ್ತು ಸುಲಭವಾಗಿ ಸಿಗುವಂತೆ ಮಾಡಿದೆ.
- 6ಜಿ ತಂತ್ರಜ್ಞಾನದಲ್ಲಿ ಜಾಗತಿಕ ನಾಯಕನಾಗಲು ಭಾರತವು ಸಜ್ಜಾಗಿದೆ; 6ಜಿ ಗೆ ಸಂಬಂಧಿಸಿದ ಜಾಗತಿಕ ಪೇಟೆಂಟ್ ಗಳಿಗೆ ಸರಿಸುಮಾರು ಶೇಕಡಾ 10 ರಷ್ಟು ಕೊಡುಗೆ ನೀಡುವ ಗುರಿಯನ್ನು ಹೊಂದಲಾಗಿದೆ. ಇಂದಿನವರೆಗೆ, ಭಾರತವು ಈಗಾಗಲೇ ಸುಮಾರು 4,000 ಪೇಟೆಂಟ್ ಗಳನ್ನು ಮಂಜೂರು ಮಾಡಿದೆ.

**7.22** ಲಕ್ಷ ಕಿಲೋಮೀಟರ್ ಆಪ್ಟಿಕಲ್ ಫೈಬರ್ ಕೇಬಲ್ ಅನ್ನು ಭಾರತನೆಟ್ ಯೋಜನೆಯಡಿ ಹಾಕಲಾಗಿದ್ದು, ಇದು ದೇಶಾದ್ಯಂತ ಇಂಟರ್ನೆಟ್ ಸಂಪರ್ಕವನ್ನು ಗಮನಾರ್ಹವಾಗಿ ಬಲಪಡಿಸಿದೆ.

**ಭಾರತದಲ್ಲಿ ಇಂಟರ್ನೆಟ್ ಸಂಪರ್ಕಗಳ ಸಂಖ್ಯೆ**

**105.9** ಕೋಟಿ — ಡಿಸೆಂಬರ್ 2025

**25.5** ಕೋಟಿ — 2014

ಕಳೆದ 12 ವರ್ಷಗಳಲ್ಲಿ ಶೇಕಡಾ 300 ಕ್ಕಿಂತ ಅಧಿಕ ಹೆಚ್ಚಳಕ್ಕೆ ಸಾಕ್ಷಿಯಾಗಿದೆ

**1ಜಿಬಿ ಡೇಟಾದ ಪ್ರಸ್ತುತ ವೆಚ್ಚ**

**₹7.87** — ಡಿಸೆಂಬರ್ 2025

**₹308** — 2014

- ಫೆಬ್ರವರಿ 2026ರ ವೇಳೆಗೆ ಮೊಬೈಲ್ ಚಂದಾದಾರರ ಸಂಖ್ಯೆ 127.33 ಕೋಟಿಗೆ ತಲುಪಿದೆ. ಡಿಜಿಟಲ್ ಪರಿಸರ ವ್ಯವಸ್ಥೆಯಿಂದಾಗಿ ಹಣವನ್ನು ಕಳುಹಿಸುವುದು ಮತ್ತು ಖರೀದಿಗೆ ಪಾವತಿ ಮಾಡುವುದು ಸುಲಭ ಮತ್ತು ವೇಗವಾಗಿದೆ.
- "ಮೊಬೈಲ್ ಟ್ರಿನಿಟಿ" ಮೂಲಕ, ಸರ್ಕಾರಿ ಯೋಜನೆಗಳ ಪ್ರಯೋಜನಗಳು ನೇರವಾಗಿ ಉದ್ದೇಶಿತ ಫಲಾನುಭವಿಗಳನ್ನು ತಲುಪುತ್ತಿವೆ. ಇದು ನಕಲು ಮತ್ತು ವಂಚನೆಯನ್ನು ಕಡಿಮೆ ಮಾಡಲು ಕಾರಣವಾಗಿದೆ.

### ಕದ್ದ ಮೊಬೈಲ್ ಫೋನ್ ಗಳನ್ನು ಪತ್ತೆಹಚ್ಚಲು ತಂತ್ರಜ್ಞಾನ ಸಹಾಯ ಮಾಡುತ್ತದೆ



**10** ಲಕ್ಷಕ್ಕೂ ಹೆಚ್ಚು ಕಳೆದುಹೋದ ಅಥವಾ ಕದ್ದ ಮೊಬೈಲ್ ಫೋನ್ ಗಳನ್ನು 'ಸಂಚಾರ್ ಸಾಥಿ' ಉಪಕ್ರಮದ ಮೂಲಕ ಮರುಪಡೆಯಲಾಗಿದೆ.

ಇದು ಟೆಲಿಕಾಂ ಸಂಪನ್ಮೂಲಗಳ ದುರುಪಯೋಗವನ್ನು ತಡೆಗಟ್ಟಲು ವಿನ್ಯಾಸಗೊಳಿಸಲಾದ ತಂತ್ರಜ್ಞಾನ ಆಧಾರಿತ ಪರಿಹಾರವಾಗಿದೆ.

ಇಲ್ಲಿ, ಬಳಕೆದಾರರು ಅನುಮಾನಾಸ್ಪದ ಅಥವಾ ವಂಚನೆಯ ಕರೆಗಳು /ಸಂದೇಶಗಳನ್ನು ವರದಿ ಮಾಡಬಹುದು, ಕದ್ದ ಮೊಬೈಲ್ ಫೋನ್ ಗಳನ್ನು ವರದಿ ಮಾಡಬಹುದು ಮತ್ತು ಮೊಬೈಲ್ ಹ್ಯಾಂಡ್ ಸೆಟ್ ಅಸಲಿಯೇ ಅಥವಾ ನಕಲಿಯೇ ಎಂಬುದನ್ನು ಪರಿಶೀಲಿಸಬಹುದು.

ಈ ಅಪ್ಲಿಕೇಶನ್ **2** ಕೋಟಿಗೂ ಹೆಚ್ಚು ಡೌನ್ ಲೋಡ್ ಗಳನ್ನು ದಾಖಲಿಸಿದೆ.

ಮೇ 2025 ರಲ್ಲಿ ಪ್ರಾರಂಭವಾದಾಗಿನಿಂದ, ಫೈನಾನ್ಷಿಯಲ್ ಫ್ರಾಡ್ ರಿಸ್ಕ್ ಇಂಡಿಕೇಟರ್ (ಎಫ್ ಆರ್ ಐ) ಸಹಾಯದಿಂದ **₹2,300** ಕೋಟಿಗೂ ಹೆಚ್ಚು ಮೌಲ್ಯದ ವಂಚನೆಯ ವಹಿವಾಟುಗಳನ್ನು ತಡೆಯಲಾಗಿದೆ.

**"ವಿಜ್ಞಾನವು ವಿಸ್ತರಣೆಗೊಂಡಾಗ, ನಾವೀನ್ಯತೆಯು ಎಲ್ಲರನ್ನೂ ಒಳಗೊಂಡಾಗ ಮತ್ತು ತಂತ್ರಜ್ಞಾನವು ಪರಿವರ್ತನೆಯನ್ನು ಮುನ್ನಡೆಸಿದಾಗ, ಬೃಹತ್ ಸಾಧನೆಗಳ ಬುನಾದಿಯು ಬಲಗೊಳ್ಳುತ್ತದೆ ಮತ್ತು ದೃಢವಾಗಿ ಸ್ಥಾಪಿತವಾಗುತ್ತದೆ. ಕಳೆದ 10-11 ವರ್ಷಗಳಲ್ಲಿನ ಭಾರತದ ಪ್ರಯಾಣವು ಈ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ. ಭಾರತವು ಈಗ ಕೇವಲ ತಂತ್ರಜ್ಞಾನದ ಗ್ರಾಹಕನಾಗಿ ಉಳಿದಿಲ್ಲ; ಇದು ತಂತ್ರಜ್ಞಾನದಿಂದ ಪ್ರೇರಿತವಾದ ರೂಪಾಂತರದ ಪ್ರವರ್ತಕವಾಗಿ ಹೊರಹೊಮ್ಮಿದೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

# ಸುಧಾರಣೆಗಳು ಕೈಗಾರಿಕೆಗಳಿಗೆ ಹಾದಿ ಸುಗಮಗೊಳಿಸಿವೆ

*ಭಾರತವನ್ನು ವ್ಯಾಪಾರ ಮತ್ತು ಹೂಡಿಕೆಗೆ ಹೆಚ್ಚು ಆಕರ್ಷಕ ತಾಣವನ್ನಾಗಿ ಮಾಡುವ ನಿರಂತರ ಪ್ರಯತ್ನಗಳ ಭಾಗವಾಗಿ, ಭಾರತ ಸರ್ಕಾರವು ವ್ಯಾಪಾರ ಸುಧಾರಣಾ ಕ್ರಿಯಾಯೋಜನೆ ರೂಪಿಸುವ ಮೂಲಕ ಸಮಗ್ರ ಸುಧಾರಣೆಗಳ ಸರಣಿಯಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸುಧಾರಣೆಗಳು ದೇಶದೊಳಗೆ ಉದ್ಯಮ ವ್ಯವಹಾರ ಸ್ಥಾಪಿಸಲು ಬೇಕಾದ ಸಮಯ ಮತ್ತು ವೆಚ್ಚ ಎರಡರಲ್ಲೂ ಗಮನಾರ್ಹ ಕಡಿತಕ್ಕೆ ಕಾರಣವಾಗಿವೆ. ಪ್ರಸ್ತುತ ಕೇಂದ್ರ ಸರ್ಕಾರವು ಭಾರತದಾದ್ಯಂತ ಹೆಚ್ಚಿದ ಹೊಸ ಹೂಡಿಕೆಗಳು, ಹೊಸ ಉದ್ಯಮ ವ್ಯವಹಾರಗಳು ಮತ್ತು ಹೊಸ ಉದ್ಯೋಗಾವಕಾಶಗಳನ್ನು ಬೆಳೆಸಲು ಈ ಅನುಕೂಲಕರ ವಾತಾವರಣವನ್ನು ಬಳಸಿಕೊಳ್ಳುವ ಗುರಿ ಹೊಂದಿದೆ.*

**ವ್ಯವಹಾರವನ್ನು ಸುಲಭವಾಗಿಸಲು ಭಾರತ ಸರ್ಕಾರವು, ವ್ಯವಹಾರ ಸುಧಾರಣಾ ಕ್ರಿಯಾಯೋಜನೆ (ಬಿಆರ್‌ಎಪಿ) ಅಡಿ ಹಲವಾರು ಪ್ರಮುಖ ಸುಧಾರಣೆಗಳನ್ನು ಜಾರಿಗೆ ತರುತ್ತಿದೆ.**

- ಬಿಆರ್‌ಎಪಿ 7ನೇ ಆವೃತ್ತಿಯಲ್ಲಿ, 9,700ಕ್ಕೂ ಹೆಚ್ಚು ಸುಧಾರಣೆಗಳನ್ನು ಜಾರಿಗೆ ತರಲಾಗಿದೆ.
- ಕಾರ್ಮಿಕ, ಪರಿಸರ, ಭೂಮಿ ಮತ್ತು ತೆರಿಗೆಗೆ ಸಂಬಂಧಿಸಿದ ನಿಯಮಗಳನ್ನು ಸರಳೀಕರಿಸಲಾಗಿದೆ.
- ಪರಿಸರ ಅನುಮತಿಗಳು ಮತ್ತು ನೋಂದಣಿ ಪ್ರಕ್ರಿಯೆಗಳನ್ನು ಸರಳೀಕರಿಸಿ, ಸಮರ್ಥಗೊಳಿಸಲಾಗಿದೆ ಮತ್ತು ಡಿಜಿಟಲೀಕರಣಗೊಳಿಸಲಾಗಿದೆ.
- ಭೂಮಿ ಬಳಕೆ ಬದಲಾಯಿಸುವ ಕಾರ್ಯವಿಧಾನ ಸರಳೀಕರಿಸಲಾಗಿದೆ.
- ಕೈಗಾರಿಕಾ ಉದ್ದೇಶಗಳಿಗಾಗಿ ಭೂ ಲಭ್ಯತೆಯ ಮಾಹಿತಿಯನ್ನು ಜಿಐಎಸ್ ವೇದಿಕೆಗಳು ಮತ್ತು ಭಾರತ ಕೈಗಾರಿಕಾ ಭೂ ಬ್ಯಾಂಕ್‌ನೊಂದಿಗೆ ಸಂಯೋಜಿಸಲಾಗಿದೆ.
- ಕಟ್ಟಡ ನಿರ್ಮಾಣ ನಿಯಮಗಳಲ್ಲಿ ಮಾಡಿರುವ ಬದಲಾವಣೆಗಳು ಭೂಮಿ ವ್ಯರ್ಥವಾಗುವುದನ್ನು ಕಡಿಮೆ ಮಾಡಲು ಸಹಾಯ ಮಾಡಿವೆ.
- ಕಟ್ಟಡ ಅನುಮೋದನೆ ಪ್ರಕ್ರಿಯೆಗೆ ಸಹಾಯ ಮಾಡಲು 3ನೇ ವ್ಯಕ್ತಿಯ ಏಜೆನ್ಸಿಗಳು, ನಿರ್ದಿಷ್ಟವಾಗಿ ಖಾಸಗಿ ಸಂಸ್ಥೆಗಳು ಈಗ ತೊಡಗಿಸಿಕೊಂಡಿವೆ.
- ಸ್ವಾಧೀನ ಮತ್ತು ಪೂರ್ಣಗೊಳಿಸುವಿಕೆ ಪ್ರಮಾಣಪತ್ರಗಳನ್ನು ಪಡೆಯುವುದು ಸರಳವಾದ, ಆನ್‌ಲೈನ್ ಆಧಾರಿತ ಪ್ರಕ್ರಿಯೆಯಾಗಿದೆ.
- ವಿವಿಧ ಕಾನೂನುಗಳ ಅಡಿ ಸಣ್ಣ ಉಲ್ಲಂಘನೆಗಳನ್ನು ಅಪರಾಧ ಮುಕ್ತಗೊಳಿಸಲಾಗಿದೆ (ಕ್ರಿಮಿನಲ್ ಅಪರಾಧಗಳ ವರ್ಗದಿಂದ ತೆಗೆದುಹಾಕಲಾಗಿದೆ).
- ಸರ್ಕಾರದಿಂದ ವ್ಯವಹಾರ(ಜಿ2ಬಿ)ಗಳಿಗೆ ತಡೆರಹಿತ ಮತ್ತು ಡಿಜಿಟಲೀಕರಣಗೊಂಡ ಅನುಮೋದನೆಗಳನ್ನು ಸುಗಮಗೊಳಿಸಲು 32 ಕೇಂದ್ರ ಸಚಿವಾಲಯಗಳು, ಇಲಾಖೆಗಳು ಮತ್ತು 33 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳನ್ನು ರಾಷ್ಟ್ರೀಯ ಏಕಗವಾಕ್ಷಿ ವ್ಯವಸ್ಥೆ(ಎನ್‌ಎಸ್‌ಡಬ್ಲ್ಯುಎಸ್)ಯಲ್ಲಿ ಸಂಯೋಜಿಸಲಾಗಿದೆ.
- ಎನ್‌ಎಸ್‌ಡಬ್ಲ್ಯುಎಸ್ ಮೂಲಕ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 3,000ಕ್ಕೂ ಹೆಚ್ಚಿನ ಸರ್ಕಾರದಿಂದ ವ್ಯವಹಾರ(ಜಿ2ಬಿ) ಅನುಮೋದನೆಗಳಿಗೆ ಪ್ರವೇಶ ಸುಲಭಗೊಳಿಸಲಾಗಿದೆ. ಹೆಚ್ಚುವರಿಯಾಗಿ, ಕೇಂದ್ರ ಇಲಾಖೆಗಳಿಂದ 300ಕ್ಕೂ ಹೆಚ್ಚು ಅನುಮೋದನೆಗಳನ್ನು ಸಹ ಈ ವೇದಿಕೆಯ ಮೂಲಕ ಪ್ರವೇಶಿಸಬಹುದು.



## ನಿಯಂತ್ರಕ ಕ್ರಮಗಳ ಅನುಸರಣೆ ಹೊರೆ (ಆರ್‌ಸಿಬಿ) ಉಪಕ್ರಮ

*ಭಾರತ ಸರ್ಕಾರವು 2020ರಲ್ಲಿ ನಿಯಂತ್ರಕ ಕ್ರಮಗಳ ಅನುಸರಣೆ ಹೊರೆ(ಆರ್‌ಸಿಬಿ) ಉಪಕ್ರಮ ಪ್ರಾರಂಭಿಸಿತು. ಈ ಉಪಕ್ರಮದ ಅಡಿ, ಕೇಂದ್ರ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳು 2025ರ ವೇಳೆಗೆ ಉದ್ಯಮ ವ್ಯವಹಾರಗಳು ಮತ್ತು ನಾಗರಿಕರ ಮೇಲೆ ಹೊರೆಯಾಗಿ ಪರಿಣಮಿಸಿದ್ದ 47,000 ಅನುಸರಣೆಗಳನ್ನು ಗುರುತಿಸಿ, ಕಡಿಮೆ ಮಾಡಿವೆ.*

ಆರ್‌ಸಿಬಿ+ ಉಪಕ್ರಮದ ಅಡಿ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಾಮಾನ್ಯವಾಗಿ ಜಾರಿಗೆ ತಂದಿದ್ದ 23 ಕಾಯಿದೆಗಳಲ್ಲಿ ಗುರುತಿಸಲಾದ 6,262 ಅನುಸರಣೆಗಳ ಪೈಕಿ 4,846 ಅನುಸರಣೆಗಳನ್ನು ಕಡಿಮೆ ಮಾಡಲಾಗಿದೆ.

**ನಿಯಂತ್ರಕ ಕ್ರಮಗಳ ಅನುಸರಣೆ ಹೊರೆ**

**16,109** ಅನುಸರಣೆಗಳನ್ನು ಸರಳೀಕರಿಸಲಾಗಿದೆ.

**1,500** ಕ್ಕೂ ಹೆಚ್ಚು ಬಳಕೆಯಲ್ಲಿಲ್ಲದ ಕಾನೂನುಗಳನ್ನು ರದ್ದುಗೊಳಿಸಲಾಗಿದೆ.

**4,623** ಅನುಸರಣೆಗಳನ್ನು ಅಪರಾಧ ಮುಕ್ತಗೊಳಿಸಲಾಗಿದೆ.

**4,270** ಅನಗತ್ಯ ಮತ್ತು ನಕಲು ಅನುಸರಣೆಗಳನ್ನು ತೆಗೆದುಹಾಕಲಾಗಿದೆ.

**22,287** ಅನುಸರಣೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.

ಸುಧಾರಣಾ ಉಪಕ್ರಮವು ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಕಾಯ್ದೆ-2023ರೊಂದಿಗೆ ಪ್ರಾರಂಭವಾಯಿತು. ಈ ಕಾಯ್ದೆಯು 42 ಕೇಂದ್ರ ಕಾಯ್ದೆಗಳನ್ನು ತಿದ್ದುಪಡಿ ಮಾಡಿದೆ

**183** ನಿಬಂಧನೆಗಳನ್ನು ಅಪರಾಧ ಮುಕ್ತಗೊಳಿಸಲಾಗಿದೆ; ಶಿಕ್ಷೆಯ ಒಂದು ರೂಪವಾಗಿದ್ದ ಜೈಲು ಶಿಕ್ಷೆಯನ್ನು ಬದಲಿಸಲು ಹಣಕಾಸಿನ ದಂಡಗಳು ಮತ್ತು ಇತರೆ ಆಡಳಿತಾತ್ಮಕ ಜಾರಿ ಕಾರ್ಯವಿಧಾನಗಳನ್ನು ಪರಿಚಯಿಸಲಾಯಿತು.




## ಜನ ವಿಶ್ವಾಸ ಕಾಯ್ದೆಯಿಂದ ಸುಲಭವಾಗಿ ವ್ಯವಹಾರ ಮಾಡುವ ಪರಿಸರ

ಜನ ವಿಶ್ವಾಸ(ನಿಬಂಧನೆಗಳ ತಿದ್ದುಪಡಿ) ಮಸೂದೆ-2026; 23 ಸಚಿವಾಲಯಗಳಿಗೆ ಸಂಬಂಧಿಸಿದ 79 ಕೇಂದ್ರೀಯ ಕಾಯಿದೆಗಳಲ್ಲಿ **784** ನಿಬಂಧನೆಗಳನ್ನು ತಿದ್ದುಪಡಿ ಮಾಡಲಾಗಿದೆ.



- **317** ನಿಬಂಧನೆಗಳನ್ನು ದಂಡದಿಂದ ನಾಗರಿಕ ದಂಡಗಳಾಗಿ ಪರಿವರ್ತಿಸಲಾಯಿತು.
- **158** ನಿಬಂಧನೆಗಳಲ್ಲಿ, ದಂಡಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು.
- **113** ನಿಬಂಧನೆಗಳಲ್ಲಿ ಜೈಲು ಶಿಕ್ಷೆ ಮತ್ತು ದಂಡ ಎರಡನ್ನೂ ತೆಗೆದುಹಾಕಿ, ನಾಗರಿಕ ದಂಡಗಳನ್ನು ಪರಿಚಯಿಸಲಾಯಿತು.
- **57** ನಿಬಂಧನೆಗಳಲ್ಲಿ, ಜೈಲು ಶಿಕ್ಷೆ ಮತ್ತು ದಂಡ ಎರಡನ್ನೂ ತೆಗೆದುಹಾಕಲಾಯಿತು.
- **63** ನಿಬಂಧನೆಗಳಲ್ಲಿ ಮೊದಲ ಅಪರಾಧಕ್ಕೆ ಎಚ್ಚರಿಕೆ, ನೋಟಿಸ್ ನೀಡುವ ನಿಬಂಧನೆ ಪರಿಚಯಿಸಲಾಯಿತು.
- **17** ನಿಬಂಧನೆಗಳಲ್ಲಿ ಜೈಲು ಶಿಕ್ಷೆಯ ಅವಧಿ ಕಡಿಮೆ ಮಾಡಲಾಯಿತು, ಆದರೆ 29 ನಿಬಂಧನೆಗಳಲ್ಲಿ ಜೈಲು ಶಿಕ್ಷೆಯನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು.
- **17** ನಿಬಂಧನೆಗಳಲ್ಲಿ ಪರಸ್ಪರ ಒಪ್ಪಂದದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸೌಲಭ್ಯ ಪರಿಚಯಿಸಲಾಯಿತು.
- ಇತರೆ **9** ನಿಬಂಧನೆಗಳಲ್ಲಿ ಜೈಲು ಶಿಕ್ಷೆಯ ಬದಲು ನಾಗರಿಕ ದಂಡ ಪರಿಚಯಿಸಲಾಯಿತು. ಜೈಲಿನ ಸ್ವರೂಪವನ್ನು ತರ್ಕಬದ್ಧಗೊಳಿಸಲಾಯಿತು ಅಥವಾ ಅಪರಾಧ ವ್ಯಾಪ್ತಿಯನ್ನು ಸಂಕುಚಿತಗೊಳಿಸಲಾಯಿತು.

### 'ಸುಲಭ ವ್ಯವಹಾರ ಮಾಡುವ ವ್ಯವಸ್ಥೆಗೆ ವಿಶ್ವ ಬ್ಯಾಂಕಿನ ಶ್ರೇಯಾಂಕ 2020'




ಎಂಎಸ್ಎಂಇಗಳ ವ್ಯಾಖ್ಯಾನ ಪರಿಷ್ಕರಿಸಲಾಗಿದೆ. ಎಂಎಸ್ಎಂಇ ಸಾಲಗಳನ್ನು ಬಾಹ್ಯ ಮಾನದಂಡಗಳಿಗೆ ಜೋಡಿಸಲಾಗಿದೆ. ಸಣ್ಣ ಮತ್ತು ಅತಿಸಣ್ಣ ಉದ್ಯಮಗಳಿಗೆ ಈಗ 10 ಲಕ್ಷ ರೂ.ವರೆಗೆ ಮೇಲಾಧಾರ-ಮುಕ್ತ ಸಾಲಗಳು ಲಭ್ಯವಿದೆ. ಎಂಎಸ್ಎಂಇಗಳಿಗೆ 5 ಕೋಟಿ ರೂ.ವರೆಗಿನ ದುಡಿಮೆ ಬಂಡವಾಳ ಅವಶ್ಯಕತೆಗಳಿಗಾಗಿ ಸಾಲದ ಮಿತಿಯನ್ನು ಅವುಗಳ ಅಂದಾಜು ವಾರ್ಷಿಕ ವಹಿವಾಟಿನ ಕನಿಷ್ಠ 20%ಗೆ ನಿಗದಿಪಡಿಸಲಾಗಿದೆ.



> **ಕಳೆದ ದಶಕದಲ್ಲಿ ಭಾರತವು ತನ್ನ ಆಡಳಿತ ಸಂಸ್ಕೃತಿಯಲ್ಲಿ ಪರಿವರ್ತನೀಯ ಬದಲಾವಣೆಗೆ ಸಾಕ್ಷಿಯಾಗಿದೆ. ಸಮಯಕ್ಕೆ ಸರಿಯಾಗಿ ನಿರ್ಧಾರಗಳನ್ನು ತೆಗೆದುಕೊಂಡಾಗ, ಸಮನ್ವಯವು ಪರಿಣಾಮಕಾರಿಯಾಗಿದ್ದಾಗ ಮತ್ತು ಹೊಣೆಗಾರಿಕೆಯನ್ನು ಸ್ಥಾಪಿಸಿದಾಗ, ಸರ್ಕಾರಿ ಕಾರ್ಯಾಚರಣೆಗಳ ವೇಗವು ಸ್ವಾಭಾವಿಕವಾಗಿ ವೇಗಗೊಳ್ಳುತ್ತದೆ. ಇದರ ಪರಿಣಾಮವು ನಾಗರಿಕರ ಜೀವನದಲ್ಲಿ ನೇರವಾಗಿ ಗೋಚರಿಸುತ್ತದೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

# ಸುಲಭವಾಗಿ ಜೀವನ ನಡೆಸುವ ಪರಿಸರ

## ಒಂದು ಕ್ರಾಂತಿಕಾರಿ ಪರಿವರ್ತನೆ

*'ಸರಾಗದ ಜೀವನ' - ಸುಲಭವಾಗಿ ಜೀವನ ನಡೆಸುವ ಸೌಲಭ್ಯ - ಇದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. 'ನವ ಭಾರತ'ದ ಉನ್ನತ ನಾಯಕತ್ವದ ದೃಷ್ಟಿಕೋನವು 'ಸವಲತ್ತು ಎಂಬುದು ಕೆಲವೇ ಕೆಲವರಿಗೆ' ಮಾತ್ರವಲ್ಲ, ಅದು ಗ್ರಾಮೀಣ ಜನರು, ಬಡವರು, ಬುಡಕಟ್ಟು ಸಮುದಾಯಗಳು ಮತ್ತು ಮಧ್ಯಮ ವರ್ಗದ ಜೀವನವನ್ನು ಸುಲಭಗೊಳಿಸುವ ಬದ್ಧತೆಯನ್ನು ಸೂಚಿಸುತ್ತದೆ. ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ರಾಷ್ಟ್ರದ ಕನಸುಗಳನ್ನು ದೊಡ್ಡ ಪ್ರಮಾಣದಲ್ಲಿ ಕಲ್ಪಿಸಿಕೊಂಡಿದೆ ಮಾತ್ರವಲ್ಲದೆ, ಜನರು ಬಡತನದಿಂದ ಮಧ್ಯಮ ವರ್ಗಕ್ಕೆ ಏರಲು ಮತ್ತು ಸಾರ್ವಜನಿಕ ಸೌಲಭ್ಯಗಳನ್ನು ಹೆಚ್ಚಿಸುವಂತೆ ಸಹಾಯ ಮಾಡಲು ವಿನ್ಯಾಸಗೊಳಿಸಲಾದ ಕಾರ್ಯಕ್ರಮಗಳ 'ಪರಿಪೂರ್ಣತೆ' ಖಚಿತಪಡಿಸಿಕೊಳ್ಳಲು ಹೆಚ್ಚಿನ ವೇಗದಲ್ಲಿ ಕೆಲಸ ಮಾಡುತ್ತಿದೆ. ಇದರ ಪರಿಣಾಮವಾಗಿ, 'ಸರಾಗದ ಜೀವನ' ಇನ್ನು ಮುಂದೆ ಕೇವಲ ಒಂದು ಪದಗುಚ್ಛವಾಗದೆ, ಅದು ಸರ್ಕಾರದ ಮಾರ್ಗದರ್ಶಿ ಮಂತ್ರವಾಗಿದೆ...*

- ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳು ಸರಳೀಕೃತ ತೆರಿಗೆ, ನಾಗರಿಕರ ಮೇಲಿನ ಹೊರೆ ಕಡಿಮೆ ಮಾಡುವುದು ಮತ್ತು ಸುಲಭವಾಗಿ ವ್ಯವಹಾರ ಮಾಡುವ ಸುಧಾರಣೆಯತ್ತ ನಿರ್ಣಾಯಕ ಹೆಜ್ಜೆಯನ್ನು ಪ್ರತಿನಿಧಿಸುತ್ತವೆ.
- ಸುಲಭವಾಗಿ ಜೀವನ ನಡೆಸುವುದನ್ನು ಉತ್ತೇಜಿಸುವ ಮೂಲಕ ಸರ್ಕಾರವು, ದೆಹಲಿ, ಎನ್‌ಸಿಆರ್ ಪ್ರದೇಶ ಸೇರಿದಂತೆ ದೇಶಾದ್ಯಂತ ಹೆದ್ದಾರಿ, ರೈಲ್ವೆ, ಬಂದರು ಮತ್ತು ಹೈಸ್ಪೀಡ್ ವಾಯು ಸಂಪರ್ಕವನ್ನು ಗಮನಾರ್ಹವಾಗಿ ಹೆಚ್ಚಿಸಿದೆ.
- '2025ರ ಸುಲಭವಾಗಿ ಜೀವನ ನಡೆಸುವ ಪರಿಸರ ಸೂಚ್ಯಂಕ'ದಲ್ಲಿ ಪುಣೆ, ನವಿ ಮುಂಬೈ, ಗ್ರೇಟರ್ ಮುಂಬೈ, ತಿರುಪತಿ ಮತ್ತು ಚಂಡೀಗಢ ಟಾಪ್ 5 ನಗರಗಳಲ್ಲಿ ಸೇರಿವೆ.
- 1961ರ ಆದಾಯ ತೆರಿಗೆ ಕಾಯ್ದೆಯ ಸಮಗ್ರ ಪುನಾರಚನೆಯ ನಂತರ ಸರ್ಕಾರವು ಹೊಸ ಆದಾಯ ತೆರಿಗೆ ಕಾಯ್ದೆ-2025 ಜಾರಿಗೆ ತಂದಿತು. ತೆರಿಗೆ ಶಾಸನವನ್ನು ಸರಳೀಕರಿಸುವ ಮತ್ತು ದಕ್ಷವಾಗಿಸುವ ಮೂಲಕ, ಇದು ಹೆಚ್ಚು ಪ್ರವೇಶಿಸಬಹುದಾದ ಮತ್ತು ಪಾರದರ್ಶಕ ವ್ಯವಸ್ಥೆಯನ್ನಾಗಿ ಮಾಡಲಾಗಿದೆ.
- ಪ್ರವಾಸಿಗರಿಗೆ ಸುರಕ್ಷಿತ ಮತ್ತು ಅನುಕೂಲಕರ ಪ್ರಯಾಣ ಖಚಿತಪಡಿಸಲು, ಟೋಲ್‌ಫ್ರೀ ಸಂಖ್ಯೆಗಳಾದ 1800111363 ಮತ್ತು 1363 ಅನ್ನು ಸಮರ್ಪಿತ ಸಹಾಯವಾಣಿಗಳಾಗಿ ಆರಂಭಿಸಲಾಗಿದೆ. ಈ ಸೇವೆಗಳು 10 ಅಂತಾರಾಷ್ಟ್ರೀಯ ಭಾಷೆಗಳು ಸೇರಿದಂತೆ 12 ಭಾಷೆಗಳಲ್ಲಿ ದಿನದ 24 ತಾಸುಗಳ ಕಾಲ ಲಭ್ಯವಿದೆ.
- ಕಾರ್ಮಿಕರ ಕಲ್ಯಾಣ ಉತ್ತೇಜಿಸಲು ಮತ್ತು ಕಾರ್ಮಿಕರ ಜೀವನವನ್ನು ಸರಳಗೊಳಿಸಲು, ಹಿಂದಿನ ಹಳೆಯ ಕಾನೂನುಗಳನ್ನು ಬದಲಾಯಿಸಿ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲಾಗಿದೆ.

**12.61 ಕೋಟಿ**



ಹೆಚ್ಚುವರಿ ಗ್ರಾಮೀಣ ಕುಟುಂಬಗಳಿಗೆ 2026 ಮೇ 13ರ ಹೊತ್ತಿಗೆ ನಲ್ಲಿ ನೀರಿನ ಸಂಪರ್ಕ ನೀಡಲಾಗಿದೆ. ಪ್ರಸ್ತುತ, 15.85 ಕೋಟಿ ಕುಟುಂಬಗಳು ತಮ್ಮ ಮನೆಗಳೊಳಗೆ ಕುಡಿಯುವ ನೀರಿನ ಸೌಲಭ್ಯ ಹೊಂದಿವೆ.

**2025 ಏಪ್ರಿಲ್ 1ರಿಂದ 2026 ಮಾರ್ಚ್ 31ರ ವರೆಗೆ 1.90 ಕೋಟಿ ಡಿಜಿಟಲ್ ಲೈಫ್ ಸರ್ಟಿಫಿಕೇಟ್‌ಗಳನ್ನು ಮನೆಯಿಂದಲೇ ಸಲ್ಲಿಕೆಯಾಗಿವೆ. ಡಿಜಿಟಲ್ ಲೈಫ್ ಸರ್ಟಿಫಿಕೇಟ್‌ಗಳು ಹಿರಿಯ ನಾಗರಿಕರ ಜೀವನವನ್ನು ಸುಲಭಗೊಳಿಸಿವೆ.**



**58.18**

ಕೋಟಿ ಜನ್ ಧನ್ ಖಾತೆಗಳನ್ನು ತೆರೆಯಲಾಗಿದ್ದು, ಇದರಿಂದಾಗಿ ಸಾಮಾನ್ಯ ನಾಗರಿಕರಿಗೆ ಬ್ಯಾಂಕಿಂಗ್ ಸುಲಭವಾಗಿದ್ದು, ಸರ್ಕಾರದ ಸಬ್ಸಿಡಿ ಪ್ರಯೋಜನಗಳ ಲಭ್ಯತೆ ಹೆಚ್ಚಿಸಲಾಗಿದೆ.

ಹೊಸ ತೆರಿಗೆ ವ್ಯವಸ್ಥೆಯಡಿ ವಾರ್ಷಿಕ


**₹12** ಲಕ್ಷ ವರೆಗಿನ ವರಮಾನಕ್ಕೆ ಯಾವುದೇ ಆದಾಯ ತೆರಿಗೆ ಇಲ್ಲ.





ವೇತನ ಪಡೆಯುವ ತೆರಿಗೆದಾರರಿಗೆ

**₹75,000**

ಪ್ರಮಾಣಿತ ಕಡಿತವಿದೆ.




**- ಐಟಿಆರ್‌ಗಳನ್ನು ಸಲ್ಲಿಸುವ ತೆರಿಗೆದಾರರ ಸಂಖ್ಯೆ**




2025-26ರಲ್ಲಿ ಯುಪಿಐ ಮೂಲಕ **₹314** ಲಕ್ಷ ಕೋಟಿಗೂ ಹೆಚ್ಚಿನ ವಹಿವಾಟುಗಳನ್ನು ಸಂಸ್ಕರಿಸಲಾಗಿದೆ. ಕಳೆದ 10 ವರ್ಷಗಳಲ್ಲಿ 12,000 ಪಟ್ಟು ಹೆಚ್ಚಳವನ್ನು ಇದು ಪ್ರತಿನಿಧಿಸುತ್ತದೆ.

ಜಾಗತಿಕ ಪಾಲು: ಇಡೀ ವಿಶ್ವಕ್ಕೆ ಹೋಲಿಸಿದರೆ, ಭಾರತದ ಯುಪಿಐ ನೈಜ ಸಮಯದ ಪಾವತಿಗಳು **49%** ರಷ್ಟಿವೆ.

700ಕ್ಕೂ ಹೆಚ್ಚು ಬ್ಯಾಂಕುಗಳು ಈ ಜಾಲಕ್ಕೆ ಸೇರಿಕೊಂಡಿವೆ. ಇದು ಸುಮಾರು 540 ದಶಲಕ್ಷ ಜನರು ಯುಪಿಐ ಬಳಸುತ್ತಿದ್ದಾರೆ.

> ಸುಲಭ ಜೀವನ ನಡೆಸುವುದು ಪ್ರತಿಯೊಬ್ಬ ನಾಗರಿಕನ ಹಕ್ಕು. ನಮ್ಮ ಆಡಳಿತವು ದೇಶದ ನಾಗರಿಕರಿಗೆ 'ಸುಲಭವಾದ ಜೀವನ' ಮತ್ತು 'ಗುಣಮಟ್ಟದ ಜೀವನ' ದಿನದಿಂದ ದಿನಕ್ಕೆ ಸುಧಾರಿಸುವಂತಿರಬೇಕು, ಇದೇ ನಮ್ಮ ಮಾನದಂಡ. ಭಾರತದಲ್ಲಿ ವಾಸಿಸಲು ಇದು ಅತ್ಯುತ್ತಮ ಸಮಯ ಎಂದು ನಾನು ಪೂರ್ಣ ವಿಶ್ವಾಸದಿಂದ ಹೇಳುತ್ತೇನೆ. ಇಂದಿನ ಭಾರತದಲ್ಲಿ ವ್ಯಾಪಾರ ಮಾಡುವುದು ಸುಲಭವಾಗುತ್ತಿದೆ ಮತ್ತು ಜನರ ಜೀವನವೂ ಸರಳವಾಗುತ್ತಿದೆ.

*ನರೇಂದ್ರ ಮೋದಿ,*
*ಪ್ರಧಾನ ಮಂತ್ರಿ*



## ಜೀವನವನ್ನು ಸರಳೀಕರಿಸಿದ ಸೌಲಭ್ಯಗಳು



**1.15** ದಶಲಕ್ಷ ಜನರು ಪ್ರತಿದಿನ ಮೆಟ್ರೋ ಸೌಲಭ್ಯ ಪಡೆಯುತ್ತಿದ್ದಾರೆ


**1155** ಕಿಮೀ ಮೆಟ್ರೋ ಜಾಲವು 26 ನಗರಗಳಲ್ಲಿದೆ.




- ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 40 ದಶಲಕ್ಷಕ್ಕೂ ಹೆಚ್ಚಿನ ಮನೆಗಳನ್ನು ವಿತರಿಸಲಾಗಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಹವಾಮಾನದಲ್ಲೂ ಬಾಳಿಕೆ ಬರುವ ವಸತಿ ಲಭ್ಯವಾಗುವಂತೆ ಮಾಡಲಾಗಿದೆ.
- ಉಜ್ವಲ ಯೋಜನೆಯಲ್ಲಿ 105.6 ದಶಲಕ್ಷ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ; ಇದು ಹೊಗೆಯಿಂದ ಉಂಟಾಗುವ ಪ್ರತಿಕೂಲ ಆರೋಗ್ಯ ಪರಿಣಾಮಗಳನ್ನು ನಿವಾರಿಸುವುದಲ್ಲದೆ, ಸಮಯ ಉಳಿಸಿದೆ. ನಿರ್ದಿಷ್ಟವಾಗಿ, ಹಿಂದೆ ಉರುವಲು ಸಂಗ್ರಹಿಸಲು ಅಥವಾ ಜಾನುವಾರುಗಳ ಸೆಗಣಿಯಿಂದ ಬೆರಣಿ ತಯಾರಿಸಲು ಖರ್ಚು ಮಾಡುತ್ತಿದ್ದ ಹೆಚ್ಚುವರಿ ಸಮಯ ಉಳಿಯುತ್ತಿದೆ.
- 93 ದಶಲಕ್ಷ ಪ್ರಯಾಣಿಕರು ಈಗಾಗಲೇ ವಿಮಾನ ನಿಲ್ದಾಣಗಳಲ್ಲಿ 'ಡಿಜಿಯಾತ್ರ' ಸೌಲಭ್ಯದ ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ. ಈ ಸೌಲಭ್ಯವನ್ನು ಈಗ 38 ವಿಮಾನ ನಿಲ್ದಾಣಗಳಲ್ಲಿ ಪ್ರಾರಂಭಿಸಲಾಗಿದೆ.
- 5,87,000 ನಾಗರಿಕ ಸೇವಾ ಕೇಂದ್ರಗಳು(ಸಿಎಸ್‌ಸಿಗಳು) ಪ್ರಸ್ತುತ ದೇಶಾದ್ಯಂತ ಸೇವೆಗಳನ್ನು ಒದಗಿಸುತ್ತಿವೆ(2025 ಡಿಸೆಂಬರ್ ವರೆಗೆ ಅನ್ವಯವಾಗುವಂತೆ); ಈ ಕೇಂದ್ರಗಳು 800ಕ್ಕೂ ಹೆಚ್ಚಿನ ವಿವಿಧ ರೀತಿಯ ಸೇವೆಗಳನ್ನು ನೀಡುತ್ತವೆ.
- 2025 ಡಿಸೆಂಬರ್ ನಲ್ಲಿ ಇಂಟರ್ ನೆಟ್ ಬಳಕೆದಾರರ ಸಂಖ್ಯೆ 1.0286 ಶತಕೋಟಿ ತಲುಪಿದೆ - 2014ರಲ್ಲಿ ಇದ್ದ ಕೇವಲ 250 ದಶಲಕ್ಷದಿಂದ - 300%ಗಿಂತ ಹೆಚ್ಚಿನ ಬೆಳವಣಿಗೆಯಾಗಿದೆ. ಇಂಟರ್ನೆಟ್ ಬಳಕೆದಾರರ ಸಂಖ್ಯೆಯ ವಿಷಯದಲ್ಲಿ ಭಾರತವು ಈಗ ವಿಶ್ವದ ಅಗ್ರ 3 ರಾಷ್ಟ್ರಗಳಲ್ಲಿ ಸ್ಥಾನ ಪಡೆದಿದೆ.
- ವೈರ್‌ಲೆಸ್ ಡೇಟಾ ಚಂದಾದಾರರ ಸರಾಸರಿ ಡೇಟಾ ಬಳಕೆ ತಿಂಗಳಿಗೆ 25 ಜಿಬಿ ಇದೆ, ಆದರೆ ಹೆಚ್ಚಿನ ಆದಾಯದ ದೇಶಗಳಲ್ಲಿ ಈ ಅಂಕಿಅಂಶವು 17.9 ಜಿಬಿ ಆಗಿದೆ. ಪ್ರತಿ ಜಿಬಿ ಡೇಟಾ ವೆಚ್ಚವು 2014ರಲ್ಲಿ ಇದ್ದ 308 ರೂ.ನಿಂದ ಇಂದು ಕೇವಲ 7.87 ರೂ.ಗೆ ಇಳಿದಿದೆ. ಕೈಗೆಟುಕುವ ಬೆಲೆಗೆ ಸಿಗುವ ಡೇಟಾ, ಡಿಜಿಟಲ್ ಸೇವೆಗಳ ಮೂಲಕ ಜೀವನವನ್ನು ಸುಲಭಗೊಳಿಸಿದೆ.

**1.64** ಕೋಟಿಗೂ ಹೆಚ್ಚು ಪ್ರಯಾಣಿಕರು ಉಡಾನ್ ಯೋಜನೆಯ ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ.

**665** ಮಾರ್ಗಗಳು 95 ವಿಮಾನ ನಿಲ್ದಾಣಗಳು, ಹೆಲಿಪೋರ್ಟ್‌ಗಳು ಮತ್ತು ಜಲ ವಿಮಾನ ನಿಲ್ದಾಣಗಳನ್ನು ಸಂಪರ್ಕಿಸುತ್ತವೆ.



ವಿಮಾನ ನಿಲ್ದಾಣಗಳ ಸಂಖ್ಯೆ



# ಅಷ್ಟಲಕ್ಷ್ಮಿ: ನವ ಭಾರತಕ್ಕಾಗಿ ಶಾಂತಿ ಮತ್ತು ಸಮೃದ್ಧಿಯ ಶಕ್ತಿ ಕೇಂದ್ರ

*ಈಶಾನ್ಯದ 8 ರಾಜ್ಯಗಳನ್ನು ಸೂಚಿಸುವ ಅಷ್ಟಲಕ್ಷ್ಮಿಗಳು ಆತ್ಮವಿಶ್ವಾಸದಿಂದ ತುಂಬಿವೆ. ಅವು ಹೊಸ ಅಭಿವೃದ್ಧಿಯ ಪಥವನ್ನು ಆರಂಭಿಸಿವೆ, ರಾಷ್ಟ್ರದ ಅಭಿವೃದ್ಧಿಯ ಪ್ರಯಾಣವನ್ನು ಮುನ್ನಡೆಸಲು ಸಿದ್ಧವಾಗಿವೆ. ಒಂದು ಕಾಲದಲ್ಲಿ ಹಿಂಸಾಚಾರ ಮತ್ತು ದಿಗ್ಬಂಧನಗಳಿಗೆ ಹೆಸರುವಾಸಿಯಾಗಿದ್ದ 50 ದಶಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿರುವ ಈ ಪ್ರದೇಶವು ಈಗ ಪ್ರಗತಿಯ ಹಾದಿಯಲ್ಲಿ ಸಾಗುತ್ತಾ ಸಮಗ್ರ ಅಭಿವೃದ್ಧಿ ಕಾಣುತ್ತಿದೆ. ಕಳೆದ 12 ವರ್ಷಗಳಲ್ಲಿ ಅಭಿವೃದ್ಧಿಯ ಈ ಹೊಸ ಅಲೆಯು, ಈಶಾನ್ಯವು ಇನ್ನು ಮುಂದೆ ದೂರದ ಗಡಿಯಲ್ಲ, ಬದಲಿಗೆ ಭದ್ರತೆ ಮತ್ತು ಸಮೃದ್ಧಿಯ ಹೆಬ್ಬಾಗಿಲು ಎಂಬುದು ಸಾಬೀತುಪಡಿಸಿದೆ - ಇದು ದೆಹಲಿಯಿಂದ ದೂರವೂ ಇಲ್ಲ, ಹೃದಯದಿಂದ ದೂರವೂ ಇಲ್ಲ...*

## ಈಶಾನ್ಯಕ್ಕೆ ವಿಶೇಷ ಗಮನ; ದೆಹಲಿಯೊಂದಿಗೆ ಸಂಪರ್ಕ ವೃದ್ಧಿ

- ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಈಶಾನ್ಯ ಭಾರತದೊಂದಿಗಿನ ತನ್ನ ನೇರ ಸಂಬಂಧವನ್ನು ಗಮನಾರ್ಹವಾಗಿ ಬಲಪಡಿಸಿದೆ. ಪ್ರಧಾನ ಮಂತ್ರಿ, ಅವರ ಸಂಪುಟ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಈಶಾನ್ಯ ರಾಜ್ಯಗಳಿಗೆ ನಿಯಮಿತವಾಗಿ ಭೇಟಿ ನೀಡುತ್ತಿದ್ದಾರೆ.
- ಪ್ರತಿ 15 ದಿನಗಳಿಗೊಮ್ಮೆ ಕೇಂದ್ರ ಸಚಿವರು ಈಶಾನ್ಯ ರಾಜ್ಯಗಳ ಪೈಕಿ ಒಂದಕ್ಕೆ ಭೇಟಿ ನೀಡಬೇಕು ಎಂದು ಸರ್ಕಾರ ಆದೇಶಿಸಿದೆ.
- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 83 ಬಾರಿ ಈಶಾನ್ಯ ರಾಜ್ಯಗಳಿಗೆ ಭೇಟಿ ನೀಡಿದ್ದರೆ, 2015 ಜನವರಿ ಮತ್ತು 2025ರ ಡಿಸೆಂಬರ್ ನಡುವೆ ಕೇಂದ್ರ ಸಚಿವರು ಸೇರಿದಂತೆ ಈ ಪ್ರದೇಶಕ್ಕೆ 880 ಬಾರಿ ಭೇಟಿ ನೀಡಿದ್ದಾರೆ.



### 10% ಬಜೆಟ್ ನೆರವು

ಈ ಮಾರ್ಗಸೂಚಿ ಅಡಿ, 55 ಸಚಿವಾಲಯಗಳು ಮತ್ತು ಇಲಾಖೆಗಳು ತಮ್ಮ ಬಜೆಟ್‌ನ ಕನಿಷ್ಠ 10% ಪ್ರಮಾಣವನ್ನು ಈಶಾನ್ಯ ಪ್ರದೇಶದ ಅಭಿವೃದ್ಧಿಗಾಗಿ ಮೀಸಲಿಡುತ್ತಿವೆ. ಈ ಸಂಘಟಿತ ಪ್ರಯತ್ನಗಳಿಗೆ ಧನ್ಯವಾದಗಳು, ಈಶಾನ್ಯ ಪ್ರದೇಶವು ತ್ವರಿತ ಅಭಿವೃದ್ಧಿಗೆ ಸಾಕ್ಷಿಯಾಗುತ್ತಿದೆ.




### ಬಜೆಟ್ ವೆಚ್ಚದಲ್ಲಿ ಐತಿಹಾಸಿಕ ಹೆಚ್ಚಳ


| | |
|---|---|
| 2014-15 | ₹24,819 ಕೋಟಿ |
| 2025-26 | ₹1,00,271 ಕೋಟಿ |



*ಕಳೆದ 12 ವರ್ಷಗಳಲ್ಲಿ ಈಶಾನ್ಯ ರಾಜ್ಯವು ಗಣನೀಯ ಆರ್ಥಿಕ ಸಂಪನ್ಮೂಲಗಳನ್ನು ಪಡೆದುಕೊಂಡಿದೆ.*

**ಒಟ್ಟು ಬಜೆಟ್ ಹಂಚಿಕೆ**
**6.97**
ಲಕ್ಷ ಕೋಟಿ ರೂ.

**ನಿರ್ದಿಷ್ಟ ವೆಚ್ಚ**
**7.12**
ಲಕ್ಷ ಕೋಟಿ ರೂ.





### ಈಶಾನ್ಯ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ

ಈಶಾನ್ಯ ಪ್ರದೇಶಾಭಿವೃದ್ಧಿ ಸಚಿವಾಲಯ(ಎಂಒಡಿಎನ್‌ಇಆರ್) ನಿರ್ವಹಿಸುವ ಯೋಜನೆಗಳಲ್ಲಿ, ಸರಿಸುಮಾರು:

**₹3,735** ಕೋಟಿ ಮೊತ್ತದ ಯೋಜನೆಗಳನ್ನು ಈಶಾನ್ಯ ಪ್ರದೇಶಕ್ಕೆ ಮಂಜೂರು ಮಾಡಲಾಗಿದೆ.

**₹49,907** ಕೋಟಿ - ಅವುಗಳ ಒಟ್ಟು ಅಂದಾಜು ವೆಚ್ಚ ಪ್ರತಿನಿಧಿಸುತ್ತದೆ.

## ಅಭಿವೃದ್ಧಿ ಯೋಜನೆಗಳಲ್ಲಿ ಬೃಹತ್ ಹೂಡಿಕೆ, ಹೆಚ್ಚಿದ ಸಂಪರ್ಕ...

- ಬೋಗಿಬೀಲ್ ಸೇತುವೆ: 2018ರಲ್ಲಿ ಉದ್ಘಾಟನೆಯಾಯಿತು(16 ವರ್ಷಗಳ ಹಿಂದೆ ಘೋಷಿಸಲಾಗಿತ್ತು).
- ಕಳೆದ 12 ವರ್ಷಗಳಲ್ಲಿ, 8 ಹೊಸ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳನ್ನು ಸಹ ನಿರ್ಮಿಸಲಾಗಿದೆ. 2014ರಲ್ಲಿ ಕಾರ್ಯಾಚರಣೆಯಲ್ಲಿ ಇದ್ದ 9 ವಿಮಾನ ನಿಲ್ದಾಣಗಳ ಸಂಖ್ಯೆ 2026ರಲ್ಲಿ 17ಕ್ಕೆ ಏರಿದೆ.
- ಈಶಾನ್ಯ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದ 2014ರಲ್ಲಿ 10,905 ಕಿ.ಮೀ. ಗಳಷ್ಟಿತ್ತು. 2025 ಏಪ್ರಿಲ್ 1ರ ಹೊತ್ತಿಗೆ, ಈ ಅಂಕಿಅಂಶವು 16,207 ಕಿ.ಮೀ.ಗಳಿಗೆ ಏರಿಕೆಯಾಗಿದೆ. ಪ್ರಸ್ತುತ, 3,634 ಕಿ.ಮೀ. ಉದ್ದದ 177 ರಸ್ತೆ ಯೋಜನೆಗಳಿಗೆ ಒಟ್ಟು 87,000 ಕೋಟಿ ರೂ.ಗಿಂತ ಹೆಚ್ಚಿನ ವೆಚ್ಚ ಮಾಡಲಾಗಿದ್ದು, ಅನುಷ್ಠಾನದ ವಿವಿಧ ಹಂತಗಳಲ್ಲಿವೆ.
- ಈಶಾನ್ಯ ವಿಶೇಷ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ(ಎನ್ಇಎಸ್ಐಡಿಎಸ್), 72 ಯೋಜನೆಗಳು ಪೂರ್ಣಗೊಂಡಿವೆ, ಇದರ ಪರಿಣಾಮವಾಗಿ 997.55 ಕಿ.ಮೀ. ರಸ್ತೆಗಳ ನಿರ್ಮಾಣವಾಗಿದೆ. ಪ್ರಸ್ತುತ 911 ಯೋಜನೆಗಳ ಕೆಲಸ ನಡೆಯುತ್ತಿದೆ.



### ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ

**89,503**
ಕಿ.ಮೀ ರಸ್ತೆಗಳು (17,666 ವಿಶಿಷ್ಟ ರಸ್ತೆಗಳು ಸೇರಿದಂತೆ) ಮತ್ತು 2,396 ಸೇತುವೆಗಳನ್ನು ಮಂಜೂರು ಮಾಡಲಾಗಿದೆ.

ಮಂಜೂರಾದ ಯೋಜನೆಗಳಲ್ಲಿ
**81,448**
ಕಿ.ಮೀ ರಸ್ತೆಗಳು(16,547 ವಿಶಿಷ್ಟ ರಸ್ತೆಗಳು) ಮತ್ತು 2,126 ಸೇತುವೆಗಳು ಪೂರ್ಣಗೊಂಡಿವೆ.

**₹53,353.49** ಕೋಟಿ ಖರ್ಚು ಮಾಡಲಾಗಿದೆ

> **ಈಶಾನ್ಯವು ಕೇವಲ ದೇಶದ ಪ್ರಮುಖ ಭಾಗ ಮಾತ್ರ ಆಗದೆ, ಅದು ಭಾರತದ 'ಅಷ್ಟಲಕ್ಷ್ಮಿ'(ಸಂಪತ್ತಿನ ಎಂಟು ದೇವತೆಗಳು) ಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ನಾವು 'ಪೂರ್ವದತ್ತ ಗಮನ ಹರಿಸಿ' ನೀತಿಯ ಮೇಲೆ ಕೆಲಸ ಮಾಡುವುದನ್ನು ಮುಂದುವರಿಸುವಾಗ, ಈಶಾನ್ಯಕ್ಕಾಗಿ 'ತ್ವರಿತವಾಗಿ ಕ್ರಮ ಕೈಗೊಳ್ಳುವ' ಸಂಕಲ್ಪ ಮಾಡಿದ್ದೇವೆ.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*

### ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ

**2022**
ಮಣಿಪುರಕ್ಕೆ ಮೊದಲ ಸರಕು ರೈಲು ಆಗಮನ.

**2023**
ಮೇಘಾಲಯಕ್ಕೆ ಮೊದಲ ಸರಕು ರೈಲು ಆಗಮನ.

**2025**
ಮಿಜೋರಾಂಗೆ ಮೊದಲ ರೈಲು ಆಗಮನ.






ಮುಖಪುಟ ಲೇಖನ

12 ವರ್ಷಗಳ ವಿಕಾಸ ಯಾತ್ರೆ

# ರಾಷ್ಟ್ರ ಮೊದಲು

## ಸಬಲೀಕೃತ, ಸಮೃದ್ಧ ಮತ್ತು ಸುರಕ್ಷಿತ ಭಾರತ

*राष्ट्र रक्षा समं पुण्यं, राष्ट्ररक्षासमं व्रतम्*
*राष्ट्र रक्षा समं यज्ञो, दृष्टो नैव च नैव च*

*ಅರ್ಥ: ಯಾರೊಬ್ಬರಿಗಾಗಲಿ ರಾಷ್ಟ್ರದ ರಕ್ಷಣೆಗಿಂತ ದೊಡ್ಡದಾದ ಯಾವುದೇ ಸದ್ಗುಣವಿಲ್ಲ, ಪ್ರತಿಜ್ಞೆಯೂ ಇಲ್ಲ ಮತ್ತು ತ್ಯಾಗವೂ ಇಲ್ಲ. ನೆರೆಯ 7 ರಾಷ್ಟ್ರಗಳ ಜತೆ 15,000 ಕಿಲೋಮೀಟರ್‌ಗಳಿಗೂ ಹೆಚ್ಚು ವ್ಯಾಪಿಸಿರುವ ತನ್ನ ಭೂ ಗಡಿಗಳನ್ನು ಮತ್ತು 7,500 ಕಿಲೋಮೀಟರ್‌ಗಳಿಗಿಂತ ಹೆಚ್ಚು ವಿಸ್ತರಿಸಿರುವ ತನ್ನ ಸಾಗರ ಗಡಿಗಳನ್ನು ಭದ್ರಪಡಿಸಿಕೊಳ್ಳಲು ಭಾರತವು ಇಂದು 'ರಾಷ್ಟ್ರ ಮೊದಲು' ಎಂಬ ತತ್ವದಿಂದ ಮಾರ್ಗದರ್ಶಿಸಲ್ಪಟ್ಟ ತನ್ನ ಪರಿಣಾಮಕಾರಿ ವಿದೇಶಾಂಗ ನೀತಿಯನ್ನು ಮುನ್ನಡೆಸುತ್ತಿದೆ, ಅದೇ ಸಮಯದಲ್ಲಿ ರಕ್ಷಣಾ ವಲಯದಲ್ಲೂ ಸ್ವಾವಲಂಬನೆಯತ್ತ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರವು ಭಯೋತ್ಪಾದನೆಯ ವಿರುದ್ಧ 'ಶೂನ್ಯ ಸಹಿಷ್ಣುತೆ' ನೀತಿಗೆ ದೃಢನಿಶ್ಚಯ ಮಾಡುವುದು ಮಾತ್ರವಲ್ಲದೆ, ಅದಕ್ಕೆ ಆಳವಾಗಿ ಬದ್ಧವಾಗಿದೆ. ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಬೆಂಗಾವಲು ಪಡೆಯ ಮೇಲೆ ನಡೆದ ಹೇಡಿತನದ ದಾಳಿಯ ನಂತರ ಉರಿಯ ಮಿಲಿಟರಿ ಶಿಬಿರದ ಮೇಲೆ ನಡೆದ ಭಯೋತ್ಪಾದಕ ದಾಳಿಯ ನಂತರವೂ ಜಗತ್ತು ಈ ಅಚಲ ಸಂಕಲ್ಪಕ್ಕೆ ಸಾಕ್ಷಿಯಾಯಿತು. ಕಳೆದ ವರ್ಷ 2025 ಮೇ 6 ಮತ್ತು 7ರ ಮಧ್ಯರಾತ್ರಿ 'ಆಪರೇಷನ್ ಸಿಂಧೂರ' ಜಗತ್ತಿಗೆ ಸ್ಪಷ್ಟ ಸಂದೇಶ ರವಾನಿಸಿತು. ಭಾರತ ಯುದ್ಧವನ್ನು ಬಯಸುವುದಿಲ್ಲ, ಆದರೆ ಯಾವುದೇ ಸಂದರ್ಭದಲ್ಲೂ ಭಯೋತ್ಪಾದನೆಯನ್ನು ಸಹಿಸುವುದಿಲ್ಲ. ಬುದ್ಧನ ನಾಡಾದ ಭಾರತವು ಯುದ್ಧದಲ್ಲಿ ಅಲ್ಲ, ಬದಲಾಗಿ ಬುದ್ಧನಲ್ಲಿ ನಂಬಿಕೆ ಇಡುತ್ತದೆ ಎಂಬ ಸಂದೇಶವನ್ನು ನಿರಂತರವಾಗಿ ಸಾರಿದೆ. ಅಂದರೆ ಶಾಂತಿಯ ಸಂದೇಶ ಸಾರಿದೆ. ಯಾವುದೇ ರಾಷ್ಟ್ರವು ಬಲಿಷ್ಠ ಮಿಲಿಟರಿ ಶಕ್ತಿ ಹೊಂದುವುದು ಅತ್ಯಗತ್ಯವಾದರೂ, ನಿಜವಾದ ಜಾಗತಿಕ ಶಕ್ತಿಯಾಗಲು ಯುದ್ಧ ಅಥವಾ ಮಿಲಿಟರಿ ಶಕ್ತಿಯೇ ಪೂರ್ವಾಪೇಕ್ಷಿತವಲ್ಲ. ಈ ನಿಟ್ಟಿನಲ್ಲಿ ಕಳೆದ 12 ವರ್ಷಗಳಲ್ಲಿ ಯೋಗದ ಜಾಗತಿಕ ಪ್ರಚಾರದ ಮೂಲಕ, ವಿಶೇಷವಾದ ಅಂತಾರಾಷ್ಟ್ರೀಯ ಪ್ರತಿಷ್ಠೆಯ ಮೂಲಕ, ಬಿಕ್ಕಟ್ಟಿನ ಸಮಯದಲ್ಲಿ ತನ್ನದೇ ಆದ ನಾಗರಿಕರು ಮತ್ತು ವಿಶ್ವಾದ್ಯಂತದ ಜನರಿಗೆ ಬೆಂಬಲದ ದಾರಿದೀಪವಾಗಿ ಹೊರಹೊಮ್ಮುವ ಮೂಲಕ, ಕೋವಿಡ್-19ರಂತಹ ಜಾಗತಿಕ ವಿಪತ್ತನ್ನು ಜಗತ್ತಿಗೆ ಮಾದರಿಯಾಗಿ ಪರಿವರ್ತಿಸುವ ಮೂಲಕ ಅಥವಾ ರಕ್ಷಣಾ ವಲಯದ ಸ್ವಾವಲಂಬನೆಯಲ್ಲಿ ಹೊಸ ಕ್ರಾಂತಿಯನ್ನು ಮುನ್ನಡೆಸುವ ಮೂಲಕ - ಭಾರತವು ಒಂದು ಅಸಾಧಾರಣ ಮೃದು ಶಕ್ತಿಯಾಗಿ ತನಗಾಗಿ ಸ್ಥಿರವಾದ ಹೊಸ ಗುರುತು ರೂಪಿಸಿಕೊಳ್ಳುತ್ತಿದೆ.*


# ಅಭಿವೃದ್ಧಿ, ನಂಬಿಕೆ ಮತ್ತು ಸ್ವಾವಲಂಬನೆಯ ಹೊಸ ಯಾನ

ಇಂದು ಭಾರತವು ಸ್ವಾವಲಂಬನೆ, ನಾವೀನ್ಯತೆ ಮತ್ತು ಸಮಗ್ರ ಅಭಿವೃದ್ಧಿಯ ಹೊಸ ಎತ್ತರಕ್ಕೆ ಏರುತ್ತಿದೆ. ಡಿಜಿಟಲ್ ಕ್ರಾಂತಿ, ಮೂಲಸೌಕರ್ಯ ವಿಸ್ತರಣೆ, ಮಹಿಳಾ ಸಬಲೀಕರಣ ಮತ್ತು ಯುವ ನಾಯಕತ್ವವು ಜಾಗತಿಕ ವೇದಿಕೆಯಲ್ಲಿ ದೇಶಕ್ಕೆ ಬಲಿಷ್ಠ ಸ್ಥಾನ ಪಡೆದುಕೊಂಡಿದೆ. 'ಸಬಲೀಕೃತ ಭಾರತ' ಇನ್ನು ಮುಂದೆ ಕೇವಲ ಕನಸಲ್ಲ, ಇದು ಲಕ್ಷಾಂತರ ಭಾರತೀಯರ ಸಾಮೂಹಿಕ ಪ್ರಯತ್ನಗಳು ಮತ್ತು ಸಂಕಲ್ಪಕ್ಕೆ ಜೀವಂತ ಸಾಕ್ಷಿಯಾಗಿದೆ - ಅಭಿವೃದ್ಧಿ ಮತ್ತು ವಿಶ್ವಾಸದ ಹೊಸ ನಿರೂಪಣೆಯನ್ನು ಬರೆಯುತ್ತಿದೆ.

## ಸಬಲೀಕೃತ ಭಾರತದ ಪ್ರಮುಖ ಸಂಗತಿಗಳು...


- 2018ರಿಂದ ಭಾರತವು ವಿಶ್ವದ 2ನೇ ಅತಿದೊಡ್ಡ ಉಕ್ಕು ಉತ್ಪಾದಕ ರಾಷ್ಟ್ರವಾಗಿ ಉಳಿದಿದೆ. 2014ರಲ್ಲಿ ಜಾಗತಿಕ ಉತ್ಪಾದನೆಯಲ್ಲಿ ಭಾರತದ ಪಾಲು 5.2%ರಷ್ಟಿದ್ದು, ಇದು 2024ರಲ್ಲಿ 7.9%ಗೆ ಏರಿದೆ.
- 'ವಿಶ್ವದ ಔಷಧಾಲಯ': ಭಾರತದ ದೂರದೃಷ್ಟಿ ಪರಿಣಾಮದಿಂದ ಇಂದು ವಿಶ್ವದ 3ನೇ ಅತಿದೊಡ್ಡ ಔಷಧ ಉತ್ಪಾದಕ ರಾಷ್ಟ್ರವಾಗಿದೆ, ಮೌಲ್ಯದ ದೃಷ್ಟಿಯಿಂದ 11ನೇ ಅತಿದೊಡ್ಡ ರಾಷ್ಟ್ರವಾಗಿದೆ. 2024-25ರಲ್ಲಿ ಈ ವಲಯವು 4.72 ಲಕ್ಷ ಕೋಟಿ ರೂ. ವಾರ್ಷಿಕ ವಹಿವಾಟು ದಾಖಲಿಸಿದೆ.
- ಸುಮಾರು 65% ರಕ್ಷಣಾ ಉಪಕರಣಗಳನ್ನು ಈಗ ದೇಶೀಯವಾಗಿ ತಯಾರಿಸಲಾಗುತ್ತಿದೆ, ಆದರೆ ಹಿಂದೆ ಸುಮಾರು 65–70% ಪ್ರಮಾಣವನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.
- ಇಂದು ಭಾರತವು ವಿಶ್ವದ ಒಟ್ಟು ಜೆನೆರಿಕ್ ಔಷಧಿಗಳಲ್ಲಿ 5ನೇ ಒಂದು ಭಾಗವನ್ನು ಪೂರೈಸುತ್ತಿದೆ, ಯೂನಿಸೆಫ್ ಗೆ ಅಗತ್ಯವಿರುವ ಲಸಿಕೆಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಪ್ರಮಾಣವನ್ನು ಒದಗಿಸುತ್ತಿದೆ.
- 'ಶಕ್ತಿ', ವೈದ್ಯಕೀಯ ಪ್ರವಾಸೋದ್ಯಮ ಮತ್ತು ಉತ್ತಮ ಗುಣಮಟ್ಟದ ಔಷಧಿಗಳ ರಫ್ತಿನಂತಹ ಉಪಕ್ರಮಗಳ ಮೂಲಕ ಭಾರತವು 300 ಶತಕೋಟಿ ಡಾಲರ್ ಮೊತ್ತದ ಬಯೋಫಾರ್ಮಾ ಸೂಪರ್ ಪವರ್ ಆಗಿ ಹೊರಹೊಮ್ಮುವ ಹಾದಿಯಲ್ಲಿದೆ.
- ಕಳೆದ ಕೆಲವು ವರ್ಷಗಳಲ್ಲಿ ಭಾರತವು ತನ್ನ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಜಾಲವನ್ನು ವಿಸ್ತರಿಸಿದೆ, 38 ದೇಶಗಳೊಂದಿಗೆ 9 ಒಪ್ಪಂದಗಳಿಗೆ ಸಹಿ ಹಾಕಿದೆ.
- ಮೊದಲ ಬಾರಿಗೆ ಭಾರತವು 'ಬಾಹ್ಯಾಕಾಶ ವ್ಯವಸ್ಥೆಗಳು ಮತ್ತು ಕಾರ್ಯಾಚರಣೆಗಳು' ಕುರಿತ ಐಎಸ್‌ಒ ಅಂತಾರಾಷ್ಟ್ರೀಯ ಉಪಸಮಿತಿಯ ಸಭೆಗಳನ್ನು ಆಯೋಜಿಸಿದೆ.

### ರಕ್ಷಣಾ ರಫ್ತಿನಲ್ಲಿ ಆಗಿರುವ ಬೆಳವಣಿಗೆ





### ರಕ್ಷಣಾ ಉತ್ಪಾದನೆ

(ಅಂಕಿಅಂಶಗಳು ಲಕ್ಷ ಕೋಟಿ ರೂ.ಗಳಲ್ಲಿ)





### ಭಾರತೀಯ ಸೆಮಿಕಂಡಕ್ಟರ್ ಮಾರುಕಟ್ಟೆ

(ಅಂಕಿಅಂಶಗಳು ಶತಕೋಟಿ ಡಾಲರ್‌ಗಳಲ್ಲಿ)




### ಭಾರತದ ಒಟ್ಟು ರಫ್ತು

(ಅಂಕಿಅಂಶಗಳು ಶತಕೋಟಿ ಡಾಲರ್‌ಗಳಲ್ಲಿ)




### ಭಾರತವು ವಿಶ್ವದ 2ನೇ ಅತಿದೊಡ್ಡ ರಸ್ತೆ ಜಾಲಕ್ಕೆ ನೆಲೆಯಾಗಿದೆ

ರಾಷ್ಟ್ರೀಯ ಹೆದ್ದಾರಿ ಜಾಲದ ವಿಸ್ತರಣೆ

ಮಾರ್ಚ್ 2014 — 91,287 ಕಿ.ಮೀ

ಫೆಬ್ರವರಿ 2026 — 1,46,572 ಕಿ.ಮೀ

## ಬಾಹ್ಯಾಕಾಶ ವಲಯದಲ್ಲಿ ಭಾರತ

**ನೋಂದಾಯಿತ ಸ್ಟಾರ್ಟಪ್‌ಗಳು**


1 — 2014

ಇದೀಗ 400 ಕ್ಕೂ ಹೆಚ್ಚು

### ವಿದೇಶಿ ಉಪಗ್ರಹಗಳು

ಇಸ್ರೋ ಉಡಾವಣೆ ಮಾಡಿದ 434 ವಿದೇಶಿ ಉಪಗ್ರಹಗಳಲ್ಲಿ 399 ಉಪಗ್ರಹಗಳನ್ನು 2014ರಿಂದ ಉಡಾವಣೆ ಮಾಡಲಾಗಿದೆ. ಈ ಉಡಾವಣೆಗಳು ಭಾರತಕ್ಕೆ ಸರಿಸುಮಾರು 323 ದಶಲಕ್ಷ ಯುರೋಗಳು ಮತ್ತು 233 ದಶಲಕ್ಷ ಡಾಲರ್ ಮೊತ್ತದ ಆದಾಯ ಗಳಿಸಿವೆ.

ಭಾರತದ ಬಾಹ್ಯಾಕಾಶ ಆರ್ಥಿಕತೆಯು ಸುಮಾರು 8.4 ಶತಕೋಟಿ ಡಾಲರ್ ಮೌಲ್ಯವನ್ನು ತಲುಪಿದೆ.



## ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

ವಿಶ್ವಬ್ಯಾಂಕ್ ಮುನ್ಸೂಚನೆ: ಭಾರತದ ಆರ್ಥಿಕತೆಯು 2026-27ರಲ್ಲಿ ಸುಮಾರು 6.6% ಜಿಡಿಪಿ ದರದಲ್ಲಿ ಬೆಳೆಯುವ ನಿರೀಕ್ಷೆಯಿದೆ.


ವಿಶ್ವ ಆರ್ಥಿಕ ಮುನ್ನೋಟ 2026ರ ಪ್ರಕಾರ, ಭಾರತದ ಆರ್ಥಿಕ ಬೆಳವಣಿಗೆಯ ದರವು 6.5% ಎಂದು ಅಂದಾಜಿಸಲಾಗಿದೆ, ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಈ ಮುನ್ಸೂಚನೆಗಳು 1.8%, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ 3.9% ಮತ್ತು ಒಟ್ಟಾರೆಯಾಗಿ ಜಾಗತಿಕ ಆರ್ಥಿಕತೆಯ ಬೆಳವಣಿಗೆ ದರ 3.1% ಎಂದು ಅಂದಾಜಿಸಲಾಗಿದೆ.

ಮುಖಪುಟ ಲೇಖನ
12 ವರ್ಷಗಳ ವಿಕಾಸ ಯಾತ್ರೆ

## ಭಾರತ: ಜಾಗತಿಕ ಎಲೆಕ್ಟ್ರಾನಿಕ್ಸ್ ಉತ್ಪಾದನೆಯ ಶಕ್ತಿಕೇಂದ್ರ


(ಕೆಳಗಿನ ಅಂಕಿ-ಅಂಶಗಳು ಲಕ್ಷ ಕೋಟಿ ರೂ.ಗಳಲ್ಲಿ)

**ಮೊಬೈಲ್ ಉತ್ಪಾದನೆಯ ತಯಾರಿಕಾ ಮೌಲ್ಯ**




**ಮೊಬೈಲ್ ಫೋನ್ ರಫ್ತು**

127 ಪಟ್ಟು ಹೆಚ್ಚಳ




## ಸಬಲೀಕೃತ ಭಾರತದ ಗುರುತು

### ಎಐನಲ್ಲಿ ಸಬಲೀಕೃತ ಭಾರತ

ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಷಣ ಮಾಡಿದರು, ಅದನ್ನು ಎಐ ತಂತ್ರಜ್ಞಾನ ಬಳಸಿಕೊಂಡು ವಿಶೇಷಚೇತನರಿಗಾಗಿ ಸಂಕೇತ ಭಾಷೆಗೆ ಏಕಕಾಲದಲ್ಲಿ ಲಿಪ್ಯಂತರ ಮಾಡಲಾಯಿತು.

### ದಿಟ್ಟ ನಿರ್ಧಾರಗಳ ಸಬಲೀಕೃತ ಭಾರತ

ದಶಕಗಳಿಂದ ಕಾಶ್ಮೀರದಲ್ಲಿ "ಒಂದು ಸಂವಿಧಾನ, ಒಂದು ಕಾನೂನು" ಎಂಬ ತತ್ವವನ್ನು ಜಾರಿಗೆ ತರಲು ಅಡ್ಡಿಯಾಗಿದ್ದ 370ನೇ ವಿಧಿಯನ್ನು ರದ್ದುಗೊಳಿಸಲಾಯಿತು. ಪರಿಣಾಮವಾಗಿ, ದೇಶದ ಉಳಿದ ರಾಜ್ಯಗಳಿಗೆ ಅನ್ವಯವಾಗುವ ಎಲ್ಲಾ ಕಾನೂನುಗಳು ಈಗ ಕಾಶ್ಮೀರದಲ್ಲಿಯೂ ಜಾರಿಯಲ್ಲಿವೆ.

### ಮಹಿಳೆಯರ ನೇತೃತ್ವದ ಸಬಲೀಕೃತ ಭಾರತ



ಲೋಕಸಭೆ ಮತ್ತು ರಾಜ್ಯ ಶಾಸಕಾಂಗ ಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ 3 ದಶಕಗಳಿಂದ ಇದ್ದ ಬಿಕ್ಕಟ್ಟನ್ನು ಮುರಿದು, ನಾರಿ ಶಕ್ತಿ ವಂದನಾ ಅಧಿನಿಯಮಕ್ಕೆ ಅಧಿಸೂಚನೆ ಹೊರಡಿಸಲಾಯಿತು. 1996ರಿಂದ ಸತತ ಪ್ರಯತ್ನಗಳು ನಡೆದಿದ್ದರೂ, 2023ರ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಅಂತಿಮವಾಗಿ ಹೊಸ ಸಂಸತ್ತು ಭವನದಲ್ಲಿ ಅಂಗೀಕಾರ ನೀಡಲಾಯಿತು.

### ಬಾಹ್ಯಾಕಾಶದಲ್ಲಿ ಸಬಲೀಕೃತ ಭಾರತ

ಭಾರತವು ಈಗ ಚಂದ್ರನ ದಕ್ಷಿಣ ಧ್ರುವದ ಸಮೀಪಕ್ಕೆ ತಲುಪಿದೆ - ಇದುವರೆಗೆ ಜಗತ್ತಿನ ಯಾವುದೇ ರಾಷ್ಟ್ರವೂ ಚಂದ್ರ ಪ್ರದೇಶಕ್ಕೆ ತಲುಪುವ ಸಾಹಸ ಮಾಡಿಲ್ಲ.

### ವಸಾಹತುಶಾಹಿ ಪರಂಪರೆಗಳನ್ನು ತೆಗೆದುಹಾಕುವುದು

'ಪಂಚಾಮೃತ'ದ ಕರೆಯ ಮೂಲಕ, ವಸಾಹತುಶಾಹಿಯ ಕುರುಹುಗಳನ್ನು ದೇಶದಿಂದ ಅಳಿಸಲಾಗುತ್ತಿದೆ. ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಮೂಡಿಸಲು ಕರ್ತವ್ಯ ಮಾರ್ಗದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ಸ್ಥಾಪನೆ, ನೌಕಾ ಧ್ವಜದ ಮರುವಿನ್ಯಾಸ, ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವದ ಸಮಯದಲ್ಲಿ ಸ್ಥಳೀಯ ಫಿರಂಗಿಗಳನ್ನು ಬಳಸಿ ವಿಧ್ಯುಕ್ತ 21-ಗನ್ ಸೆಲ್ಯೂಟ್ ನೀಡುವಂತಹ ಉಪಕ್ರಮಗಳು ಈ ಬದ್ಧತೆಯನ್ನು ಉದಾಹರಿಸುತ್ತವೆ.

## ಪ್ರಕೃತಿ ವಿಪತ್ತುಗಳ ಅಪಾಯ ನಿರ್ವಹಣಾ ಕಾರ್ಯಾಚರಣೆಗಳು

- ಆಪರೇಷನ್ ಮೈತ್ರಿ (ನೇಪಾಳ, 2015)
- ಆಪರೇಷನ್ ದೇವಿ ಶಕ್ತಿ (ಅಫ್ಘಾನಿಸ್ತಾನ, 2021)

## 'ಮಿಷನ್ ಸಾಗರ್' ಅಡಿ ನೌಕಾಪಡೆಯಿಂದ ಮಾನವೀಯ ನೆರವು

- ಆಪರೇಷನ್ ಸಮುದ್ರ ಸೇತು (2020)
- ಆಪರೇಷನ್ ಗಂಗಾ (ಉಕ್ರೇನ್, 2022)
- ಆಪರೇಷನ್ ದೋಸ್ತ್ (ಟರ್ಕಿ ಮತ್ತು ಸಿರಿಯಾ, 2023)
- ಆಪರೇಷನ್ ಕಾವೇರಿ (ಸುಡಾನ್, ಏಪ್ರಿಲ್ 2023)
- ಆಪರೇಷನ್ ಬ್ರಹ್ಮ (ಮ್ಯಾನ್ಮಾರ್, 2025)
- ಆಪರೇಷನ್ ಸಾಗರ್ ಬಂಧು (2025)



"

**ಬೆದರಿಕೆಗಳನ್ನು ನಿರ್ಣಾಯಕವಾಗಿ ಎದುರಿಸಲು, ಸ್ವಾವಲಂಬನೆಯನ್ನು ರಾಷ್ಟ್ರೀಯ ಶಕ್ತಿ, ಘನತೆಯ ಅಡಿಪಾಯವನ್ನಾಗಿ ಮಾಡಲು ಮತ್ತು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವಾಗುವ ಪ್ರಯಾಣಕ್ಕೆ ಕಾರ್ಯತಂತ್ರ ಸ್ವಾಯತ್ತತೆ ಮತ್ತು ಸ್ಥಳೀಯ ಸಾಮರ್ಥ್ಯಗಳು ಪ್ರಮುಖವಾಗಿವೆ.**

*ನರೇಂದ್ರ ಮೋದಿ,*
*ಪ್ರಧಾನ ಮಂತ್ರಿ*



# ಆಪರೇಷನ್ ಸಿಂಧೂರ...

## 9 ಭಯೋತ್ಪಾದಕ ಶಿಬಿರಗಳು ಧ್ವಂಸ

ಲಷ್ಕರ್-ಎ-ತೈಬಾ, ಜೈಶೆ-ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕ ಸಂಘಟನೆಗಳ ಭದ್ರಕೋಟೆಗಳನ್ನು ಗುರಿಯಾಗಿಸಿಕೊಂಡು ಭಾರತವು, ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರ(ಪಿಒಜೆಕೆ)ದಲ್ಲಿರುವ 9 ಪ್ರಮುಖ ಭಯೋತ್ಪಾದಕ ಅಡಗು ತಾಣಗಳನ್ನು ಯಶಸ್ವಿಯಾಗಿ ನಾಶಪಡಿಸಿತು. ಈ ಕಾರ್ಯಾಚರಣೆಯಲ್ಲಿ 100ಕ್ಕೂ ಹೆಚ್ಚಿನ ಭಯೋತ್ಪಾದಕರು ಸಾವನ್ನಪ್ಪಿದರು.

## ಗಡಿಯಾಚೆಗಿನ ನಿಖರ ದಾಳಿಗಳು

ಪಂಜಾಬ್ ಪ್ರಾಂತ್ಯ ಮತ್ತು ಬಹವಾಲ್ಪುರ ಸೇರಿದಂತೆ ಪಾಕಿಸ್ತಾನದ ಒಳ ಪ್ರದೇಶಗಳಲ್ಲಿ ದಾಳಿಗಳನ್ನು ನಡೆಸುವ ಮೂಲಕ ಭಾರತವು ಒಪ್ಪಂದದ ನಿಯಮಗಳನ್ನು ಮರುವ್ಯಾಖ್ಯಾನಿಸಿದೆ. ಈ ಪ್ರದೇಶಗಳನ್ನು ಒಂದು ಕಾಲದಲ್ಲಿ ಅಮೆರಿಕದ ಡ್ರೋನ್‌ಗಳಿಗೂ ಸಹ ಸಾಧ್ಯವಿಲ್ಲ ಎಂದು ಪರಿಗಣಿಸಲಾಗಿತ್ತು.

## ಹೊಸ ಕಾರ್ಯತಂತ್ರ ಕೆಂಪು ರೇಖೆ

ಆಪರೇಷನ್ ಸಿಂಧೂರ ಹೊಸ ಕೆಂಪು ರೇಖೆಯನ್ನು ಎಳೆದಿದೆ: ಭಯೋತ್ಪಾದನೆಯು ಸರ್ಕಾರದ ನೀತಿಯೇ ಆಗಿದ್ದರೆ, ಅದನ್ನು ನೇರ ಮತ್ತು ಬಲವಾದ ಪ್ರತಿಕ್ರಿಯೆಯೊಂದಿಗೆ ಸಮರ್ಥವಾಗಿ ಎದುರಿಸಲಾಗುತ್ತದೆ.

## ಭಾರತದ ವಾಯು ರಕ್ಷಣಾ ಶ್ರೇಷ್ಠತೆಯ ಪ್ರದರ್ಶನ

ಸ್ಥಳೀಯ ಆಕಾಶ್‌ಟೀರ್ ವ್ಯವಸ್ಥೆ ಸೇರಿದಂತೆ ಭಾರತದ ಬಹು ಪದರದ ವಾಯು ರಕ್ಷಣಾ ವ್ಯವಸ್ಥೆಯು ನೂರಾರು ಡ್ರೋನ್‌ಗಳು ಮತ್ತು ಕ್ಷಿಪಣಿಗಳನ್ನು ಹೊಡೆದುರುಳಿಸಿತು. ಇದು ಸುಧಾರಿತ ರಕ್ಷಣಾ ವ್ಯವಸ್ಥೆಗಳ ರಫ್ತಿನಲ್ಲಿ ಭಾರತದ ಬೆಳೆಯುತ್ತಿರುವ ಸಾಮರ್ಥ್ಯಗಳನ್ನು ಪ್ರದರ್ಶಿಸಿತು.

## ಪಾಕಿಸ್ತಾನದ ಸೇನಾ ನೆಲೆಗಳ ಮೇಲೆ ವಾಯುದಾಳಿಗಳು

ಮೇ 9–10 ರಂದು ಭಾರತವು ಒಂದೇ ಕಾರ್ಯಾಚರಣೆಯಲ್ಲಿ ಪರಮಾಣು ಶಸ್ತ್ರಸಜ್ಜಿತ ರಾಷ್ಟ್ರದ 11 ವಾಯುನೆಲೆಗಳ ಮೇಲೆ ದಾಳಿ ಮಾಡಿದ ಮೊದಲ ರಾಷ್ಟ್ರವಾಯಿತು, ಇದರ ಪರಿಣಾಮವಾಗಿ ಪಾಕಿಸ್ತಾನ ವಾಯುಪಡೆಯ ಮೂಲಸೌಕರ್ಯದ 20% ನೆಲೆಗಳು ನಾಶವಾದವು.

## ಜಾಗತಿಕ ಸಂದೇಶ ರವಾನಿಸಿದ ಭಾರತ

ತನ್ನ ಜನರನ್ನು ರಕ್ಷಿಸಲು ಯಾರ ಅನುಮತಿಯೂ ಅಗತ್ಯವಿಲ್ಲ ಎಂದು ಭಾರತ ಇಡೀ ಜಗತ್ತಿಗೆ ಸಂದೇಶ ಸಾರಿತು. ಭಯೋತ್ಪಾದಕರು ಮತ್ತು ಅವರ ನಾಯಕರು ಎಲ್ಲಿಯೂ ಅಡಗಿಕೊಳ್ಳಲು ಸಾಧ್ಯವಿಲ್ಲ. ಪಾಕಿಸ್ತಾನ ಪ್ರತೀಕಾರ ತೀರಿಸಿಕೊಳ್ಳಲು ಪ್ರಯತ್ನಿಸಿದರೆ, ಭಾರತವು ನಿರ್ಣಾಯಕ ಪ್ರತಿದಾಳಿ ನಡೆಸಲು ಸಿದ್ಧವಾಗಿದೆ ಎಂಬ ಸಂದೇಶವನ್ನು ಇದು ಬಲಪಡಿಸಿತು.




## ವ್ಯಾಪಕ ಜಾಗತಿಕ ಬೆಂಬಲ

ಹಿಂದಿನ ಸಂಘರ್ಷಗಳಿಗಿಂತ ಭಿನ್ನವಾಗಿ, ಈ ಬಾರಿ ಹಲವಾರು ಜಾಗತಿಕ ನಾಯಕರು ಕೇವಲ ಸಂಯಮಕ್ಕಾಗಿ ಮನವಿ ಮಾಡುವ ಬದಲು ಭಾರತಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡಿದರು. ಈ ಬದಲಾವಣೆಯು ಭಾರತದ ಹೆಚ್ಚಿದ ಜಾಗತಿಕ ನಿಲುವು ಮತ್ತು ನಿರೂಪಣೆಯ ಮೇಲೆ ಹೊಂದಿರುವ ನಿಯಂತ್ರಣವನ್ನು ಪ್ರತಿಬಿಂಬಿಸುತ್ತದೆ.

# ಜಾಗತಿಕ ವೇದಿಕೆಯಲ್ಲಿ ಭಾರತ ಹೊಳೆಯುತ್ತಿದೆ

*ಕಳೆದ ದಶಕದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಭಾರತದ ವಿದೇಶಾಂಗ ನೀತಿಯು ತನ್ನ ಸಾಂಪ್ರದಾಯಿಕ ಗಡಿಗಳನ್ನು ಮೀರಿ ವಿಸ್ತರಿಸಿದೆ ಮಾತ್ರವಲ್ಲದೆ, ಜಾಗತಿಕ ವೇದಿಕೆಯಲ್ಲಿ ದೇಶದ ಪಾತ್ರವನ್ನು ಮರು ವ್ಯಾಖ್ಯಾನಿಸಿದೆ. ಬದಲಾಗುತ್ತಿರುವ ಅಂತಾರಾಷ್ಟ್ರೀಯ ಭೂದೃಶ್ಯ, ಬಹುಧ್ರುವೀಯ ವಿಶ್ವ ಕ್ರಮ ಮತ್ತು ಉದಯೋನ್ಮುಖ ಭೌಗೋಳಿಕ ರಾಜಕೀಯ ಸವಾಲುಗಳ ನಡುವೆ ಭಾರತವು ಸಮತೋಲಿತ, ಪೂರ್ವಭಾವಿ ಮತ್ತು ಕಾರ್ಯತಂತ್ರ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ತನ್ನ ರಾಜತಾಂತ್ರಿಕ ಗುರುತನ್ನು ಬಲಪಡಿಸಿದೆ. ನೆರೆಯ ರಾಷ್ಟ್ರಗಳೊಂದಿಗೆ ಸಂಬಂಧಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಹಿಡಿದು ಜಾಗತಿಕ ಶಕ್ತಿಗಳೊಂದಿಗೆ ಪಾಲುದಾರಿಕೆಯನ್ನು ಹೆಚ್ಚಿಸುವ ತನಕ, ಭಾರತದ ವಿದೇಶಾಂಗ ನೀತಿಯು ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಹಕಾರವನ್ನು ಏಕಕಾಲದಲ್ಲಿ ಉತ್ತೇಜಿಸುವ ಜತೆಗೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ...*

## ಮುಕ್ತ ವ್ಯಾಪಾರ ಒಪ್ಪಂದಗಳು

- ಭಾರತವು ಜಾಗತಿಕ ವ್ಯಾಪಾರದ ಪಥವನ್ನು ಮರುವ್ಯಾಖ್ಯಾನಿಸಿದೆ, ಮುಕ್ತ ವ್ಯಾಪಾರ ಒಪ್ಪಂದಗಳ (ಎಫ್‌ಟಿಎ) ಹೊಸ ಯುಗಕ್ಕೆ ದಾರಿ ಮಾಡಿಕೊಟ್ಟಿದೆ.
- ಕಳೆದ ಕೆಲವು ವರ್ಷಗಳಿಂದ ಭಾರತವು ತನ್ನ ಮುಕ್ತ ವ್ಯಾಪಾರ ಒಪ್ಪಂದಗಳ ವ್ಯಾಪ್ತಿಯನ್ನು ಗಮನಾರ್ಹವಾಗಿ ವಿಸ್ತರಿಸಿದೆ. ಇಲ್ಲಿಯವರೆಗೆ ಒಟ್ಟು 9 ಎಫ್‌ಟಿಎಗಳನ್ನು 38 ದೇಶಗಳೊಂದಿಗೆ ಅಂತಿಮಗೊಳಿಸಲಾಗಿದೆ. ಈ ಉಪಕ್ರಮವು 2021ರಲ್ಲಿ ಭಾರತ-ಮಾರಿಷಸ್ ಒಪ್ಪಂದದೊಂದಿಗೆ ಆರಂಭವಾಯಿತು.

## ಜಿ-20 ಅಧ್ಯಕ್ಷತೆ: 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ'ದ ಪ್ರತಿಪಾದನೆ

- 2022 ಡಿಸೆಂಬರ್ 1ರಿಂದ 2023 ನವೆಂಬರ್ 30ರ ವರೆಗೆ ಭಾರತದ ಜಿ-20 ಅಧ್ಯಕ್ಷತೆಯು ಜಾಗತಿಕ ರಾಜತಾಂತ್ರಿಕತೆಯಲ್ಲಿ ಮಹತ್ವದ ಅಧ್ಯಾಯದ ಆರಂಭವನ್ನು ಗುರುತಿಸಿತು.
- 2023 ಸೆಪ್ಟೆಂಬರ್ 9-10ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ನಡೆದ 18ನೇ ಜಿ-20 ನಾಯಕರ ಶೃಂಗಸಭೆಯಲ್ಲಿ 20 ಸದಸ್ಯ ರಾಷ್ಟ್ರಗಳು, 9 ಆಹ್ವಾನಿತ ದೇಶಗಳು ಮತ್ತು 14 ಅಂತಾರಾಷ್ಟ್ರೀಯ ಸಂಸ್ಥೆಗಳು ಭಾಗವಹಿಸಿದ್ದವು.
- ಭಾರತವು ದೇಶದ 60 ನಗರಗಳಲ್ಲಿ 200ಕ್ಕೂ ಹೆಚ್ಚು ಸಭೆಗಳನ್ನು ಆಯೋಜಿಸಿತ್ತು, 1,00,000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.




## ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶ್ವಾಸಾರ್ಹ ಧ್ವನಿ

- ಗ್ಲಾಸ್ಗೋದಲ್ಲಿ ನಡೆದ ಸಿಒಪಿ26 ಶೃಂಗಸಭೆ ಮತ್ತು ಶರ್ಮ್ ಎಲ್-ಶೇಖ್‌ನಲ್ಲಿ ನಡೆದ ಸಿಒಪಿ27 ಶೃಂಗಸಭೆಯಲ್ಲಿ ಭಾರತವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶ್ವಾಸಾರ್ಹ ಧ್ವನಿಯಾಗಿ ಹೊರಹೊಮ್ಮಿತು.

## ಲಸಿಕೆ ಮೈತ್ರಿ






- ಕೋವಿಡ್-19 ಬಿಕ್ಕಟ್ಟು ಸಂದರ್ಭದಲ್ಲಿ ಭಾರತವು ತನ್ನ ಮಾನವ ಕೇಂದ್ರಿತ ರಾಜತಾಂತ್ರಿಕತೆಗೆ ಸಾಕ್ಷಿಯಾಗಿ 'ಲಸಿಕೆ ಮೈತ್ರಿ' ಉಪಕ್ರಮ ಪ್ರಾರಂಭಿಸಿತು.
- 2021 ಜನವರಿಯಿಂದ ಭಾರತವು 99 ದೇಶಗಳು ಮತ್ತು ವಿಶ್ವಸಂಸ್ಥೆಯ 2 ಅಂಗಸಂಸ್ಥೆಗಳಿಗೆ 301.2 ದಶಲಕ್ಷ ಲಸಿಕೆ ಡೋಸ್‌ಗಳನ್ನು ಒದಗಿಸಿದೆ.
- ಈ ತ್ವರಿತ ಮತ್ತು ಸಮಗ್ರ ನೆರವು ಜಾಗತಿಕ ಆರೋಗ್ಯಕ್ಕಾಗಿ ವಿಶ್ವಾಸಾರ್ಹ ಪಾಲುದಾರ ಮತ್ತು ಜಾಗತಿಕ ದಕ್ಷಿಣದಿಂದ ಸಹಾನುಭೂತಿಯ ಧ್ವನಿಯಾಗಿ ಭಾರತದ ವರ್ಚಸ್ಸನ್ನು ಬಲಪಡಿಸಿತು.

**50** ಕ್ಕೂ ಹೆಚ್ಚು ದೇಶಗಳಿಗೆ 1.51 ಕೋಟಿ ಲಸಿಕೆ ಡೋಸ್‌ಗಳನ್ನು ಉಡುಗೊರೆಯಾಗಿ ನೀಡಲಾಯಿತು.

## ಅಂತಾರಾಷ್ಟ್ರೀಯ ಸೌರ ಮೈತ್ರಿಕೂಟ




- 2015 ನವೆಂಬರ್ 30ರಂದು ಪ್ಯಾರಿಸ್‌ನಲ್ಲಿ ನಡೆದ ಸಿಒಪಿ-21ರಲ್ಲಿ ಪ್ರಧಾನ ಮಂತ್ರಿ ಮೋದಿ ಮತ್ತು ಫ್ರೆಂಚ್ ಅಧ್ಯಕ್ಷ ಫ್ರಾಂಕೋಯಿಸ್ ಹೊಲಾಂಡ್ ಅವರು ಉದ್ಘಾಟಿಸಿದ ಅಂತಾರಾಷ್ಟ್ರೀಯ ಸೌರ ಒಕ್ಕೂಟ ಅಥವಾ ಮೈತ್ರಿಕೂಟ(ಐಎಸ್ಎ) ಭಾರತದ ಪ್ರಮುಖ ಹವಾಮಾನ ಬದಲಾವಣೆಯ ಉಪಕ್ರಮವಾಗಿದೆ.

**120** ಸದಸ್ಯ ಮತ್ತು ಸಹಿ ಮಾಡಿದ ದೇಶಗಳೊಂದಿಗೆ ಐಎಸ್ಎ, 2030ರ ವೇಳೆಗೆ ಸೌರಶಕ್ತಿಗಾಗಿ 1 ಟ್ರಿಲಿಯನ್ ಡಾಲರ್ ಗಿಂತ ಹೆಚ್ಚಿನ ಹೂಡಿಕೆ ಒಟ್ಟುಗೂಡಿಸುವ ಗುರಿ ಹೊಂದಿದೆ.

- ಗುರುಗ್ರಾಮ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಇದು, ಭಾರತದಲ್ಲಿ ನೆಲೆಗೊಂಡಿರುವ ಮೊದಲ ಅಂತಾರಾಷ್ಟ್ರೀಯ ಅಂತರ-ಸರ್ಕಾರಿ ಸಂಸ್ಥೆಯಾಗಿದೆ.

## ಭಾರತ: ಬಿಕ್ಕಟ್ಟಿನ ಸಮಯದಲ್ಲಿ ನಾಯಕ



- ಭಾರತವು 150ಕ್ಕೂ ಹೆಚ್ಚಿನ ದೇಶಗಳಿಗೆ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ ಒದಗಿಸಿದೆ.
- 2021 ಜುಲೈನಲ್ಲಿ ವಿದೇಶಾಂಗ ಸಚಿವಾಲಯವು ರಾಷ್ಟ್ರೀಯ ಸಂಸ್ಥೆಗಳು ಮತ್ತು ವಿದೇಶಿ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಲು ತ್ವರಿತ ಸ್ಪಂದನಾ ಕೋಶ ಸ್ಥಾಪಿಸಿದೆ.

## ನೆರೆಹೊರೆಗೆ ಆದ್ಯತೆ

- ಭಾರತದ 'ನೆರೆಹೊರೆ ಮೊದಲು' ನೀತಿಯು ಪ್ರಾದೇಶಿಕ ಸಂಬಂಧಗಳ ಕಡೆಗೆ ದಿಟ್ಟ ಮತ್ತು ದೂರದೃಷ್ಟಿಯ ಕಾರ್ಯವಿಧಾನವನ್ನು ರೂಪಿಸಿದೆ.
- ಈ ನೀತಿಯು ಭೂತಾನ್, ನೇಪಾಳ, ಶ್ರೀಲಂಕಾ, ಮಾಲ್ಡೀವ್ಸ್, ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಂತಹ ನೆರೆಯ ರಾಷ್ಟ್ರಗಳೊಂದಿಗೆ ಬಲವಾದ ಭೌತಿಕ, ಡಿಜಿಟಲ್ ಮತ್ತು ಸಾಂಸ್ಕೃತಿಕ ಸಂಪರ್ಕಗಳಿಗೆ ಆದ್ಯತೆ ನೀಡುತ್ತದೆ.

## ಹೊಸ ರಾಯಭಾರ ಕಚೇರಿಗಳು ಮತ್ತು ದೂತಾವಾಸಗಳು




2014 ಮತ್ತು 2015ರ ನಡುವೆ ಭಾರತವು ಜಗತ್ತಿನಾದ್ಯಂತ **40**ಕ್ಕೂ ಹೆಚ್ಚು ಹೊಸ ರಾಯಭಾರ ಕಚೇರಿಗಳು ಮತ್ತು ದೂತಾವಾಸ ಕಚೇರಿಗಳನ್ನು ತೆರೆದಿದೆ.

ಅವುಗಳ ಸಂಖ್ಯೆ ಈಗ **220** ಆಗಿದೆ. ಈ ವಿಸ್ತರಣೆಯು ಭಾರತದ ಜಾಗತಿಕ ಉಪಸ್ಥಿತಿ ಮತ್ತು ಪ್ರಭಾವವನ್ನು ಮತ್ತಷ್ಟು ಬಲಪಡಿಸಿದೆ.

## ವಿದೇಶಗಳಲ್ಲಿ ಉದ್ಯೋಗಾವಕಾಶಗಳು

- ಕಳೆದ ದಶಕದಲ್ಲಿ ಭಾರತವು ಸೌದಿ ಅರೇಬಿಯಾ, ಫ್ರಾನ್ಸ್, ಯುಎಇ, ಜಪಾನ್, ಯುಕೆ, ಆಸ್ಟ್ರೇಲಿಯಾ ಮತ್ತು ಜರ್ಮನಿ ಸೇರಿದಂತೆ 18ಕ್ಕೂ ಹೆಚ್ಚು ದೇಶಗಳೊಂದಿಗೆ ಚಲನಶೀಲತೆ ಮತ್ತು ವಲಸೆ ಪಾಲುದಾರಿಕೆ ಸ್ಥಾಪಿಸಿದೆ. ಇದು ಭಾರತೀಯ ನಾಗರಿಕರಿಗೆ ವಿದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತಿದೆ.





## ಪರಿಹಾರ ಮತ್ತು ಸ್ಥಳಾಂತರ ಕಾರ್ಯಾಚರಣೆಗಳು

- ಕಳೆದ 10-12 ವರ್ಷಗಳಲ್ಲಿ ಭಾರತದ ವಿದೇಶಾಂಗ ನೀತಿಯು ರಾಜತಾಂತ್ರಿಕತೆ ಮತ್ತು ಸಂಭಾಷಣೆಯ ಮೂಲಕ ರೂಪಿಸಲ್ಪಟ್ಟಿದೆ. ಅಷ್ಟೇ ಮಾತ್ರವಲ್ಲದೆ, ವಿದೇಶದಲ್ಲಿರುವ ತನ್ನ ನಾಗರಿಕರ ಸುರಕ್ಷತೆಗೆ ಅಪಾಯ ಬಂದಾಗಲೆಲ್ಲಾ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳುವತ್ತ ಗಮನ ಹರಿಸಿದೆ. ಪರಿಹಾರ ಮತ್ತು ಸ್ಥಳಾಂತರಿಸುವ ಪ್ರಯತ್ನಗಳು "ರಾಷ್ಟ್ರ ಮೊದಲು" ನೀತಿಯ ಪ್ರಮುಖ ಉದಾಹರಣೆಗಳಾಗಿ ಹೊರಹೊಮ್ಮಿವೆ. ಅದು ಸಾಂಕ್ರಾಮಿಕ ರೋಗವಾಗಿರಲಿ, ಸಂಘರ್ಷದ ಬಿಕ್ಕಟ್ಟಾಗಿರಲಿ, ರಾಜಕೀಯ ಕ್ರಾಂತಿಯಾಗಿರಲಿ ಅಥವಾ ನೈಸರ್ಗಿಕ ವಿಕೋಪವಾಗಿರಲಿ, ಭಾರತವು ನಿರಂತರವಾಗಿ ತನ್ನ ಜನರನ್ನು ಸುರಕ್ಷಿತವಾಗಿ ಮತ್ತು ತ್ವರಿತವಾಗಿ ಮನೆಗೆ ಕರೆತಂದಿದೆ.

## ಪ್ರಮುಖ ಸ್ಥಳಾಂತರ ಕಾರ್ಯಾಚರಣೆಗಳು



- ವಂದೇ ಭಾರತ್ ಮಿಷನ್, ಆಪರೇಷನ್ ದೇವಿ ಶಕ್ತಿ, ಆಪರೇಷನ್ ಗಂಗಾ, ಆಪರೇಷನ್ ಕಾವೇರಿ, ಆಪರೇಷನ್ ಅಜಯ್ ಮತ್ತು ಆಪರೇಷನ್ ಇಂದ್ರಾವತಿ ಸೇರಿದಂತೆ ಹಲವಾರು ಕಾರ್ಯಾಚರಣೆಗಳನ್ನು ಭಾರತ ಸರ್ಕಾರದ ಉಪಕ್ರಮದಡಿ ನಡೆಸಲಾಗಿದೆ.

## ಅತ್ಯುನ್ನತ ನಾಗರಿಕ ಗೌರವಗಳಿಂದ ಭಾರತದ ಪ್ರತಿಷ್ಠೆ ಹೆಚ್ಚಳ



- 2026 ಏಪ್ರಿಲ್ ವರೆಗೆ ಅನ್ವಯವಾಗುವಂತೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ 29ಕ್ಕೂ ಹೆಚ್ಚಿನ ದೇಶಗಳು ಅತ್ಯುನ್ನತ ನಾಗರಿಕ ಪ್ರಶಸ್ತಿ, ಪದಕ ಗೌರವಗಳನ್ನು ನೀಡಿವೆ, ಇದು ಇತಿಹಾಸದಲ್ಲಿ ಅತಿ ಹೆಚ್ಚಿನ ಅಂತಾರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದ ಭಾರತೀಯ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

## ಭಯೋತ್ಪಾದನೆ ಬಗ್ಗೆ ಕಠಿಣ ನೀತಿ



- ಭಯೋತ್ಪಾದನಾ ದಾಳಿಗಳಿಗೆ ಪ್ರಬಲ ಪ್ರತಿಕ್ರಿಯೆ: ಭಾರತದ ಮೇಲಿನ ಯಾವುದೇ ಭಯೋತ್ಪಾದಕ ದಾಳಿಯನ್ನು, ಅಪರಾಧಿಗಳು ಎಲ್ಲಿಂದ ಕಾರ್ಯ ನಿರ್ವಹಿಸುತ್ತಿದ್ದರೂ ಸಹ, ಬಲಿಷ್ಠ ಮತ್ತು ನಿರ್ಣಾಯಕ ಪ್ರತಿಕ್ರಿಯೆಯೊಂದಿಗೆ ಎದುರಿಸಲಾಗುವುದು.
- ಪರಮಾಣು ಬ್ಲ್ಯಾಕ್‌ಮೇಲ್‌ಗೆ ಶೂನ್ಯ ಸಹಿಷ್ಣುತೆ: ಭಾರತವು ಪರಮಾಣು ಬೆದರಿಕೆಗಳಿಗೆ ಹೆದರುವುದಿಲ್ಲ, ಭಯೋತ್ಪಾದಕ ಅಡಗುತಾಣಗಳ ಮೇಲೆ ನಿಖರವಾದ ದಾಳಿಗಳನ್ನು ಮುಂದುವರಿಸುತ್ತದೆ.
- ಭಯೋತ್ಪಾದಕ ಕೃತ್ಯಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ: ಭಯೋತ್ಪಾದಕ ದಾಳಿಯ ಸೂತ್ರಧಾರಿಗಳು ಮತ್ತು ಪ್ರಾಯೋಜಕರ ನಡುವೆ ಯಾವುದೇ ವ್ಯತ್ಯಾಸ ಮಾಡುವುದಿಲ್ಲ; ಇಬ್ಬರೂ ಹೊಣೆಗಾರರಾಗಿರುತ್ತಾರೆ.
- ಯಾವುದೇ ಸಂವಾದದಲ್ಲಿ ಭಯೋತ್ಪಾದನೆ ವಿಷಯಕ್ಕೆ ಆದ್ಯತೆ ನೀಡಬೇಕು: ಪಾಕಿಸ್ತಾನದೊಂದಿಗೆ ಯಾವುದೇ ಸಂವಾದ ನಡೆದರೆ, ಭಾರತವು ಅದು ಭಯೋತ್ಪಾದನೆ ಅಥವಾ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ವಿಷಯದ ಮೇಲೆ ಮಾತ್ರ ವಿಷಯ ಕೇಂದ್ರೀಕರಿಸುತ್ತದೆ
- ಸಾರ್ವಭೌಮತ್ವದ ಬಗ್ಗೆ ಯಾವುದೇ ರಾಜಿ ಇಲ್ಲ: 'ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಹೋಗಲು ಸಾಧ್ಯವಿಲ್ಲ. ಭಯೋತ್ಪಾದನೆ ಮತ್ತು ವ್ಯಾಪಾರ ಒಟ್ಟಿಗೆ ಸಹಬಾಳ್ವೆ ನಡೆಸಲು ಸಾಧ್ಯವಿಲ್ಲ. ನೀರು ಮತ್ತು ರಕ್ತ ಒಟ್ಟಿಗೆ ಹರಿಯಲು ಸಾಧ್ಯವಿಲ್ಲ.' ಭಯೋತ್ಪಾದಕ ಬೆದರಿಕೆಗಳ ನಡುವೆ, ದ್ವಿಪಕ್ಷೀಯ ಸಂಬಂಧಗಳು ಸ್ಥಗಿತಗೊಂಡಿವೆ.



# ಭಯೋತ್ಪಾದನೆ ಬಗ್ಗೆ ಶೂನ್ಯ ಸಹಿಷ್ಣುತೆ

*ಭಯೋತ್ಪಾದನೆ ವಿಷಯದಲ್ಲಿ "ಒಳ್ಳೆಯ ಭಯೋತ್ಪಾದನೆ" ಅಥವಾ "ಕೆಟ್ಟ ಭಯೋತ್ಪಾದನೆ" ಎಂಬ ಯಾವುದೇ ವ್ಯತ್ಯಾಸವಿಲ್ಲ ಎಂಬುದನ್ನು ಭಾರತ ಸದೃಢವಾಗಿ ಹೇಳುತ್ತದೆ. ಇದು ಮಾನವತೆ, ಸ್ವಾತಂತ್ರ್ಯ ಮತ್ತು ನಾಗರಿಕತೆಯ ಮೇಲಿನ ದಾಳಿಯಾಗಿದೆ. ಪರಿಣಾಮವಾಗಿ, ಕೇಂದ್ರ ಸರ್ಕಾರವು ಭಯೋತ್ಪಾದನೆಯ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಯಲ್ಲಿ ದೃಢನಿಶ್ಚಯ ಹೊಂದಿದೆ. ಉರಿ ಸರ್ಜಿಕಲ್ ಸ್ಟ್ರೈಕ್, ಬಾಲಕೋಟ್ ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂಧೂರ ಮೂಲಕ ಜಗತ್ತು ಈ ಬದ್ಧತೆಯನ್ನು ನೇರವಾಗಿ ಕಂಡಿದೆ. ನಿಖರವಾದ, ಕಠಿಣ ಮತ್ತು ನಿರ್ಣಾಯಕ ದಾಳಿಗಳನ್ನು ನಡೆಸುವ ಮೂಲಕ, ಜಗತ್ತಿಗೆ ಸ್ಪಷ್ಟ ಸಂದೇಶ ರವಾನಿಸಲಾಗಿದೆ. ಭಾರತ ಯುದ್ಧವನ್ನು ಬಯಸುವುದಿಲ್ಲ, ಆದರೆ ಭಯೋತ್ಪಾದನೆಯನ್ನು ಎಂದಿಗೂ ಸಹಿಸುವುದಿಲ್ಲ.*

## ಆಪರೇಷನ್ ಸಿಂಧೂರ

- 2025 ಏಪ್ರಿಲ್ ನಲ್ಲಿ ಪಹಲ್ಗಾಮ್‌ನಲ್ಲಿ ನಾಗರಿಕರ ಮೇಲೆ ನಡೆದ ಕ್ರೂರ ಭಯೋತ್ಪಾದಕ ದಾಳಿಯ ನಂತರ ಭಾರತ ಆಪರೇಷನ್ ಸಿಂಧೂರ ಆರಂಭಿಸಿತು.
- ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದಲ್ಲಿರುವ 9 ಭಯೋತ್ಪಾದಕ ಶಿಬಿರಗಳ ಮೇಲೆ ನಿಖರವಾದ ಪ್ರತೀಕಾರ ದಾಳಿಗಳನ್ನು ನಡೆಸಲಾಯಿತು.
- ಅಂತಾರಾಷ್ಟ್ರೀಯ ಗಡಿಗಳನ್ನು ದಾಟದೆ ಬೆದರಿಕೆಗಳನ್ನು ತಟಸ್ಥಗೊಳಿಸಲು ಭಾರತೀಯ ಸೇನೆಯು ಡ್ರೋನ್ ದಾಳಿಗಳು, ಫಿರಂಗಿ ಗುಂಡಿನ ದಾಳಿ ಮತ್ತು ಬಹು-ಪದರದ ವಾಯು ರಕ್ಷಣಾ ವ್ಯವಸ್ಥೆಗಳನ್ನು ಬಳಸಿತು.
- ಈ ಕಾರ್ಯಾಚರಣೆಯು ಭಾರತೀಯ ಸೇನೆ, ವಾಯುಪಡೆ ಮತ್ತು ನೌಕಾಪಡೆಯ ನಡುವಿನ ಸಮನ್ವಯದ ಅನುಕರಣೀಯ ಕಾರ್ಯಕ್ಷಮತೆಯಾಗಿದೆ.
- ನೂರ್ ಖಾನ್ ವಾಯುನೆಲೆ ಮತ್ತು ರಹೀಮ್ ಯಾರ್ ಖಾನ್ ವಾಯುನೆಲೆಯಂತಹ ಪ್ರಮುಖ ನೆಲೆಗಳನ್ನು ಗುರಿಯಾಗಿಸಿಕೊಂಡು ವೈಮಾನಿಕ ಕಾರ್ಯಾಚರಣೆಗಳನ್ನು ನಡೆಸಿದ ಭಾರತೀಯ ವಾಯುಪಡೆಯು, ಪಾಕಿಸ್ತಾನದೊಳಗಿನ ಭಯೋತ್ಪಾದಕ ಮೂಲಸೌಕರ್ಯಗಳ ವಿರುದ್ಧ ನಿಖರವಾದ ದಾಳಿಗಳನ್ನು ನಡೆಸಿತು.
- ನೌಕಾಪಡೆಯು ಎಂಐಜಿ-29ಕೆ ಫೈಟರ್ ಜೆಟ್‌ಗಳು ಮತ್ತು ವಾಯುಗಾಮಿ ಮುಂಚಿನ ಎಚ್ಚರಿಕೆ ಒದಗಿಸುವ ಹೆಲಿಕಾಪ್ಟರ್‌ಗಳನ್ನು ಹೊಂದಿದ ತನ್ನ ಕ್ಯಾರಿಯರ್ ಬ್ಯಾಟಲ್ ಗ್ರೂಪ್(ಸಿಬಿಜಿ- ಸಾಗರ ಕಾರ್ಯಾಚರಣೆ ನಡೆಸುವ ನೌಕಾಪಡೆಯ ದೊಡ್ಡ ಸಮರ ಸಮೂಹ) ಅನ್ನು ನಿಯೋಜಿಸಿತ್ತು.
- ಯುದ್ಧತಂತ್ರದ ಯಶಸ್ಸಿನ ಜತೆಗೆ, ಈ ಕಾರ್ಯಾಚರಣೆಯು ಪ್ರಬಲವಾದ ಕಾರ್ಯತಂತ್ರ ಸಂದೇಶವನ್ನು ನೀಡಿತು - ಭೂಮಿ, ವಾಯು ಮತ್ತು ಸಾಗರ ಪ್ರದೇಶಗಳಲ್ಲಿ ಸಂಘಟಿತ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸುವ ಭಾರತದ ಸಾಮರ್ಥ್ಯವನ್ನು ಇದು ಪ್ರದರ್ಶಿಸಿತು.
- ಜಕೋಬಾಬಾದ್‌ನ ಶಹಬಾಜ್ ವಾಯುನೆಲೆಯ ಮೇಲೆ ದಾಳಿ ಮಾಡುವ ಮೊದಲು ಮತ್ತು ನಂತರ ಸೆರೆಹಿಡಿಯಲಾದ ಉಪಗ್ರಹ ಚಿತ್ರಗಳು ವಿನಾಶದ ವ್ಯಾಪ್ತಿಯನ್ನು ಸ್ಪಷ್ಟವಾಗಿ ವಿವರಿಸಿವೆ.
- ಈ ದಾಳಿಗಳು ಪ್ರಮುಖ ಯುದ್ಧ ಸಾಮಗ್ರಿ ಡಿಪೋಗಳು ಮತ್ತು ವಾಯುನೆಲೆಗಳನ್ನು ಗುರಿಯಾಗಿಸಿಕೊಂಡಿದ್ದವು - ಉದಾಹರಣೆಗೆ ಸರ್ಗೋಧಾ ಮತ್ತು ಭೋಲಾರಿಯಲ್ಲಿ ಎಫ್-16 ಮತ್ತು ಜೆಎಫ್-17 ಯುದ್ಧವಿಮಾನಗಳು ನೆಲೆಗೊಂಡಿದ್ದವು. ಪರಿಣಾಮವಾಗಿ, ಪಾಕಿಸ್ತಾನ ವಾಯುಪಡೆಯ ಮೂಲಸೌಕರ್ಯ ನೆಲೆಯಲ್ಲಿ ಸರಿಸುಮಾರು 20% ಪ್ರಮಾಣ ನಾಶವಾಯಿತು.
- ಭೋಲಾರಿ ವಾಯುನೆಲೆಯ ಬಾಂಬ್ ದಾಳಿಯಲ್ಲಿ ಸ್ಕ್ವಾಡ್ರನ್ ಲೀಡರ್ ಉಸ್ಮಾನ್ ಯೂಸುಫ್ ಮತ್ತು ನಾಲ್ವರು ವಾಯುಪಡೆಯ ಸಿಬ್ಬಂದಿ ಸೇರಿದಂತೆ 50ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು. ಹಲವಾರು ಪಾಕಿಸ್ತಾನಿ ಯುದ್ಧ ವಿಮಾನಗಳು ಸಹ ನಾಶವಾದವು.
- ಆಪರೇಷನ್ ಸಿಂಧೂರ ಹೊಸ ಕೆಂಪು ರೇಖೆ ಎಳೆದಿದೆ: ಭಯೋತ್ಪಾದನೆಯು ಪಾಕಿಸ್ತಾವ ಸರ್ಕಾರದ ನೀತಿಯೇ ಆಗಿದ್ದರೆ, ಅದಕ್ಕೆ ಸ್ಪಷ್ಟ ಮತ್ತು ಬಲಿಷ್ಠ ಪ್ರತಿಕ್ರಿಯೆ ನೀಡಲಾಗುವುದು.

**ಕೇವಲ 3 ಗಂಟೆಗಳಲ್ಲಿ ಭಾರತವು ನೂರ್ ಖಾನ್, ರಫೀಕಿ, ಮುರಿದ್, ಸುಕ್ಕೂರ್, ಸಿಯಾಲ್ಕೋಟ್, ಪಸ್ರೂರ್, ಚುನಿಯನ್, ಸರ್ಗೋಧಾ, ಸ್ಕರ್ದು, ಭೋಲಾರಿ ಮತ್ತು ಜಾಕೋಬಾಬಾದ್ ಸೇರಿದಂತೆ 11 ಸೇನಾ ನೆಲೆಗಳನ್ನು ಗುರಿಯಾಗಿಸಿ, ನಿಖರ ದಾಳಿ ನಡೆಸಿತು.**



## ಭಯೋತ್ಪಾದನೆ ವಿರುದ್ಧ ಭಾರತ ಮತ್ತು ಫ್ರಾನ್ಸ್ ಒಗ್ಗೂಡಿವೆ

- ಭಯೋತ್ಪಾದನೆಗೆ ಹಣಕಾಸು ನೀಡುವುದನ್ನು ತಡೆಯಲು ಹಣಕಾಸು ಕ್ರಿಯಾ ಕಾರ್ಯಪಡೆ (ಎಫ್‌ಎಟಿಎಫ್) ಅನುಸರಣೆಗೆ ಒತ್ತು
- ಭಾರತದ ಭಯೋತ್ಪಾದನಾ ನಿಗ್ರಹದ ನಾಯಕತ್ವವನ್ನು ಪ್ರದರ್ಶಿಸಲು ನವದೆಹಲಿಯಲ್ಲಿ ಮಿಲಿಪೋಲ್ 2025 ಆಯೋಜಿಸಲಾಗಿತ್ತು
- 2024 ಏಪ್ರಿಲ್ ನಲ್ಲಿ ಭಾರತ-ಫ್ರಾನ್ಸ್ ಭಯೋತ್ಪಾದನಾ ನಿಗ್ರಹ ಸಂವಾದ ಆಯೋಜಿಸಲಾಗಿತ್ತು.





## ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಭಾರತ-ಅಮೆರಿಕ ಒಕ್ಕೂಟ ರಚನೆ

- ಭಯೋತ್ಪಾದನಾ ಜಾಲಗಳನ್ನು ನಿರ್ಮೂಲನೆ ಮಾಡಲು ಭಾರತ-ಅಮೆರಿಕ ಒಗ್ಗಟ್ಟು
- ಅಲ್-ಖೈದಾ, ಐಸಿಸ್, ಜೈಶ್-ಎ-ಮೊಹಮ್ಮದ್ ಮತ್ತು ಲಷ್ಕರ್-ಎ-ತೈಬಾದಂತಹ ಭಯೋತ್ಪಾದಕ ಗುಂಪುಗಳ ವಿರುದ್ಧ ಜಂಟಿ ಕ್ರಮ
- 26/11 ಮತ್ತು ಅಬ್ಬೆ ಗೇಟ್ ದಾಳಿಯ ಅಪರಾಧಿಗಳಿಗೆ ಬಲಿಷ್ಠ ಪ್ರತಿಕ್ರಿಯೆ
- 26/11 ಸಂಚುಕೋರ ತಹವ್ವೂರ್ ರಾಣಾನನ್ನು ಅಮೆರಿಕ ಭಾರತಕ್ಕೆ ಹಸ್ತಾಂತರಿಸಿದೆ
- 26/11 ಮತ್ತು ಪಠಾಣ್‌ಕೋಟ್ ದಾಳಿಯ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನಕ್ಕೆ ಮನವಿ.


## ಭಯೋತ್ಪಾದನೆಗೆ ಹಣಕಾಸು ನೆರವು ವಿರುದ್ಧ ಜಾಗತಿಕ ಅಭಿಯಾನ

- ಭಾರತವು 2022ರಲ್ಲಿ 'ಭಯೋತ್ಪಾದನೆಗೆ ಹಣಕಾಸಿನ ನೆರವು ಸಲ್ಲದು' ಸಮ್ಮೇಳನ ಆಯೋಜಿಸಿತ್ತು.
- ಜಾಗತಿಕ ಕ್ರಿಪ್ಟೋ ನಿಯಮಗಳ ಉತ್ತೇಜನಕ್ಕೆ ಭಾರತ ಒತ್ತು ನೀಡಿದೆ.



## ಸರ್ಜಿಕಲ್ ಸ್ಟ್ರೈಕ್‌ಗಳು ಮತ್ತು ಬಾಲಾಕೋಟ್ ವಾಯುದಾಳಿಗಳು

- 2016 ಸೆಪ್ಟೆಂಬರ್ 28-29ರಂದು 18 ಸೈನಿಕರ ಜೀವಗಳನ್ನು ಬಲಿ ಪಡೆದ ಉರಿ ಭಯೋತ್ಪಾದಕ ದಾಳಿಗೆ ಭಾರತವು ಸರ್ಜಿಕಲ್ ಸ್ಟ್ರೈಕ್ ನಡೆಸುವ ಮೂಲಕ ಪ್ರತಿಕ್ರಿಯೆ ನೀಡಿದೆ.
- ಈ ದಾಳಿಗಳು ನಿಯಂತ್ರಣ ರೇಖೆಯಾದ್ಯಂತ(ಎಲ್‌ಒಸಿ) ಭಯೋತ್ಪಾದಕರು ಮತ್ತು ಅದರ ಪೋಷಕರ ಮೇಲೆ ಭಾರಿ ಸಾವು-ನೋವು ಉಂಟುಮಾಡಿದವು.
- 2019 ಫೆಬ್ರವರಿ 14ರಂದು ಪುಲ್ವಾಮಾ ಭಯೋತ್ಪಾದಕ ದಾಳಿಯ ನಂತರ, ಭಾರತ ತ್ವರಿತ ಕ್ರಮ ಕೈಗೊಂಡಿತು. 2019 ಫೆಬ್ರವರಿ 26ರಂದು ಬಾಲಕೋಟ್ ಮೇಲೆ ನಡೆದ ವಾಯುದಾಳಿಯಲ್ಲಿ ಹಿರಿಯ ಕಮಾಂಡರ್‌ಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯ ಜೈಶ್-ಎ-ಮೊಹಮ್ಮದ್ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲಾಯಿತು.
- ಭಯೋತ್ಪಾದನೆಯ ಮೂಲಕ ನಡೆಸುವ ಪರೋಕ್ಷ ಯುದ್ಧವನ್ನು ಭಾರತ ಇನ್ನು ಮುಂದೆ ಸಹಿಸುವುದಿಲ್ಲ ಎಂಬ ಭಾರತದ ಪೂರ್ವಭಾವಿ ಕ್ರಮಗಳು ಇಡೀ ಜಗತ್ತಿಗೆ ಪ್ರದರ್ಶಿಸಲ್ಪಟ್ಟವು.




## ಮಸೂದ್ ಅಜರ್‌ನನ್ನು ಜಾಗತಿಕ ಭಯೋತ್ಪಾದಕ ಎಂದು ಹೆಸರಿಸಲಾಗಿದೆ

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಮಸೂದ್ ಅಜರ್‌ನನ್ನು ಭಯೋತ್ಪಾದಕ ಪಟ್ಟಿಗೆ ಸೇರ್ಪಡೆ ಮಾಡಿದೆ.
- 2019ರಲ್ಲಿ ಭಾರತಕ್ಕೆ ಸಿಕ್ಕ ಪ್ರಮುಖ ರಾಜತಾಂತ್ರಿಕ ವಿಜಯವೆಂದು ಸಾಬೀತಾಗಿದೆ.

## ಹೊಸ ಮತ್ತು ಸುರಕ್ಷಿತ ಭಾರತದ ಕಡೆಗೆ...

- 2010 ಮತ್ತು 2024ರ ನಡುವೆ ಭಯೋತ್ಪಾದನೆಯಿಂದ ಉಂಟಾಗುತ್ತಿದ್ದ ಸಾವುಗಳು ಶೇಕಡ 85ರಷ್ಟು ಕಡಿಮೆಯಾಗಿವೆ.
- 2019ರಿಂದ ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಘಟನೆಗಳು ಶೇಕಡ 70ರಷ್ಟು ಕಡಿಮೆಯಾಗಿವೆ.



# ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ




- 2019 ಆಗಸ್ಟ್ 2ರಂದು, ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕಾಯ್ದೆಯ ತಿದ್ದುಪಡಿಗಳಲ್ಲಿ ಹೊಸ ಅಪರಾಧಗಳನ್ನು ಸೇರಿಸಲಾಗಿದೆ, ವಿದೇಶಗಳಲ್ಲಿಯೂ ತನಿಖೆ ನಡೆಸಲು ಎನ್‌ಐಎಗೆ ಅಧಿಕಾರ ನೀಡಲಾಗಿದೆ.
- ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ(ಯುಎಪಿಎ)ಯ ತಿದ್ದುಪಡಿಗಳು ಭಯೋತ್ಪಾದಕರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ವ್ಯಕ್ತಿಗಳನ್ನು ಭಯೋತ್ಪಾದಕರು ಎಂದು ಹೆಸರಿಸುವ ಅಧಿಕಾರ ನೀಡಿವೆ.
- ಪ್ರಸ್ತುತ ಕೇಂದ್ರ ಸರ್ಕಾರವು ಮೊದಲ ಬಾರಿಗೆ ಭಯೋತ್ಪಾದನೆಗೆ ಕಾನೂನಿನ ವ್ಯಾಖ್ಯಾನ ಒದಗಿಸಿದೆ.

## ಸದೃಢವಾದ ನೀತಿಗಳ ಮೂಲಕ ಸುಭದ್ರ ಭಾರತ

- ಕಳೆದ 10 ವರ್ಷಗಳಲ್ಲಿ ಭಯೋತ್ಪಾದಕ ಘಟನೆಗಳಲ್ಲಿ ಶೇ.70ರಷ್ಟು ಕಡಿತ.
- ಯುಎಪಿಎ ಪ್ರಕರಣಗಳಲ್ಲಿ ಎನ್‌ಐಎ ಶೇ.95ರಷ್ಟು ಶಿಕ್ಷೆಯ ಪ್ರಮಾಣ ನೀಡುತ್ತದೆ - ಇದು ಭಯೋತ್ಪಾದನಾ ನಿಗ್ರಹ ಬಲಿಷ್ಠ ನೀತಿಗೆ ಸಾಕ್ಷಿಯಾಗಿದೆ.

**15ಕ್ಕೂ ಹೆಚ್ಚಿನ ಸಂಘಟನೆಗಳನ್ನು ಭಯೋತ್ಪಾದಕ ಘಟಕಗಳೆಂದು ವರ್ಗೀಕರಿಸಿ, ನಿಷೇಧಿಸಲಾಗಿದೆ.**

### ಭಯೋತ್ಪಾದಕ ಘಟನೆಗಳು






> **ಕೆಲವು ರಾಷ್ಟ್ರಗಳು ತಮ್ಮ ವಿದೇಶಾಂಗ ನೀತಿಯ ಭಾಗವಾಗಿ ಭಯೋತ್ಪಾದನೆಯನ್ನು ಬೆಂಬಲಿಸುತ್ತಿವೆ, ಈ ರಾಷ್ಟ್ರಗಳನ್ನು ದೂರವಿಡಬೇಕು. ಭಯೋತ್ಪಾದನೆ ವಿಷಯದಲ್ಲಿ ಯಾವುದೇ 'ಇದ್ದರೆ' ಅಥವಾ 'ಆದರೆ' ಮುಂತಾದ ಹೇಳಿಕೆಗಳಿಗೆ ಆಸ್ಪದ ಇರಬಾರದು.**
>
> *ನರೇಂದ್ರ ಮೋದಿ, ಪ್ರಧಾನ ಮಂತ್ರಿ*



ಮುಖಪುಟ ಲೇಖನ 12 ವರ್ಷಗಳ ವಿಕಾಸ ಯಾತ್ರೆ



# ನಕ್ಸಲ್-ಮುಕ್ತ ಭಾರತ: ನವ ಭಾರತದ ಹೊಸ ಕಥೆ

*ಭಾರತವು ನಕ್ಸಲಾವಾದ ಮತ್ತು ಮಾವೋವಾದಿ ಭಯೋತ್ಪಾದನೆಯಿಂದ ಮುಕ್ತವಾಗಿದೆ. ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ, ಇದು ಕಳೆದ 12 ವರ್ಷಗಳಲ್ಲಿ ಭಾರತದ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ. ದೇಶದ ಸಂವಿಧಾನವು ಬಾಂಬ್‌ಗಳು, ಬಂದೂಕುಗಳು ಮತ್ತು ಪಿಸ್ತೂಲ್ಗಳ ಮೇಲಿನ ವಿಜಯವನ್ನು ಸಾಧಿಸಿದೆ. ಒಂದು ಕಾಲದಲ್ಲಿ "ರೆಡ್ ಕಾರಿಡಾರ್"ಗಳು" ಎಂದು ಕರೆಯಲ್ಪಡುತ್ತಿದ್ದ ಪ್ರದೇಶಗಳು ಇಂದು ಸ್ಪಷ್ಟವಾಗಿ "ಗ್ರೀನ್ ಗ್ರೋತ್ ಜ್ಹೋನ್‌ಗಳಾಗಿ" ರೂಪಾಂತರಗೊಳ್ಳುತ್ತಿವೆ. ದಶಕಗಳಷ್ಟು ಹಳೆಯದಾದ ಈ ಸಮಸ್ಯೆಯನ್ನು ಕಾಲಮಿತಿಯಲ್ಲಿ ನಿರ್ಮೂಲನೆ ಮಾಡುವ ಸಂಕಲ್ಪ—ನಕ್ಸಲ್-ಮುಕ್ತ ಭಾರತದ ಪ್ರತಿಜ್ಞೆಯು—ಮಾರ್ಚ್ 31, 2026 ರಂದು "ಹೋರಾಟದಿಂದ ಹುಟ್ಟಿದ ಸಾಧನೆ" ಎಂಬ ಐತಿಹಾಸಿಕ ಅಧ್ಯಾಯವನ್ನು ಬರೆಯಿತು.*

## ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು

2014ರಿಂದ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ:

**17,589** ಕಿಲೋಮೀಟರ್ ರಸ್ತೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

ಇವುಗಳಲ್ಲಿ **12,000** ಕಿಲೋಮೀಟರ್ ರಸ್ತೆಗಳನ್ನು ನಿರ್ಮಿಸಲಾಗಿದೆ.

₹6,000 ಕೋಟಿ ವೆಚ್ಚದಲ್ಲಿ ಸುಮಾರು **5,000** ಮೊಬೈಲ್ ಟವರ್ ಗಳನ್ನು ಸ್ಥಾಪಿಸಲಾಗಿದೆ.

**6,025** ಅಂಚೆ ಕಚೇರಿಗಳನ್ನು ತೆರೆಯಲಾಗಿದೆ.

**8,000** 4ಜಿ ಟವರ್ ಗಳನ್ನು ಸ್ಥಾಪಿಸಲು ಸಹ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಳೆದ 12 ವರ್ಷಗಳಲ್ಲಿ: **1,804** ಬ್ಯಾಂಕ್ ಶಾಖೆಗಳನ್ನು ತೆರೆಯಲಾಗಿದೆ ಮತ್ತು **1,321** ಎಟಿಎಂಗಳನ್ನು ಸ್ಥಾಪಿಸಲಾಗಿದೆ.



## 2024ರ ವೇಳೆಗೆ ಹಲವು ರಾಜ್ಯಗಳಲ್ಲಿ ನಕ್ಸಲ್‌ವಾದ ನಿರ್ಮೂಲನೆ

- 2024ಕ್ಕೂ ಮುನ್ನವೇ ಒಡಿಶಾ ಮತ್ತು ಬಿಹಾರ ನಕ್ಸಲ್ ಮುಕ್ತವಾಗಿದ್ದವು.
- ಕೇವಲ ಒಂದು ತಾಲ್ಲೂಕು ಹೊರತುಪಡಿಸಿ, ಮಹಾರಾಷ್ಟ್ರವು 2024ಕ್ಕೂ ಮುನ್ನವೇ ನಕ್ಸಲ್ ಮುಕ್ತವಾಗಿತ್ತು.
- ಕೇವಲ ಒಂದು ಜಿಲ್ಲೆಯನ್ನು ಹೊರತುಪಡಿಸಿ, ಜಾರ್ಖಂಡ್ 2024ಕ್ಕೂ ಮುನ್ನವೇ ನಕ್ಸಲ್ ಮುಕ್ತವಾಗಿತ್ತು.
- 2026ರ ಮಾರ್ಚ್ 31ರ ವೇಳೆಗೆ ಇಡೀ ದೇಶದಿಂದ ನಕ್ಸಲ್ ವಾದವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಾಗಿ ಆಗಸ್ಟ್ 24, 2024ರಂದು ಗೃಹ ಸಚಿವರಾದ ಅಮಿತ್ ಶಾ ಘೋಷಿಸಿದ್ದರು.



**“ಎಡಪಂಥೀಯ ತೀವ್ರವಾದಿಗಳು ಮತ್ತು ಅವರ ಬೆಂಬಲಿಗರು ತಾವು ಅವರ ಹಕ್ಕುಗಳಿಗಾಗಿ ಮತ್ತು ಅವರಿಗೆ ನ್ಯಾಯ ಒದಗಿಸಲು ಹೋರಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಾ, ಮುಗ್ಧ ಆದಿವಾಸಿಗಳ ಮುಂದೆ ಸುಳ್ಳು ನಿರೂಪಣೆಯನ್ನು ಮುಂದಿಟ್ಟರು.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*


### ನಕ್ಸಲಿಸಂ ನಿರ್ಮೂಲನೆಗೆ ತೆಗೆದುಕೊಂಡ ಕ್ರಮಗಳು

11 ವರ್ಷಗಳಲ್ಲಿ **596** ಸುಭದ್ರ ಪೊಲೀಸ್ ಠಾಣೆಗಳನ್ನು ನಿರ್ಮಿಸಲಾಗಿದೆ.

2014ರಲ್ಲಿ ಅತಿ ಹೆಚ್ಚು ಬಾಧಿತ ಜಿಲ್ಲೆಗಳ ಸಂಖ್ಯೆ





### ಮಾವೋವಾದಿಗಳ ಹತ್ಯೆ





(ಗಮನಿಸಿ: ಮಾರ್ಚ್ 30, 2026 ರವರೆಗಿನ ಮಾಹಿತಿ.)

### ಬಂಧನ




### ಶರಣಾಗತಿ




(ಗಮನಿಸಿ: ಏಪ್ರಿಲ್ 30, 2026 ರವರೆಗೆ)

## ಸರ್ಕಾರದ ನೀತಿಗಳ ಪ್ರಭಾವ

- ನಕ್ಸಲರಿಂದ ವಶಪಡಿಸಿಕೊಳ್ಳಲಾದ ಶಸ್ತ್ರಾಸ್ತ್ರಗಳಲ್ಲಿ ಶೇಕಡಾ 92 ರಷ್ಟು ಶಸ್ತ್ರಾಸ್ತ್ರಗಳನ್ನು ಪೊಲೀಸರಿಂದಲೇ ವಶಪಡಿಸಿಕೊಳ್ಳಲಾಗಿತ್ತು.
- ನಕ್ಸಲರ ಪ್ರಧಾನ ಕಾರ್ಯದರ್ಶಿ ಬಸವರಾಜು ಅವರನ್ನು ದಮನ ಮಾಡಲಾಗಿದೆ.
- 27 ಜನರ ಕೊಲೆಗೆ ಕಾರಣನಾಗಿದ್ದ ಹಿಡ್ಮನನ್ನು ದಮನ ಮಾಡಲಾಗಿದೆ.
- 11 ವರ್ಷಗಳ ಕಾಲ ಸಕ್ರಿಯನಾಗಿದ್ದ ಗಜುರೆಲ್ಲ ರವಿಯನ್ನು ದಮನ ಮಾಡಲಾಗಿದೆ.
- 46 ವರ್ಷಗಳ ಕಾಲ ಸಕ್ರಿಯನಾಗಿದ್ದ ಕದ್ರಿ ಸತ್ಯನಾರಾಯಣ ರೆಡ್ಡಿಯನ್ನು ದಮನ ಮಾಡಲಾಗಿದೆ.
- 44 ವರ್ಷಗಳ ಕಾಲ ಸಕ್ರಿಯನಾಗಿದ್ದ ಗಣೇಶ್ ಉಯಿಕೆಯನ್ನು ದಮನ ಮಾಡಲಾಗಿದೆ.
- 46 ವರ್ಷಗಳ ಕಾಲ ಸಕ್ರಿಯರಾಗಿದ್ದ ವೇಣುಗೋಪಾಲ್ ಮತ್ತು ಪಲ್ಲೂರಿ ಪ್ರಸಾದ್ ರಾವ್ ಚಂದನಾ ಶರಣಾಗಿದ್ದಾರೆ.
- 36 ವರ್ಷಗಳ ಕಾಲ ಸಕ್ರಿಯರಾಗಿದ್ದ ವಾಸುದೇವ್ ಮತ್ತು ರಾಮದೇವ್ ಮಾಂಝಿ ದೇಬು ಶರಣಾಗಿದ್ದಾರೆ.
- 44 ವರ್ಷಗಳ ಕಾಲ ಸಕ್ರಿಯನಾಗಿದ್ದ ತಿಪ್ಪಿ ತಿರುಪತಿ ಕೂಡ ಶರಣಾಗಿದ್ದಾನೆ.
- ಉಳಿದ ಎಲ್ಲಾ ಉನ್ನತ ಮಟ್ಟದ ಸಶಸ್ತ್ರ ಮಾವೋವಾದಿ ನಾಯಕರನ್ನು ದಮನ ಮಾಡಲಾಗಿದೆ.

**ನಕ್ಸಲ್ಬರಿ**

ನಕ್ಸಲ್ಬರಿಯಲ್ಲಿ ಆರಂಭವಾದ ಈ ಚಳುವಳಿ 12 ರಾಜ್ಯಗಳಿಗೆ ವಿಸ್ತರಿಸಿತು.

ದೇಶದ **17%** ಭೂಭಾಗ ಒಳಗೊಂಡಿತ್ತು

ಅದರ ಜನಸಂಖ್ಯೆಯ ಶೇಕಡಾ **10** ಕ್ಕಿಂತ ಹೆಚ್ಚು

## ನಕ್ಸಲರ ನಿರ್ಮೂಲನಾ ಕಾರ್ಯಾಚರಣೆಗಳು



**ಆಪರೇಷನ್ ಆಕ್ಟೋಪಸ್:** 2022 ರಲ್ಲಿ ಬಿಹಾರದ ಬುಢಾ ಪಹಾಡ್ ಪ್ರದೇಶದಲ್ಲಿ ನಡೆಸಲಾಯಿತು.

**ಆಪರೇಷನ್ ಡಬಲ್ ಬುಲ್:** 2022 ರ ಫೆಬ್ರವರಿಯಲ್ಲಿ ಜಾರ್ಖಂಡ್ ನ ಗುಮ್ಲಾ, ಲೋಹರ್ದಗಾ ಮತ್ತು ಲತೇಹರ್ ಜಿಲ್ಲೆಗಳಲ್ಲಿ ನಡೆಸಲಾಯಿತು. ಅಂದಿನಿಂದ ಈ ಮೂರೂ ಜಿಲ್ಲೆಗಳು ನಕ್ಸಲ್ ವಾದದಿಂದ ಮುಕ್ತವಾಗಿವೆ.

**ಆಪರೇಷನ್ ಥಂಡರ್‌ಸ್ಟಾರ್ಮ್:** 2022 ರ ಸೆಪ್ಟೆಂಬರ್ ನಲ್ಲಿ ಜಾರ್ಖಂಡ್ ನ ಸಿರಾಯ್ ಕೇಲಾ, ಪಶ್ಚಿಮ ಸಿಂಗ್ ಭೂಮ್ ಮತ್ತು ಖುಂಟಿ ಜಿಲ್ಲೆಗಳಲ್ಲಿ ನಡೆಸಲಾಯಿತು.

**ಆಪರೇಷನ್ ಭೀಮಗಢ್:** 2022ರ ಜೂನ್-ಜುಲೈ ಅವಧಿಯಲ್ಲಿ ಮುಂಗೇರ್ ನಲ್ಲಿ ನಡೆಸಲಾಯಿತು.

**ಆಪರೇಷನ್ ಚಕ್ರಬಂಧ:** 2022 ರಲ್ಲಿ ಬಿಹಾರದ ಗಯಾ ಮತ್ತು ಔರಂಗಾಬಾದ್ ಜಿಲ್ಲೆಗಳಲ್ಲಿ ನಡೆಸಲಾಯಿತು.

**ಆಪರೇಷನ್ ಬ್ಲ್ಯಾಕ್ ಫಾರೆಸ್ಟ್:** ತೆಲಂಗಾಣ ಮತ್ತು ಛತ್ತೀಸ್ ಗಢದ ಗಡಿಯಲ್ಲಿರುವ 50 ಕಿಲೋಮೀಟರ್ ಉದ್ದ ಮತ್ತು 37 ಕಿಲೋಮೀಟರ್ ಅಗಲದ ಬೆಟ್ಟದ ಪ್ರದೇಶದಲ್ಲಿ 2025 ರಲ್ಲಿ ನಡೆಸಲಾಯಿತು.

ಮುಖಪುಟ ಲೇಖನ **12** ವರ್ಷಗಳ ವಿಕಾಸ ಯಾತ್ರೆ

## ವಿಶೇಷ ನ್ಯಾಯಾಲಯಗಳು ಮತ್ತು ತನಿಖಾ ಸಂಸ್ಥೆಗಳ ರಚನೆ

- ಎನ್ ಐ ಎ ಸಂಸ್ಥೆಯನ್ನು ಗಮನಾರ್ಹವಾಗಿ ಬಲಪಡಿಸಲಾಗಿದೆ ಮತ್ತು ಎಡಪಂಥೀಯ ಉಗ್ರವಾದ (LWE) ಪೀಡಿತ ರಾಜ್ಯಗಳಲ್ಲಿ ರಾಜ್ಯ ತನಿಖಾ ಸಂಸ್ಥೆಗಳನ್ನು (SIAs) ಸಹ ಸ್ಥಾಪಿಸಲಾಗಿದೆ.
- ಛತ್ತೀಸ್ ಗಢದಲ್ಲಿ ನಾಲ್ಕು LWE ವಿಶೇಷ ನ್ಯಾಯಾಲಯಗಳನ್ನು ಕಾರ್ಯಗತಗೊಳಿಸಲಾಗಿದ್ದು, ಇತರ ರಾಜ್ಯಗಳಲ್ಲೂ ಸಹ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

## ನಕ್ಸಲ್ ಆರ್ಥಿಕ ಮೂಲಗಳಿಗೆ ಕಡಿವಾಣ

ರಾಷ್ಟ್ರೀಯ ತನಿಖಾ ಸಂಸ್ಥೆಯನ್ನು (NIA) ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ನಕ್ಸಲರ ಆರ್ಥಿಕ ಮೂಲಗಳಿಗೆ ಕಡಿವಾಣ ಹಾಕಲು ಆಕ್ರಮಣಕಾರಿ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಯಿತು. ಇದು ಅವರ ಆರ್ಥಿಕ ಸಂಪನ್ಮೂಲಗಳ ಕುಸಿತಕ್ಕೆ ಕಾರಣವಾಯಿತು.



## ಪೊಲೀಸ್ ಪಡೆಗಳ ಆಧುನೀಕರಣ

- "ಪೊಲೀಸ್ ಪಡೆಗಳ ಆಧುನೀಕರಣ" ಯೋಜನೆಯಡಿ ರಾಜ್ಯ ಪೊಲೀಸ್ ಪಡೆಗಳನ್ನು ಸಜ್ಜುಗೊಳಿಸಲು ಮತ್ತು ಆಧುನೀಕರಿಸಲು ಬೆಂಬಲ ನೀಡಲಾಯಿತು.
- ಈ ಯೋಜನೆಯಡಿ, ಕೇಂದ್ರ ಸರ್ಕಾರವು ಶಸ್ತ್ರಾಸ್ತ್ರಗಳು, ಐಟಿ ಉಪಕರಣಗಳು, ಸಂವಹನ ವ್ಯವಸ್ಥೆಗಳು, ತರಬೇತಿ, ಪೊಲೀಸ್ ಠಾಣೆಗಳ ನಿರ್ಮಾಣ, ವಾಹನ ಸೌಕರ್ಯಗಳು, ಪೊಲೀಸ್ ವಸತಿ ಮತ್ತು ಇತರ ಪೊಲೀಸ್ ಮೂಲಸೌಕರ್ಯಗಳನ್ನು ಪಡೆಯಲು ರಾಜ್ಯ ಸರ್ಕಾರಗಳಿಗೆ ಸಹಾಯ ಮಾಡಿತು.
- ವಿಶೇಷ ಮೂಲಸೌಕರ್ಯ ಯೋಜನೆಯಡಿ (SIS), ಎಡಪಂಥೀಯ ಉಗ್ರವಾದ (LWE) ಪೀಡಿತ ರಾಜ್ಯಗಳ ವಿಶೇಷ ಪಡೆಗಳು, ರಾಜ್ಯ ಗುಪ್ತಚರ ವಿಭಾಗಗಳು (SIBs), ಜಿಲ್ಲಾ ಪೊಲೀಸ್ ಮತ್ತು ಸುಭದ್ರ ಪೊಲೀಸ್ ಠಾಣೆಗಳ (FPS) ನಿರ್ಮಾಣಕ್ಕೆ ಬೆಂಬಲ ನೀಡಲು ₹1,761 ಕೋಟಿ ಮೌಲ್ಯದ ಯೋಜನೆಗಳಿಗೆ ಮಂಜೂರಾತಿ ನೀಡಲಾಯಿತು.







# ವಿಕಾಸ್ ಭಿ, ವಿರಾಸತ್ ಭಿ

## ಒಂದು ಬಲಿಷ್ಠ, ಸಮೃದ್ಧ ಮತ್ತು ಸುರಕ್ಷಿತ ಭಾರತ

*ರಾಷ್ಟ್ರೀಯ ಏಕತೆಯ ವಿಷಯವಿರಲಿ ಅಥವಾ ನಾಗರಿಕ ಕರ್ತವ್ಯದ ಪ್ರಜ್ಞೆಯಾಗಿರಲಿ, ಸಾಂಸ್ಕೃತಿಕ ಪರಂಪರೆಯು ಒಂದು ಪ್ರಮುಖ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ಬಲವಾದ ಬಂಧವೇ ಇಡೀ ದೇಶವನ್ನು ಮಾತ್ರವಲ್ಲದೆ, ಇಡೀ ವಿಶ್ವವನ್ನೇ ಭಾರತದೊಂದಿಗೆ ಜೋಡಿಸುತ್ತದೆ. ಇದೇ ದೃಷ್ಟಿಕೋನದಿಂದ ಪ್ರೇರಿತವಾಗಿ—ಮತ್ತು ತನ್ನ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಪಡುತ್ತಾ—ಭಾರತವು ಕಳೆದ 12 ವರ್ಷಗಳಲ್ಲಿ ಒಂದು ಸುವರ್ಣ ಭವಿಷ್ಯವನ್ನು ಬರೆದಿದೆ; ಅಭಿವೃದ್ಧಿಯೊಂದಿಗೆ ಪರಂಪರೆಯನ್ನು ಸಮನ್ವಯಗೊಳಿಸುವ ಮೂಲಕ, ತನ್ನ ಭವ್ಯ ಹಾಗೂ ವೈಭವಯುತ ಇತಿಹಾಸಕ್ಕೆ ಹೊಸ ಆಯಾಮಗಳನ್ನು ಭಾರತವು ಸೇರಿಸಿದೆ. ಅಲ್ಲದೆ, "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ಎಂಬ ಧ್ಯೇಯವಾಕ್ಯದೊಂದಿಗೆ 'ವಸುಧೈವ ಕುಟುಂಬಕಂ' ಮಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ, ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲಿ ಭಾರತವು ಜಾಗತಿಕ ಮಾರ್ಗದರ್ಶಕನಾಗಿ ಹೊರಹೊಮ್ಮಿದೆ. ಹಲವಾರು ಅಂತಾರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಧ್ವನಿಯೆತ್ತುವ ಮೂಲಕ, ಭಾರತವು ಜಗತ್ತಿಗೆ "ಮಿಷನ್ ಲೈಫ್" ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದ ಸಹಬಾಳ್ವೆಯನ್ನು ಕೇಂದ್ರೀಕರಿಸಿದ ಹೊಸ ಹಾದಿಯನ್ನು ತೋರಿಸಿಕೊಟ್ಟಿದೆ. ಪರಿಸರ ಬದ್ಧತೆಯ ನಾಯಕತ್ವದ ಯುಗಕ್ಕೆ ದಾರಿ ಮಾಡಿಕೊಡುವ ಮೂಲಕ, ಭಾರತವು ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ.*

# ಭವ್ಯ ಇತಿಹಾಸದ ಗುರುತು, ಭವಿಷ್ಯದತ್ತ ಹೆಜ್ಜೆ

*ಭಾರತದ ಪರಂಪರೆಯು ಅದರ ಸಾವಿರಾರು ವರ್ಷಗಳ ಹಳೆಯ ನಾಗರಿಕತೆ, ಸಂಸ್ಕೃತಿ ಮತ್ತು ಸಂಪ್ರದಾಯಗಳ ಜೀವಂತ ಪ್ರತಿಬಿಂಬವಾಗಿದೆ. ವೈವಿಧ್ಯತೆಯಿಂದ ತುಂಬಿರುವ ಈ ದೇಶದಲ್ಲಿ, ಐತಿಹಾಸಿಕ ಸ್ಮಾರಕಗಳು ಮತ್ತು ಇಲ್ಲಿನ ಜೀವನ ಪದ್ಧತಿಗಳು ಅದರ ಅನನ್ಯತೆಯನ್ನು ಶ್ರೀಮಂತಗೊಳಿಸುತ್ತವೆ. ಇಂದಿನ ಯುಗದಲ್ಲಿ, ಪರಂಪರೆ ಎಂಬುದು ಕೇವಲ ಗತಕಾಲದ ಕೊಡುಗೆಯಾಗಿ ಉಳಿದಿಲ್ಲ, ಬದಲಿಗೆ ಅದು ಅಭಿವೃದ್ಧಿ ಮತ್ತು ರಾಷ್ಟ್ರೀಯ ಹೆಮ್ಮೆಯ ಭದ್ರ ಬುನಾದಿಯಾಗಿದೆ. ಸರ್ಕಾರದ ಸಂರಕ್ಷಣೆ, ಪ್ರೋತ್ಸಾಹ ಮತ್ತು ಡಿಜಿಟಲ್ ದಾಖಲೀಕರಣದಂತಹ ಪ್ರಯತ್ನಗಳ ಮೂಲಕ, ಈ ಅಮೂಲ್ಯವಾದ ಪರಂಪರೆಯನ್ನು ಇಂದಿನ ಯುವ ಪೀಳಿಗೆಗೆ ತಲುಪಿಸಲಾಗುತ್ತಿದೆ. ಈ ಉಪಕ್ರಮವು ನಮ್ಮ ಬೇರುಗಳನ್ನು ಬಲಪಡಿಸುವುದು ಮಾತ್ರವಲ್ಲದೆ, ಜಾಗತಿಕ ಸಾಂಸ್ಕೃತಿಕ ಭೂಪಟದಲ್ಲಿ ಭಾರತವನ್ನು ಸಶಕ್ತವಾಗಿ ಪ್ರತಿಷ್ಠಾಪಿಸುತ್ತಿದೆ.*

## ಹೊಸ ಸಂಸತ್ ಭವನ

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇ 28, 2023 ರಂದು ಹೊಸ ಸಂಸತ್ ಭವನವನ್ನು ಉದ್ಘಾಟಿಸಿ, ದೇಶಕ್ಕೆ ಸಮರ್ಪಿಸಿದರು.
- ಪ್ರಧಾನಮಂತ್ರಿ ಮೋದಿ ಅವರೇ ಡಿಸೆಂಬರ್ 10, 2020 ರಂದು ಹೊಸ ಸಂಸತ್ ಭವನದ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.





## ರಾಷ್ಟ್ರೀಯ ಯುದ್ಧ ಸ್ಮಾರಕ

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫೆಬ್ರವರಿ 25, 2019 ರಂದು ರಾಷ್ಟ್ರೀಯ ಯುದ್ಧ ಸ್ಮಾರಕವನ್ನು ದೇಶಕ್ಕೆ ಸಮರ್ಪಿಸಿದರು. ಸ್ವಾತಂತ್ರ್ಯಾನಂತರ ವೀರ ಯೋಧರು ಮಾಡಿದ ಅತ್ಯುನ್ನತ ಬಲಿದಾನಗಳಿಗೆ ಈ ಸ್ಮಾರಕವು ಸಾಕ್ಷಿಯಾಗಿ ನಿಂತಿದೆ.

## ವಸಾಹತುಶಾಹಿ ಮನಸ್ಥಿತಿಯಿಂದ ವಿಮೋಚನೆ



- ಬ್ರಿಟಿಷ್ ಕಿಂಗ್ ಜಾರ್ಜ್ V ರ ಪ್ರತಿಮೆ ಇದ್ದ ಇಂಡಿಯಾ ಗೇಟ್ ಬಳಿ, ಈಗ ರಾಷ್ಟ್ರೀಯ ನಾಯಕ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ಅವರ ಭವ್ಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.
- ಬ್ರಿಟಿಷ್ ಆಳ್ವಿಕೆಯ ಕಾಲದ ದಾಸ್ಯದ ಸಂಕೇತವಾಗಿದ್ದ 'ಕಿಂಗ್ಸ್‌ವೇ' ಅಥವಾ 'ರಾಜಪಥ್' ಈಗ ಇತಿಹಾಸದ ಪುಟ ಸೇರಿದೆ; ಸೆಪ್ಟೆಂಬರ್ 2022 ರಲ್ಲಿ ಇದಕ್ಕೆ 'ಕರ್ತವ್ಯ ಪಥ' ಎಂದು ಮರುನಾಮಕರಣ ಮಾಡಲಾಯಿತು.
- ರೇಸ್ ಕೋರ್ಸ್ ರಸ್ತೆಯನ್ನು 2016 ರಲ್ಲಿ '7 ಲೋಕ ಕಲ್ಯಾಣ ಮಾರ್ಗ' ಎಂದು ಮರುನಾಮಕರಣ ಮಾಡಲಾಯಿತು.
- ಡಾಲ್ ಹೌಸಿ ರಸ್ತೆಯನ್ನು 2017 ರಲ್ಲಿ 'ದಾರಾ ಶಿಕೋಹ್ ರಸ್ತೆ' ಎಂದು ಬದಲಾಯಿಸಲಾಯಿತು.
- ಭಾರತೀಯ ನೌಕಾಪಡೆಯ ಹೊಸ ಧ್ವಜ (Ensign), ಲಾಂಛನ (Crest) ಹಾಗೂ ಪ್ರೆಸಿಡೆಂಟ್ಸ್ ಕಲರ್ಸ್ ನ ಹೊಸ ವಿನ್ಯಾಸಗಳನ್ನು ಡಿಸೆಂಬರ್ 4, 2022ರ ನೌಕಾಪಡೆ ದಿನದಂದು ವಿಶಾಖಪಟ್ಟಣದಲ್ಲಿ ಅನಾವರಣಗೊಳಿಸಲಾಯಿತು.





- ವಸಾಹತುಶಾಹಿ ಮಾನಸಿಕತೆಯಿಂದ ಮುಕ್ತರಾಗುವ ಪ್ರಯತ್ನದ ಭಾಗವಾಗಿ, ನೌಕಾಪಡೆಗೆ ಹೊಸ ಧ್ವಜವನ್ನು (Ensign) ನೀಡಲಾಗಿದ್ದು, ಇದರ ವಿನ್ಯಾಸವು ಛತ್ರಪತಿ ಶಿವಾಜಿ ಮಹಾರಾಜರ ಪರಂಪರೆಯಿಂದ ಪ್ರೇರಿತವಾಗಿದೆ.
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹದ ಅತ್ಯಂತ ದೊಡ್ಡದಾದ, ಹೆಸರಿಡದ 21 ದ್ವೀಪಗಳಿಗೆ ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಇಡಲಾಗಿದೆ.

**1,500** ಕ್ಕೂ ಹೆಚ್ಚು ಹಳೆಯ ಅಪ್ರಸ್ತುತ ಕಾನೂನುಗಳನ್ನು ರದ್ದುಗೊಳಿಸಲಾಗಿದೆ.

## ಪ್ರಧಾನಮಂತ್ರಿ ಸಂಗ್ರಹಾಲಯ

- ಏಪ್ರಿಲ್ 14, 2022ರಂದು ಪ್ರಧಾನಮಂತ್ರಿಯವರು 'ಪ್ರಧಾನಮಂತ್ರಿ ಸಂಗ್ರಹಾಲಯ'ವನ್ನು ಉದ್ಘಾಟಿಸಿದರು. ಈ ವಸ್ತುಸಂಗ್ರಹಾಲಯವು ಭಾರತದ ಎಲ್ಲಾ ಪ್ರಧಾನಮಂತ್ರಿಗಳ ಕೊಡುಗೆಗಳನ್ನು ಗೌರವಿಸುತ್ತದೆ ಮತ್ತು ಪ್ರಜಾಪ್ರಭುತ್ವವು ಸಮಾಜದ ಪ್ರತಿಯೊಂದು ವರ್ಗ ಹಾಗೂ ಸ್ತರದ ನಾಯಕರಿಗೆ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಹೇಗೆ ಅವಕಾಶ ಮಾಡಿಕೊಟ್ಟಿದೆ ಎಂಬುದನ್ನು ಪ್ರದರ್ಶಿಸುತ್ತದೆ.



## ಕಳೆದುಹೋದ ಪರಂಪರೆಯ ಪುನಃಸ್ಥಾಪನೆ



- 2014ರಿಂದೀಚೆಗೆ, ಕಳುವಾಗಿದ್ದ 653 ಕ್ಕೂ ಹೆಚ್ಚು ಪ್ರಾಚೀನ ಕಲಾಕೃತಿಗಳನ್ನು ದೇಶಕ್ಕೆ ಮರಳಿ ತರಲಾಗಿದೆ.
- 2013 ಕ್ಕಿಂತ ಮುಂಚೆ, ವಿದೇಶಗಳಿಂದ ಭಾರತಕ್ಕೆ ವಾಪಸ್ ತರಲಾಗಿದ್ದ ಕಳುವಾದ ಪ್ರಾಚೀನ ಕಲಾಕೃತಿಗಳ ಸಂಖ್ಯೆ ಕೇವಲ 13 ಆಗಿತ್ತು.
- 2016 ರಿಂದೀಚೆಗೆ, ಅಕ್ರಮ ಸಾಗಣೆಯಾಗಿದ್ದ ಅಥವಾ ಕಳುವಾಗಿದ್ದ ಹಲವಾರು ಪ್ರಾಚೀನ ಕಲಾಕೃತಿಗಳನ್ನು ಮರಳಿ ಕಳುಹಿಸಲು ಅಮೆರಿಕ ಸರ್ಕಾರವು ನೆರವು ನೀಡಿದೆ.

**2016 ರಿಂದೀಚೆಗೆ ಅಮೆರಿಕದಿಂದ ಭಾರತಕ್ಕೆ ಮರಳಿ ತರಲಾದ ಸಾಂಸ್ಕೃತಿಕ ಕಲಾಕೃತಿಗಳ ಒಟ್ಟು ಸಂಖ್ಯೆ 578 ಕ್ಕೆ ತಲುಪಿದೆ. ಇದು ಯಾವುದೇ ಒಂದು ದೇಶವು ಭಾರತಕ್ಕೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಕೃತಿಕ ಕಲಾಕೃತಿಗಳನ್ನು ಮರಳಿ ನೀಡಿದ ದಾಖಲೆಯಾಗಿದೆ.**

## ಯುನೆಸ್ಕೋ: ಪರಂಪರೆಯ ಮೈಲಿಗಲ್ಲುಗಳು

- ಕಳೆದ ದಶಕದಲ್ಲಿ, ಭಾರತವು ವಿಶ್ವ ಪರಂಪರೆಯ ಪಟ್ಟಿಯಲ್ಲಿ ತನ್ನ ಅಸ್ತಿತ್ವವನ್ನು ಗಣನೀಯವಾಗಿ ವಿಸ್ತರಿಸಿದೆ. ಭಾರತವು ಈಗ ವಿಶ್ವ ಪರಂಪರೆಯ ಪಟ್ಟಿಯಲ್ಲಿ 44 ತಾಣಗಳನ್ನು ಮತ್ತು ಯುನೆಸ್ಕೋದ ತಾತ್ಕಾಲಿಕ ಪಟ್ಟಿಯಲ್ಲಿ 69 ತಾಣಗಳನ್ನು ಹೊಂದಿದೆ. ಈ ತಾಣಗಳನ್ನು ಕೇವಲ ಇತಿಹಾಸದ ಸಂಕೇತಗಳಾಗಿ ಮಾತ್ರವಲ್ಲದೆ, ಮುಂದಿನ ಪೀಳಿಗೆಯ ಕಲಿಕೆಯ ಕೇಂದ್ರಗಳಾಗಿಯೂ ಸಂರಕ್ಷಿಸಲಾಗುತ್ತಿದೆ.



## ಡಿಜಿಟಲ್ ದಾಖಲೆಗಳ ಸಂಗ್ರಹ

- ಐತಿಹಾಸಿಕವಾಗಿ ಮಹತ್ವದ ದಾಖಲೆಗಳನ್ನು ಸಂರಕ್ಷಿಸಲು ಹಾಗೂ ಸಂಶೋಧಕರು ಮತ್ತು ಸಾರ್ವಜನಿಕರಿಗೆ ಈ ಸಂಪನ್ಮೂಲಗಳ ಸುಲಭ ಲಭ್ಯತೆಯನ್ನು ಉತ್ತೇಜಿಸಲು, ಭಾರತೀಯ ರಾಷ್ಟ್ರೀಯ ದಾಖಲೆಗಳ ಇಲಾಖೆಯು (NAI) ಹಂತ-ಹಂತವಾಗಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ.

### ಅಭಿಲೇಖ್ ಪಟಾಲ್ ಪೋರ್ಟಲ್ ನಲ್ಲಿ ಪ್ರಸ್ತುತ ಲಭ್ಯವಿರುವ ವಿಷಯ.

**18.98** ಕೋಟಿ ಡಿಜಿಟಲೀಕರಣಗೊಂಡ ಪುಟಗಳು



**40.09** ಲಕ್ಷ ಡಿಜಿಟಲೀಕರಣಗೊಂಡ ಕಡತಗಳು

**74.03** ಲಕ್ಷ ಉಲ್ಲೇಖಿತ ಮಾಧ್ಯಮ ದಾಖಲೆಗಳು

## ಸಕಾರಾತ್ಮಕ ಪರಂಪರೆಯ ಸಂರಕ್ಷಣೆ

- ಮುನ್ನಡೆಯುತ್ತಿರುವ ಯಶಸ್ವಿ ರಾಷ್ಟ್ರಗಳು ತಮ್ಮ ಸಕಾರಾತ್ಮಕ ಪರಂಪರೆಯನ್ನು ಎಂದಿಗೂ ಕೈಬಿಡುವುದಿಲ್ಲ; ಬದಲಿಗೆ, ಅದನ್ನು ಅತ್ಯಂತ ಜತನದಿಂದ ಸಂರಕ್ಷಿಸುತ್ತವೆ. ಇಂದು ಭಾರತವು 'ವಿಕಾಸ್ ಔರ್ ವಿರಾಸತ್' ಎಂಬ ಇದೇ ದೃಷ್ಟಿಕೋನದೊಂದಿಗೆ ಮುನ್ನಡೆಯುತ್ತಿದೆ.
- ಹೊಸ ಕರ್ತವ್ಯ ಭವನದ ನಂತರ, ನಾರ್ತ್ ಮತ್ತು ಸೌತ್ ಬ್ಲಾಕ್ ಗಳು ಕೂಡ ಭಾರತದ ಭವ್ಯ ಪರಂಪರೆಯ ಭಾಗವಾಗಲಿವೆ. ನಾರ್ತ್ ಮತ್ತು ಸೌತ್ ಬ್ಲಾಕ್‌ಗಳನ್ನು ದೇಶದ ಜನರಿಗಾಗಿ "ಯುಗ ಯುಗೀನ್ ಭಾರತ" ಎಂಬ ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗುತ್ತಿದೆ. ಪ್ರತಿಯೊಬ್ಬ ನಾಗರಿಕನೂ ಇಲ್ಲಿಗೆ ಭೇಟಿ ನೀಡಿ ನಮ್ಮ ದೇಶದ ಐತಿಹಾಸಿಕ ಪಯಣವನ್ನು ಕಣ್ಣಾರೆ ವೀಕ್ಷಿಸಬಹುದಾಗಿದೆ.

## 'ಪಂಚ ಪ್ರಣ್' (ಐದು ಪ್ರತಿಜ್ಞೆಗಳು)

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೆಂಪುಕೋಟೆಯಿಂದ ದೇಶದ ಎಲ್ಲಾ ನಾಗರಿಕರಿಗೆ 'ಪಂಚ ಪ್ರಣ್'ಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು—ಅವುಗಳೆಂದರೆ, ವಿಕಸಿತ ಭಾರತದ ನಿರ್ಮಾಣದ ಗುರಿ; ವಸಾಹತುಶಾಹಿ ಮನಸ್ಥಿತಿಯಿಂದ ಮುಕ್ತಿ; ನಮ್ಮ ಸಂಪ್ರದಾಯಗಳ ಬಗ್ಗೆ ಹೆಮ್ಮೆ ಪಡುವುದು; ದೇಶದ ಏಕತೆ ಮತ್ತು ಸಮಗ್ರತೆಗಾಗಿ ಸಂಪೂರ್ಣ ಜೀವನವನ್ನು ಮುಡಿಪಾಗಿಡುವುದು; ಹಾಗೂ ಪ್ರತಿಯೊಬ್ಬ ನಾಗರಿಕನ ಮನಸ್ಸಿನಲ್ಲಿ ಕರ್ತವ್ಯ ಪ್ರಜ್ಞೆಯನ್ನು ಮೂಡಿಸುವುದು.

## ಸ್ಮಾರಕಗಳ ಹೊಸ ಯುಗ: ಪರಂಪರೆಯಿಂದ ಹೊಸ ಪ್ರೇರಣೆ

- ಪ್ರಧಾನಮಂತ್ರಿ ಸಂಗ್ರಹಾಲಯ, ರಾಷ್ಟ್ರೀಯ ಯುದ್ಧ ಸ್ಮಾರಕ, ರಾಷ್ಟ್ರೀಯ ಪೊಲೀಸ್ ಸ್ಮಾರಕ, ಜಲಿಯನ್ ವಾಲಾ ಬಾಗ್ ಸ್ಮಾರಕ, ಬಿಪ್ಲೋಬಿ ಭಾರತ್ ಗ್ಯಾಲರಿಗಳ ನಿರ್ಮಾಣ ಹಾಗೂ ದೇಶಾದ್ಯಂತ 11 ಬುಡಕಟ್ಟು ಸಂಸ್ಕೃತಿ ವಸ್ತುಸಂಗ್ರಹಾಲಯಗಳ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ.

# ಜಾಗತಿಕ ವೇದಿಕೆಯಲ್ಲಿ ಸಾಂಸ್ಕೃತಿಕ ಅನನ್ಯತೆ

*ಒಂದು ದೇಶವು ಆರ್ಥಿಕ ಪ್ರಗತಿಯ ಜೊತೆಗೆ ತನ್ನ ಸಾಂಸ್ಕೃತಿಕ ಪರಂಪರೆಗೂ ಮನ್ನಣೆ ಪಡೆದಾಗ ಮಾತ್ರ ಜಾಗತಿಕ ವೇದಿಕೆಯಲ್ಲಿ ನಿಜವಾದ ಗೌರವ ಮತ್ತು ಗುರುತನ್ನು ಗಳಿಸಲು ಸಾಧ್ಯವಾಗುತ್ತದೆ. ಇದೇ ಕಾರಣಕ್ಕಾಗಿ, ಕಳೆದ 12 ವರ್ಷಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಇವು ದೇಶದ ಜನರಲ್ಲಿ ತಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಆಳವಾದ ಹೆಮ್ಮೆಯ ಭಾವನೆಯನ್ನು ಮೂಡಿಸಿವೆ...*




## ರಾಮ ಮಂದಿರ

- ಜನವರಿ 22, 2024 ರಂದು ಅಯೋಧ್ಯೆಯ ಭವ್ಯ ಶ್ರೀ ರಾಮ ಮಂದಿರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಾಲರಾಮನ (ರಾಮ್ ಲಲ್ಲಾ) ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ನೆರವೇರಿಸಿದರು. ಇದು 500 ವರ್ಷಗಳ ಸುದೀರ್ಘ ಕಾಯುವಿಕೆಗೆ ಸಂದ ಐತಿಹಾಸಿಕ ಯಶಸ್ಸಾಗಿದೆ.
- ಈ ಭವ್ಯ ಶ್ರೀ ರಾಮಜನ್ಮಭೂಮಿ ಮಂದಿರವನ್ನು ಸಾಂಪ್ರದಾಯಿಕ 'ನಾಗರ' ಶೈಲಿಯ ವಾಸ್ತುಶಿಲ್ಪದಲ್ಲಿ ನಿರ್ಮಿಸಲಾಗಿದೆ.
- ಮಂದಿರದ ಉದ್ದ (ಪೂರ್ವ-ಪಶ್ಚಿಮ) 380 ಅಡಿ, ಅಗಲ 250 ಅಡಿ ಮತ್ತು ಎತ್ತರ 161 ಅಡಿ ಆಗಿದೆ.
- ಮಂದಿರದ ಸ್ತಂಭಗಳು ಮತ್ತು ಗೋಡೆಗಳ ಮೇಲೆ ವಿವಿಧ ಹಿಂದೂ ದೇವತೆಗಳ ಆಕರ್ಷಕ ಹಾಗೂ ಅತ್ಯಂತ ಸೂಕ್ಷ್ಮವಾದ ಕೆತ್ತನೆಗಳನ್ನು ಮಾಡಲಾಗಿದೆ.
- ನೆಲಮಹಡಿಯ ಮುಖ್ಯ ಗರ್ಭಗೃಹದಲ್ಲಿ ಬಾಲರೂಪದ ಶ್ರೀರಾಮನ (ಶ್ರೀ ರಾಮ್ ಲಲ್ಲಾ) ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.
- ನವೆಂಬರ್ 25, 2025 ರಂದು ಶ್ರೀ ರಾಮ ಮಂದಿರದ ಗೋಪುರದ ಮೇಲೆ ಭಗವಾಧ್ವಜವನ್ನು (ಕೇಸರಿ ಧ್ವಜ) ಹಾರಿಸುವ ಮೂಲಕ ಮಂದಿರ ಸಂಕೀರ್ಣದ ಸಂಪೂರ್ಣ ನಿರ್ಮಾಣ ಕಾರ್ಯವು ಪೂರ್ಣಗೊಂಡಿತು.
- ನವೆಂಬರ್ 9, 2019 ರಂದು ಸುಪ್ರೀಂ ಕೋರ್ಟ್, ಸರ್ವಾನುಮತದ ಐತಿಹಾಸಿಕ ತೀರ್ಪನ್ನು ನೀಡುವ ಮೂಲಕ ವಿವಾದಿತ 2.77 ಎಕರೆ ಸಂಪೂರ್ಣ ಭೂಮಿಯನ್ನು ಶ್ರೀ ರಾಮ ಮಂದಿರದ ನಿರ್ಮಾಣಕ್ಕಾಗಿ ಹಂಚಿಕೆ ಮಾಡಿತು.

## ಭೂಮಿ ಪೂಜೆ ಮತ್ತು ಶಂಕುಸ್ಥಾಪನೆ

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಗಸ್ಟ್ 5, 2020 ರಂದು ಶ್ರೀ ರಾಮ ಮಂದಿರ ನಿರ್ಮಾಣಕ್ಕಾಗಿ ಭೂಮಿ ಪೂಜೆ ಮತ್ತು ಶಂಕುಸ್ಥಾಪನೆಯನ್ನು ನೆರವೇರಿಸಿದ್ದರು.
- ಫೆಬ್ರವರಿ 5, 2020 ರಂದು ಭಾರತ ಸರ್ಕಾರವು ಈ ಯೋಜನೆಗೆ ತನ್ನ ಅಧಿಕೃತ ಅನುಮೋದನೆಯನ್ನು ನೀಡಿತ್ತು.

> **“ ಈ ಭವ್ಯ ರಾಮ ಮಂದಿರವು ಭಾರತದ ಉನ್ನತಿಗೆ, ಭಾರತದ ಉದಯಕ್ಕೆ ಸಾಕ್ಷಿಯಾಗಲಿದೆ; ಈ ಭವ್ಯ ರಾಮ ಮಂದಿರವು ಸಮೃದ್ಧ ಭಾರತ ಮತ್ತು ವಿಕಸಿತ ಭಾರತಕ್ಕೆ ಸಾಕ್ಷಿಯಾಗಲಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*





## ಶ್ರೀ ಕಾಶಿ ವಿಶ್ವನಾಥ ಕಾರಿಡಾರ್

₹355 ಕೋಟಿ ವೆಚ್ಚದ ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆಯು **5.5** ಎಕರೆ ಪ್ರದೇಶವನ್ನು ಒಳಗೊಂಡಿದ್ದು, ಇದನ್ನು ಡಿಸೆಂಬರ್ 13, 2021 ರಂದು ಉದ್ಘಾಟಿಸಲಾಯಿತು.

- ಈ ಕಾರಿಡಾರ್ ನಾಲ್ಕು ಪಥಗಳ ಮಾರ್ಗದ ಮೂಲಕ ಕಾಶಿ ವಿಶ್ವನಾಥ ದೇವಾಲಯವನ್ನು ನೇರವಾಗಿ ಗಂಗಾ ನದಿಗೆ ಜೋಡಿಸುತ್ತದೆ. ಇದು ದೇವಾಲಯಕ್ಕೆ ಭೇಟಿ ನೀಡುವ ಭಕ್ತಾದಿಗಳಿಗೆ ಸುಲಭ ಮತ್ತು ಸುಗಮ ಪ್ರವೇಶವನ್ನು ಕಲ್ಪಿಸುತ್ತದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏಪ್ರಿಲ್ 11ರಂದು ಕಾಶಿಯಲ್ಲಿ **₹3,880** ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

- 2014 ರಿಂದ ಮಾರ್ಚ್ 2025 ರವರೆಗೆ, ಕಾಶಿಯಲ್ಲಿ ಒಟ್ಟು ₹48,459 ಕೋಟಿ ವೆಚ್ಚದಲ್ಲಿ 580 ಅಭಿವೃದ್ಧಿ ಯೋಜನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.



> **ಇಂದು ಕಾಶಿ ಕೇವಲ ಗತಕಾಲದ ಪ್ರಾಚೀನತೆಯ ಸಂಕೇತವಾಗಿ ಮಾತ್ರವಲ್ಲದೆ, ಪ್ರಗತಿಯ ದಾರಿದೀಪವಾಗಿಯೂ ಮುನ್ನಡೆಯುತ್ತಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*



## ಮಹಾಕಾಲ್ ಲೋಕ್ ಯೋಜನೆ

- ಅಕ್ಟೋಬರ್ 11, 2022 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ 'ಮಹಾಕಾಲ್ ಲೋಕ್' ಯೋಜನೆಯ ಮೊದಲ ಹಂತವನ್ನು ದೇಶಕ್ಕೆ ಸಮರ್ಪಿಸಿದರು.
- ಈ ಇಡೀ ಯೋಜನೆಯ ಒಟ್ಟು ವೆಚ್ಚ ₹850 ಕೋಟಿ ಆಗಿದೆ.
- 'ಮಹಾಕಾಲ್ ಪಥ'ವು ಶಿವನ ಆನಂದ ತಾಂಡವ ರೂಪವನ್ನು ಬಿಂಬಿಸುವ 108 ಸ್ತಂಭಗಳನ್ನು ಹೊಂದಿದೆ.
- ಮಹಾಕಾಲ್ ಪಥದ ಉದ್ದಕ್ಕೂ ಶಿವನ ಜೀವನ ಚರಿತ್ರೆಯನ್ನು ಸಾರುವ ಹಲವಾರು ಧಾರ್ಮಿಕ ಶಿಲ್ಪಕಲೆಗಳನ್ನು ಸ್ಥಾಪಿಸಲಾಗಿದೆ.
- ಈ ಪಥದ ಗೋಡೆಗಳ ಮೇಲಿರುವ ಭಿತ್ತಿಚಿತ್ರಗಳು ಶಿವಪುರಾಣದಲ್ಲಿನ ಸೃಷ್ಟಿಯ ಕಥೆಗಳು, ಗಣೇಶನ ಜನನ, ಸತಿ ಮತ್ತು ದಕ್ಷನ ಕಥೆ ಸೇರಿದಂತೆ ಮುಂತಾದ ಪೌರಾಣಿಕ ಪ್ರಸಂಗಗಳನ್ನು ಸುಂದರವಾಗಿ ಚಿತ್ರಿಸುತ್ತವೆ.
- ಕೃತಕ ಬುದ್ಧಿಮತ್ತೆ ಮತ್ತು ಕಣ್ಗಾವಲು ಕ್ಯಾಮೆರಾಗಳನ್ನು ಒಳಗೊಂಡ ಅತ್ಯಾಧುನಿಕ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಮೂಲಕ ಇಡೀ ಸಂಕೀರ್ಣದ ಮೇಲೆ ನಿಗಾ ಇಡಲಾಗುತ್ತದೆ.




## ಮಾ ಕಾಮಾಕ್ಯ ದೇವಾಲಯ, ಅಸ್ಸಾಂ

ಮಾ ಕಾಮಾಕ್ಯ ದೇವಾಲಯದ ಪುನರಾಭಿವೃದ್ಧಿ ಯೋಜನೆಯು ಮೂಲಸೌಕರ್ಯಗಳ ಮೇಲ್ದರ್ಜೀಕರಣ ಮತ್ತು ಭಕ್ತಾದಿಗಳ ಸೌಲಭ್ಯಗಳನ್ನು ಹೆಚ್ಚಿಸುವುದರ ಮೇಲೆ ವಿಶೇಷ ಗಮನ ಹರಿಸಿದೆ. ಈ ಮೂಲಕ ಭಕ್ತರಿಗೆ ಸುಧಾರಿತ ಸೌಕರ್ಯಗಳು ಹಾಗೂ ಆರಾಮದಾಯಕ ಮತ್ತು ಸುಲಭ ಪ್ರವೇಶದ ಆಧ್ಯಾತ್ಮಿಕ ಅನುಭವವನ್ನು ಖಚಿತಪಡಿಸಲಾಗಿದೆ.



## ಕೇದಾರನಾಥ ದೇವಾಲಯ, ಉತ್ತರಾಖಂಡ


ಕೇದಾರನಾಥದ ಅಭಿವೃದ್ಧಿ ಯೋಜನೆಯು ಆದಿ ಶಂಕರಾಚಾರ್ಯರ ಭವ್ಯ ಪ್ರತಿಮೆಯ ಸ್ಥಾಪನೆಯನ್ನು ಒಳಗೊಂಡಿದೆ. ಇದು ನಮ್ಮ ಸಾಂಸ್ಕೃತಿಕ ಮತ್ತು ನಾಗರಿಕತೆಯ ಏಕತೆಯನ್ನು ಬಿಂಬಿಸುವುದರ ಜೊತೆಗೆ, ಈ ಪವಿತ್ರ ಯಾತ್ರಾ ಸ್ಥಳದ ಆಧ್ಯಾತ್ಮಿಕ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ.



## ಜೂನಾ ಸೋಮನಾಥ ದೇವಾಲಯದ ಪುನರ್ನಿರ್ಮಾಣ, ಗುಜರಾತ್

ಸೋಮನಾಥ ದೇವಾಲಯದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಮತ್ತು ಪಾರ್ವತಿ ದೇವಾಲಯದ ನಿರ್ಮಾಣ ಸೇರಿದಂತೆ ಪ್ರಮುಖ ಯಾತ್ರಾ ಸ್ಥಳಗಳ ಜೀರ್ಣೋದ್ಧಾರದ ಮೂಲಕ ಅಹಲ್ಯಾಬಾಯಿ ಹೋಳ್ಕರ್ ಅವರ ಭವ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

- ಅರಬ್ಬಿ ಸಮುದ್ರದ ಹಿನ್ನೆಲೆಯಲ್ಲಿ ಕಂಗೊಳಿಸುವ ಸೋಮನಾಥ ದೇವಾಲಯದ ಭವ್ಯ ನೋಟವನ್ನು ಭಕ್ತಾದಿಗಳು ಕಣ್ತುಂಬಿಕೊಳ್ಳಲು ಅನುಕೂಲವಾಗುವಂತೆ ಸುಂದರವಾದ ಕರಾವಳಿ ವಿಹಾರ ಪಥವನ್ನು (Promenade) ಅಭಿವೃದ್ಧಿಪಡಿಸಲಾಗಿದೆ.



## ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಪ್ರತ್ಯೇಕ ವಿಭಾಗದ ಸ್ಥಾಪನೆ

ಪ್ರಧಾನಮಂತ್ರಿ ಮೋದಿ ಅವರ ನೇತೃತ್ವದಲ್ಲಿ, ಭಾರತದ ಸಾಂಸ್ಕೃತಿಕ ಪರಂಪರೆಯ ಮರುಸ್ಥಾಪನೆ, ಜೀರ್ಣೋದ್ಧಾರ ಮತ್ತು ಸಂರಕ್ಷಣೆಗಾಗಿಯೇ ವಿಶೇಷವಾಗಿ ಕಾರ್ಯನಿರ್ವಹಿಸಲು ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಒಂದು ಪ್ರತ್ಯೇಕ ಹಾಗೂ ಸಮರ್ಪಿತ ವಿಭಾಗವನ್ನು ಸ್ಥಾಪಿಸಲಾಗಿದೆ.

# ಪರಿಸರ ಬದ್ಧತೆಯಲ್ಲಿ ನಾಯಕತ್ವದ ಹೊಸ ಯುಗ

*"ವಸುಧೈವ ಕುಟುಂಬಕಂ"—"ಇಡೀ ಜಗತ್ತೇ ಒಂದು ಕುಟುಂಬ" - ಎಂಬ ಮಂತ್ರವನ್ನು ಅಪ್ಪಿಕೊಂಡು, "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ಎಂಬ ಪರಿಕಲ್ಪನೆಯಡಿ ಭಾರತವು ಪರಿಸರ ಸಂರಕ್ಷಣೆಯ ರಂಗದಲ್ಲಿ ಜಾಗತಿಕ ಮಾರ್ಗದರ್ಶಿಯಾಗಿ ಹೊರಹೊಮ್ಮಿದೆ. ಹಲವಾರು ಜಾಗತಿಕ ಸಂಸ್ಥೆಗಳ ಪರವಾಗಿ ಪ್ರಬಲ ಧ್ವನಿಯಾಗಿ ನಿಂತಿರುವ ಭಾರತವು, ಜಗತ್ತಿಗೆ ಒಂದು ಹೊಸ ಮಾರ್ಗವನ್ನು ತೋರಿಸಿಕೊಟ್ಟಿದೆ—ಅದುವೇ 'ಮಿಷನ್ ಲೈಫ್' ಮತ್ತು ಪ್ರಕೃತಿಯೊಂದಿಗಿನ ಸಾಮರಸ್ಯದ ಜೀವನ. ಕಳೆದ 12 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸುವ ಒಂದು ಹೊಸ ಯುಗಕ್ಕೆ ನಾಂದಿ ಹಾಡಿದೆ.*

## ಭಾರತ: ಜಗತ್ತಿಗೆ ನಾಯಕತ್ವ


- ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಚೌಕಟ್ಟು ಸಮಾವೇಶ (UNFCCC) ಮತ್ತು ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ ಭಾರತವು ತನ್ನ ಹವಾಮಾನ ಗುರಿಗಳನ್ನು ನಿರಂತರವಾಗಿ ಮುನ್ನಡೆಸಿಕೊಂಡು ಬಂದಿದೆ. 2015 ರಲ್ಲಿ ನಿಗದಿಪಡಿಸಲಾದ ಆರಂಭಿಕ ಎನ್‌ಡಿಸಿ ಗುರಿಗಳಿಂದ ಹಿಡಿದು, ಪ್ರಸ್ತುತ 2031-2035ರ ಅವಧಿಗೆ ನಿಗದಿಪಡಿಸಲಾದ ಹೊಸ ಗುರಿಗಳವರೆಗೆ ಭಾರತವು ತನ್ನ ಬದ್ಧತೆಗಳನ್ನು ಪೂರೈಸುವಲ್ಲಿ ಅಚಲವಾಗಿ ನಿಂತಿದೆ. ಹವಾಮಾನ ಬದಲಾವಣೆಯ ಜಾಗತಿಕ ಮಾತುಕತೆಗಳಲ್ಲಿ ಭಾರತವು ಇಂದು ಅತ್ಯಂತ ಪ್ರಬಲ ಮತ್ತು ಪ್ರಮುಖ ಧ್ವನಿಯಾಗಿ ಹೊರಹೊಮ್ಮಿದೆ.
- 2015 ರಲ್ಲಿ, ಭಾರತವು UNFCCC ಅಡಿಯಲ್ಲಿ ತನ್ನ ಮೊದಲ 'ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ'ಯನ್ನು (NDC) ಸಲ್ಲಿಸಿತು, ಇದರಲ್ಲಿ 2030ರ ವೇಳೆಗೆ ಸಾಧಿಸಬೇಕಾದ ಗುರಿಗಳನ್ನು ರೂಪಿಸಲಾಗಿತ್ತು.
- ಕಾಪ್21 (COP21) ಶೃಂಗಸಭೆಯಿಂದಲೂ, ಪ್ರಧಾನಮಂತ್ರಿ ಮೋದಿ ಅವರ "ಹವಾಮಾನ ನ್ಯಾಯ" (Climate Justice) ತತ್ವವು ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಸಮಾನತೆ ಮತ್ತು ನ್ಯಾಯದ ಕಾಳಜಿಗಳನ್ನು ನಿರ್ಲಕ್ಷಿಸದಂತೆ ನೋಡಿಕೊಂಡಿದೆ.
- ಗ್ಲಾಸ್ಗೋದಲ್ಲಿ (2021) ನಡೆದ ಕಾಪ್26 (COP26) ಶೃಂಗಸಭೆಯಲ್ಲಿ, ಪ್ರಧಾನಮಂತ್ರಿ



ಮೋದಿ ಅವರು "ಪರಿಸರಕ್ಕಾಗಿ ಜೀವನಶೈಲಿ"—ಅಥವಾ ಲೈಫ್ (Mission LiFE) ಪರಿಕಲ್ಪನೆಯನ್ನು ಪರಿಚಯಿಸಿದರು. ಈ ಉಪಕ್ರಮವು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಪ್ರತಿಯೊಬ್ಬರು ತಮ್ಮ ದೈನಂದಿನ ಜೀವನದಲ್ಲಿ ಸಣ್ಣ ಮತ್ತು ಪರಿಸರಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ವ್ಯಕ್ತಿಗಳನ್ನು ಮತ್ತು ಸಮುದಾಯಗಳನ್ನು ಪ್ರೇರೇಪಿಸುವ ಗುರಿಯನ್ನು ಹೊಂದಿದೆ.

- ಪ್ರಧಾನಮಂತ್ರಿ ಮೋದಿ ಅವರ "ಪಂಚಾಮೃತ" ಉಪಕ್ರಮವು ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಲ್ಲಿ ಭಾರತವನ್ನು ಜಾಗತಿಕ ಮಾದರಿಯನ್ನಾಗಿ ಮಾಡಿದೆ.
- ಬ್ರಿಕ್ಸ್ 2026: ಸುಸ್ಥಿರ ಜೀವನಶೈಲಿ, ಅರಣ್ಯೀಕರಣ, ಕಾಡ್ಗಿಚ್ಚು ನಿರ್ವಹಣೆ, ವಿಪತ್ತು ಸ್ಥಿತಿಸ್ಥಾಪಕತ್ವ, ವೃತ್ತಾಕಾರದ ಆರ್ಥಿಕತೆ (Circular Economy) ಮತ್ತು ಹವಾಮಾನ ಹೊಂದಾಣಿಕೆಯಂತಹ ಪ್ರಮುಖ ವಿಷಯಗಳ ಕುರಿತು ಭಾರತವು ಸದಸ್ಯ ರಾಷ್ಟ್ರಗಳೊಂದಿಗೆ ಚರ್ಚೆಗಳನ್ನು ಪ್ರಾರಂಭಿಸಿದೆ.
- ಯುಎನ್‌ಇಎ-7 ರಲ್ಲಿ ಕಾಡ್ಗಿಚ್ಚು ಕುರಿತ ನಿರ್ಣಯ: ಡಿಸೆಂಬರ್ 2025 ರಲ್ಲಿ ಕೀನ್ಯಾದ ನೈರೋಬಿಯಲ್ಲಿ ನಡೆದ ವಿಶ್ವಸಂಸ್ಥೆಯ ಪರಿಸರ ಸಭೆಯ 7 ನೇ ಅಧಿವೇಶನದಲ್ಲಿ (UNEA-7), ಭಾರತವು ಮಂಡಿಸಿದ "ಕಾಡ್ಗಿಚ್ಚು ನಿರ್ವಹಣೆಗೆ ಜಾಗತಿಕ ಸ್ಪಂದನೆಯನ್ನು ಬಲಪಡಿಸುವುದು" ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

### ನವೀಕರಿಸಬಹುದಾದ ಇಂಧನ ಸಾಮರ್ಥ್ಯವು ಸುಮಾರು ನಾಲ್ಕು ಪಟ್ಟು ಹೆಚ್ಚಳ




### ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತಕ್ಕೆ ಜಾಗತಿಕ ನಾಯಕತ್ವ

- ಸ್ಥಾಪಿತ ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಭಾರತವು ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ.
- ಸ್ಥಾಪಿತ ಪವನ ಶಕ್ತಿ ಸಾಮರ್ಥ್ಯದಲ್ಲಿ ಭಾರತವು ವಿಶ್ವದಲ್ಲೇ ನಾಲ್ಕನೇ ಅತಿ ದೊಡ್ಡ ದೇಶವಾಗಿದೆ.
- ಸ್ಥಾಪಿತ ಸೌರ ಇಂಧನ ಸಾಮರ್ಥ್ಯದಲ್ಲಿ ಭಾರತವು ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ.
- ಭಾರತವು ಮಾರ್ಚ್ 2026ರ ವೇಳೆಗೆ ಪಳೆಯುಳಿಕೆ ರಹಿತ ಇಂಧನ ಮೂಲಗಳಿಂದ 283.47 ಗಿ.ವ್ಯಾ. ಸ್ಥಾಪಿತ ಇಂಧನ ಸಾಮರ್ಥ್ಯವನ್ನು ಸಾಧಿಸಿದೆ. ಇದು ದೇಶದ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯವಾದ 532.74 ಗಿ.ವ್ಯಾ. ನ ಶೇಕಡಾ 53.21% ರಷ್ಟಾಗಿದೆ.



## ಸಮಯಕ್ಕಿಂತ ಮುಂಚಿತವಾಗಿಯೇ ಸಾಧಿಸಿದ ಪ್ರಮುಖ ಗುರಿಗಳು

- ಭಾರತವು ತನ್ನ ಜಿಡಿಪಿಯ ಹೊರಸೂಸುವಿಕೆಯ ತೀವ್ರತೆಯನ್ನು ಕಡಿಮೆ ಮಾಡುವ ಗುರಿಯನ್ನು ನಿಗದಿತ ಅವಧಿಗಿಂತ 11 ವರ್ಷಗಳ ಮುಂಚಿತವಾಗಿ, ಅಂದರೆ 2019 ರಲ್ಲೇ ಸಾಧಿಸಿದೆ.
- ಪಳೆಯುಳಿಕೆ ರಹಿತ ಇಂಧನ ಆಧಾರಿತ ಇಂಧನ ಮೂಲಗಳ ಪಾಲನ್ನು ಹೆಚ್ಚಿಸಲು ಸಂಬಂಧಿಸಿದಂತೆ, ಭಾರತವು ತನ್ನ 2015 ರ 'ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ' ಗುರಿಯನ್ನು ನಿಗದಿತ ಗಡುವುಗಿಂತ ಒಂಬತ್ತು ವರ್ಷ ಮುಂಚಿತವಾಗಿಯೇ ಪೂರೈಸಿದೆ.
- ರಾಷ್ಟ್ರೀಯ ಜೈವಿಕ ಇಂಧನ ನೀತಿಯಡಿ, ಪೆಟ್ರೋಲ್ ನಲ್ಲಿ ಎಥನಾಲ್ ಮಿಶ್ರಣ ಮಾಡುವ ಗುರಿಯನ್ನು ಸಹ ನಿಗದಿತ ಸಮಯಕ್ಕಿಂತ ಐದು ತಿಂಗಳು ಮುಂಚಿತವಾಗಿ ಸಾಧಿಸಲಾಗಿದೆ.
- ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ 2030 ರ ವೇಳೆಗೆ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯದ 50% ರಷ್ಟನ್ನು ಪಳೆಯುಳಿಕೆ ರಹಿತ ಇಂಧನ ಮೂಲಗಳಿಂದ ಸಾಧಿಸುವ ಗುರಿಯನ್ನು ಜೂನ್ 2025 ರಲ್ಲಿಯೇ ತಲುಪಲಾಗಿದೆ. ಇದು ನಿಗದಿತ ಸಮಯಕ್ಕಿಂತ ಐದು ವರ್ಷ ಮುಂಚಿತವಾಗಿ ಸಾಧಿಸಿದ ಯಶಸ್ಸಾಗಿದೆ.
- 2005 ಮತ್ತು 2020ರ ನಡುವೆ, ಭಾರತವು ತನ್ನ ಹೊರಸೂಸುವಿಕೆಯ ತೀವ್ರತೆಯನ್ನು ಶೇಕಡಾ 36 ರಷ್ಟು ಕಡಿಮೆ ಮಾಡಿದೆ.
- 2021ರ ವೇಳೆಗೆ, ಭಾರತವು 2.29 ಶತಕೋಟಿ ಟನ್ $CO_2$ ಗೆ ಸಮಾನವಾದ ಹೆಚ್ಚುವರಿ ಇಂಗಾಲದ ಸಿಂಕ್ ಅನ್ನು ಸೃಷ್ಟಿಸಿದೆ. ಇದು 2030 ರ ವೇಳೆಗೆ ನಿಗದಿಪಡಿಸಲಾದ 2.5 ಶತಕೋಟಿ ಟನ್ ಗುರಿಗೆ ಅತ್ಯಂತ ಹತ್ತಿರದಲ್ಲಿದೆ.
- ಮಾರ್ಚ್ 2026ರಲ್ಲಿ, ಪ್ರಧಾನಮಂತ್ರಿಯವರ ಅಧ್ಯಕ್ಷತೆಯ ಕೇಂದ್ರ ಸಚಿವ ಸಂಪುಟವು 2031-2035ರ ಅವಧಿಗಾಗಿ ಭಾರತದ ಮುಂದಿನ 'ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ'ಗೆ ಅನುಮೋದನೆ ನೀಡಿತು.
- ಭಾರತವು 2030ರ ವೇಳೆಗೆ 500 ಗಿ.ವ್ಯಾ. ಪಳೆಯುಳಿಕೆ ರಹಿತ ಇಂಧನ ಆಧಾರಿತ ವಿದ್ಯುತ್ ಸಾಮರ್ಥ್ಯವನ್ನು ಸಾಧಿಸುವ ಗುರಿಯನ್ನು ಹೊಂದಿದೆ.



## ಸ್ವಚ್ಛತೆಗಾಗಿ ನಡವಳಿಕೆಯಲ್ಲಿ ಬದಲಾವಣೆ

- ನೈರ್ಮಲ್ಯದ ನಿರ್ವಹಣೆಯಿಂದ ಹಿಡಿದು ಒಮ್ಮೊಮ್ಮೆ ಮಾತ್ರ ಬಳಸುವ ಪ್ಲಾಸ್ಟಿಕ್ ನಿಷೇಧದವರೆಗೆ, ಪ್ರಧಾನಮಂತ್ರಿ ಮೋದಿಯವರು ಪರಿಸರ ಸಂರಕ್ಷಣೆಗಾಗಿ ಜೀವನಶೈಲಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲು ಜನರಿಗೆ ನಿರಂತರವಾಗಿ ಸ್ಫೂರ್ತಿ ನೀಡುತ್ತಿದ್ದಾರೆ.
- ಗೋಬರ್ಧನ್ ಯೋಜನೆಯು ಒಂದು "ತ್ಯಾಜ್ಯದಿಂದ ಸಂಪತ್ತು" ಉಪಕ್ರಮವಾಗಿದ್ದು, ಇದು ವೃತ್ತಾಕಾರದ ಆರ್ಥಿಕತೆ ಮತ್ತು 'ಮಿಷನ್ ಲೈಫ್' ತತ್ವಗಳಿಗೆ ಅನುಗುಣವಾಗಿದೆ. ಇದನ್ನು ಏಪ್ರಿಲ್ 30, 2018 ರಂದು ಪ್ರಾರಂಭಿಸಲಾಯಿತು. ಜನವರಿ 2026 ರ ವೇಳೆಗೆ, 189 ಸಂಕುಚಿತ ಜೈವಿಕ ಅನಿಲ (ಕಂಪ್ರೆಸ್ಡ್ ಬಯೋಗ್ಯಾಸ್) ಯೋಜನೆಗಳು ಕಾರ್ಯಾರಂಭ ಮಾಡಿವೆ.

**ಸ್ವಚ್ಛ ಭಾರತ**

**120** ಮಿಲಿಯನ್ ಶೌಚಾಲಯಗಳನ್ನು ನಿರ್ಮಿಸಲಾಗಿದೆ.



**262** ಕೋಟಿ ಸಸಿಗಳನ್ನು 'ಏಕ್ ಪೇಡ್ ಮಾ ಕೆ ನಾಮ್' (ತಾಯಿಯ ಹೆಸರಿನಲ್ಲಿ ಒಂದು ಗಿಡ) ಉಪಕ್ರಮದ ಅಡಿಯಲ್ಲಿ ನೆಡಲಾಗಿದೆ.

'ನಮಾಮಿ ಗಂಗೆ'ಯಂತಹ ಅಭಿಯಾನಗಳನ್ನು ಜನ ಆಂದೋಲನಗಳನ್ನಾಗಿ ಪರಿವರ್ತಿಸುವ ಮೂಲಕ, ಜನರ ಹವ್ಯಾಸಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆಗಳನ್ನು ಖಚಿತಪಡಿಸಿಕೊಳ್ಳಲಾಯಿತು.

> **ನಾವು ಈ ಮಂತ್ರವನ್ನು ನೆನಪಿನಲ್ಲಿಡಬೇಕು—'ಪ್ರಕೃತಿ ರಕ್ಷತಿ ರಕ್ಷಿತಾಃ'—ಅಂದರೆ ಯಾರು ಪ್ರಕೃತಿಯನ್ನು ರಕ್ಷಿಸುತ್ತಾರೋ, ಅವರನ್ನು ಪ್ರಕೃತಿಯು ಮರಳಿ ರಕ್ಷಿಸುತ್ತದೆ. ನಮ್ಮ 'ಮಿಷನ್ ಲೈಫ್' ತತ್ವಕ್ಕೆ ಬದ್ಧರಾಗಿರುವ ಮೂಲಕ ನಾವು ಉತ್ತಮ ಜಗತ್ತನ್ನು ನಿರ್ಮಿಸುತ್ತೇವೆ ಎಂಬ ವಿಶ್ವಾಸ ನನಗಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

**ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಎರಡೂ ಜೊತೆಜೊತೆಯಾಗಿ ಸಾಗಬಹುದು ಎಂಬುದನ್ನು ಸರ್ಕಾರವು ನಿರೂಪಿಸಿದೆ. ಪರಿಸರ ಕಾನೂನುಗಳಲ್ಲಿ ತಂದ ಸುಧಾರಣೆಗಳು, ನಿಯಂತ್ರಕ ನಿಯಮಗಳ ಉತ್ತಮ ಪಾಲನೆಗೆ ಮತ್ತು ಸುಲಭವಾಗಿ ವ್ಯವಹಾರ ನಡೆಸುವಿಕೆಗೆ ಹೆಚ್ಚಿನ ಉತ್ತೇಜನ ನೀಡಲು ಕಾರಣವಾಗಿವೆ.**

## ರೈಲ್ವೆ ಮಾರ್ಗ ವಿದ್ಯುದ್ದೀಕರಣ...


ವಾರ್ಷಿಕವಾಗಿ 178 ಕೋಟಿ ಲೀಟರ್ ಡೀಸೆಲ್ ಉಳಿತಾಯ





**2014 ರಿಂದೀಚೆಗೆ ರೈಲ್ವೆ ಪ್ರಯಾಣಿಕರ ಬೋಗಿಗಳಲ್ಲಿ 3.61 ಲಕ್ಷ ಬಯೋ-ಶೌಚಾಲಯಗಳನ್ನು ಅಳವಡಿಸಲಾಗಿದೆ, ಆದರೆ 2004 ಮತ್ತು 2014ರ ನಡುವೆ ಕೇವಲ 9,587 ಬಯೋ-ಶೌಚಾಲಯಗಳನ್ನು ಮಾತ್ರ ಅಳವಡಿಸಲಾಗಿತ್ತು.**

## ಸೌರಶಕ್ತಿಯಿಂದ ಬೆಳಗಿದ ಮನೆಗಳು

ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಏಪ್ರಿಲ್ 30, 2026 ರ ವೇಳೆಗೆ 36.88 ಲಕ್ಷ ಕುಟುಂಬಗಳಲ್ಲಿ ಸೌರಶಕ್ತಿ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಈ ಯೋಜನೆಯಡಿ ಒಟ್ಟು ಸ್ಥಾಪಿತ ಸಾಮರ್ಥ್ಯವು 10.77 ಗಿಗಾವ್ಯಾಟ್‌ಗೆ ತಲುಪಿದೆ. ಹಾಗೆಯೇ, ಇದುವರೆಗೆ ₹19,480 ಕೋಟಿ ಮೊತ್ತದ ಸಹಾಯಧನವನ್ನು ವಿತರಿಸಲಾಗಿದೆ.




**ಅಳವಡಿಸಲಾದ ಸೌರಶಕ್ತಿ ಸಾಮರ್ಥ್ಯವು 53 ಪಟ್ಟು ಹೆಚ್ಚಾಗಿದೆ**




**ಸೌರಶಕ್ತಿ ಸುಂಕಗಳಲ್ಲಿ 65% ಕಡಿತ**

## ಕಟ್ಟುನಿಟ್ಟಿನ ನಿಯಮಗಳೊಂದಿಗೆ ತ್ಯಾಜ್ಯ ನಿರ್ವಹಣಾ ಸಾಮರ್ಥ್ಯದ ವಿಸ್ತರಣೆ

ಕೇಂದ್ರ ಸರ್ಕಾರವು 'ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2026' ಅನ್ನು ಅಧಿಸೂಚಿಸಿದೆ, ಇದು 2016ರ ಘನತ್ಯಾಜ್ಯ ನಿರ್ವಹಣೆ ನಿಯಮಗಳ ಸ್ಥಾನವನ್ನು ಪಡೆದುಕೊಳ್ಳಲಿದೆ. ಈ ನಿಯಮಗಳು ಏಪ್ರಿಲ್ 1, 2026 ರಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿವೆ. ಈ ನಿಯಮಗಳಲ್ಲಿ 'ಮಾಲಿನ್ಯಕಾರಕನೇ ಪಾವತಿಸಬೇಕು' ಎಂಬ ತತ್ವದ ಆಧಾರದ ಮೇಲೆ ಪರಿಸರ ಪರಿಹಾರ ಶುಲ್ಕವನ್ನು ವಿಧಿಸುವ ನಿಬಂಧನೆಯನ್ನು ಒಳಗೊಂಡಿದೆ. ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2026ರ ಅಡಿಯಲ್ಲಿ, ತ್ಯಾಜ್ಯವನ್ನು ಹಸಿ ಕಸ, ಒಣ ಕಸ, ನೈರ್ಮಲ್ಯ ತ್ಯಾಜ್ಯ ಮತ್ತು ವಿಶೇಷ ಕಾಳಜಿಯ ತ್ಯಾಜ್ಯ ಎಂದು ಪ್ರತ್ಯೇಕಿಸುವುದನ್ನು ಕಡ್ಡಾಯಗೊಳಿಸಲಾಗಿದೆ.


**ಘನತ್ಯಾಜ್ಯ ಸಂಸ್ಕರಣೆ 5 ಪಟ್ಟು ಹೆಚ್ಚಳ**




## ಇಂಧನ ಉಳಿತಾಯ

ಫಾಸ್ಟ್‌ಟ್ಯಾಗ್ ಟೋಲ್ ಪ್ಲಾಜಾಗಳಲ್ಲಿ ಕಾಯುವ ಸಮಯವನ್ನು 12 ನಿಮಿಷಗಳಿಂದ 47 ಸೆಕೆಂಡುಗಳಿಗಿಂತಲೂ ಕಡಿಮೆ ಅವಧಿಗೆ ಇಳಿಸಿದೆ; ಈ ಆಧುನಿಕ ವ್ಯವಸ್ಥೆಯ ನೆರವಿನಿಂದಾಗಿ, ಇಂಧನ ಉಳಿತಾಯದ ಮೂಲಕ ವಾರ್ಷಿಕ ಸುಮಾರು ₹1,500 ಕೋಟಿ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತಿದೆ.

**ಎಥನಾಲ್ ಮಿಶ್ರಣ ಪ್ರಮಾಣದಲ್ಲಿ 13 ಪಟ್ಟು ಹೆಚ್ಚಳ**





**ಭಾರತದ 13 ಕಡಲತೀರಗಳು 'ಬ್ಲೂ ಫ್ಲಾಗ್' ಪ್ರಮಾಣೀಕರಣವನ್ನು ಪಡೆದುಕೊಂಡಿವೆ—ಸ್ವಚ್ಛತೆ, ಪರಿಸರ ಸಂರಕ್ಷಣೆ, ಸುರಕ್ಷತೆ ಮತ್ತು ಅತ್ಯುತ್ತಮ ಪ್ರವಾಸೋದ್ಯಮ ಸೌಲಭ್ಯಗಳಲ್ಲಿನ ಶ್ರೇಷ್ಠತೆಗಾಗಿ ಈ ಗೌರವವನ್ನು ನೀಡಲಾಗುತ್ತದೆ.**

# ವನ್ಯಜೀವಿಗಳ ಕಲ್ಯಾಣ ಮತ್ತು ಸಂರಕ್ಷಣೆಗಾಗಿ ಉಪಕ್ರಮಗಳು

*ದೇಶದಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣವು ಗಮನಾರ್ಹವಾಗಿ ಹೆಚ್ಚಾಗಿದೆ. ಸಂರಕ್ಷಿತ ಅರಣ್ಯಗಳ ವ್ಯಾಪ್ತಿಯೂ ಸಹ ನಿರಂತರವಾಗಿ ವಿಸ್ತರಿಸುತ್ತಿದೆ. ದೇಶದಲ್ಲಿ ' ರಾಮ್ಸರ್ ತಾಣಗಳು' ಜೀವವೈವಿಧ್ಯತೆಯನ್ನು ಪೋಷಿಸುತ್ತಿದ್ದರೆ ಮತ್ತು 'ಪ್ರಾಜೆಕ್ಟ್ ಟೈಗರ್' ದೇಶದ ಹುಲಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ; ಇದರ ಜೊತೆಗೆ ಆಫ್ರಿಕನ್ ಚೀತಾಗಳನ್ನು ಭಾರತಕ್ಕೆ ಮರುಪರಿಚಯಿಸುವ ಖಂಡಾಂತರ ಉಪಕ್ರಮವು ದೇಶದ ಜೀವವೈವಿಧ್ಯತೆಗೆ ದೊಡ್ಡ ಉತ್ತೇಜನವನ್ನು ನೀಡಿದೆ. ಅಷ್ಟೇ ಅಲ್ಲದೆ, ಕೇವಲ ಚೀತಾಗಳ ಸಂಖ್ಯೆಯಷ್ಟೇ ಬೆಳೆಯುತ್ತಿಲ್ಲ; ಹೊಸ ಸಂರಕ್ಷಣಾ ಉಪಕ್ರಮಗಳ ಅಡಿಯಲ್ಲಿ 'ಗ್ರೇಟ್ ಇಂಡಿಯನ್ ಬಸ್ಟರ್ಡ್' ಮರಿಗಳು ಸಹ ಮತ್ತೆ ಮರಳುತ್ತಿವೆ—ಇದು ನಮ್ಮ ಪ್ರಾಚೀನ ಗ್ರಂಥಗಳಲ್ಲಿಯೂ ಪ್ರತಿಧ್ವನಿಸಿರುವ 'ಸಕಲ ಜೀವರಾಶಿಗಳ ಕಲ್ಯಾಣ'ದ ಆಳವಾದ ಆಶಯಕ್ಕೆ ಸಾಕ್ಷಿಯಾಗಿದೆ.*

## ಭಾರತ: ರಾಮ್ಸರ್ ತಾಣಗಳಿಂದ ಹಿಡಿದು ಹುಲಿ ಮತ್ತು ಡಾಲ್ಫಿನ್ ಸಂರಕ್ಷಣೆಯವರೆಗೆ




ಕಳೆದ 12 ವರ್ಷಗಳಲ್ಲಿ, ಭಾರತವು 73 ಹೊಸ ರಾಮ್ಸರ್ ತಾಣಗಳನ್ನು ಸೇರ್ಪಡೆಗೊಳಿಸುವ ಮೂಲಕ ಈ ನಿಟ್ಟಿನಲ್ಲಿ ತನ್ನ ಬದ್ಧತೆಯನ್ನು ಗಣನೀಯವಾಗಿ ಬಲಪಡಿಸಿದೆ.

- ಕಳೆದ ಒಂದು ದಶಕದಲ್ಲಿ, ಭಾರತದಲ್ಲಿ ಹುಲಿಗಳ ಸಂಖ್ಯೆ ದುಪ್ಪಟ್ಟಿಗಿಂತಲೂ ಹೆಚ್ಚಾಗಿದೆ. 2022ರ ಜನಗಣತಿಯ ಪ್ರಕಾರ, ಹುಲಿಗಳ ಸಂಖ್ಯೆಯು 3,682 ರ ದಾಖಲೆಯ ಗರಿಷ್ಠ ಮಟ್ಟವನ್ನು ತಲುಪಿದೆ.
- ಇಂದು, ವಿಶ್ವದ ಒಟ್ಟು ಹುಲಿಗಳಲ್ಲಿ ಸರಿಸುಮಾರು ಶೇಕಡಾ 70 ರಷ್ಟು ಹುಲಿಗಳು ಭಾರತದಲ್ಲೇ ಕಂಡುಬರುತ್ತವೆ. ಅಷ್ಟೇ ಅಲ್ಲದೆ, 'ಪ್ರಾಜೆಕ್ಟ್ ಟೈಗರ್' ಅಡಿಯಲ್ಲಿ ಬರುವ ಸಂರಕ್ಷಿತ ಅರಣ್ಯಗಳ ವಿಸ್ತೀರ್ಣವು ಸುಮಾರು 85,000 ಚದರ ಕಿಲೋಮೀಟರ್ ಗಳಿಗೆ ವಿಸ್ತರಿಸಿದೆ.
- 'ಪ್ರಾಜೆಕ್ಟ್ ಚೀತಾ' ಪ್ರಮುಖ ವನ್ಯ ಮಾಂಸಾಹಾರಿ ಪ್ರಾಣಿಯೊಂದನ್ನು ಒಳಗೊಂಡ ವಿಶ್ವದ ಮೊದಲ ಖಂಡಾಂತರ ಸ್ಥಳಾಂತರ ಯೋಜನೆಯಾಗಿದೆ. ಈ ಉಪಕ್ರಮವು ದೇಶದ ವನ್ಯಜೀವಿ ವೈವಿಧ್ಯತೆಯನ್ನು ಗಣನೀಯವಾಗಿ ಸಮೃದ್ಧಗೊಳಿಸಿದೆ.



- ಭಾರತದಲ್ಲಿ ಚೀತಾಗಳು ಅಳಿದುಹೋಗಿವೆ ಎಂದು ಘೋಷಿಸಿದ 70 ವರ್ಷಗಳ ಸುದೀರ್ಘ ಅವಧಿಯ ನಂತರ—2023 ರಲ್ಲಿ—ದೇಶದಲ್ಲಿ ಮೊದಲ ಬಾರಿಗೆ ಚೀತಾ ಮರಿಗಳು ಜನ್ಮತಾಳಿದವು, ಇದು ಒಂದು ಐತಿಹಾಸಿಕ ಕ್ಷಣವನ್ನು ದಾಖಲಿಸಿತು. ಇಂದಿನವರೆಗೆ, ಭಾರತದಲ್ಲಿ ಜನಿಸಿದ ಅಂತಹ ಚೀತಾ ಮರಿಗಳ ಒಟ್ಟು ಸಂಖ್ಯೆ 37 ಕ್ಕೆ ತಲುಪಿದೆ.



**718** ಹಿಮ ಚಿರತೆಗಳು



**6,327** ಡಾಲ್ಫಿನ್ ಗಳು

ದೇಶದಲ್ಲೇ ಮೊದಲ ಬಾರಿಗೆ ವೈಜ್ಞಾನಿಕ ಆಧಾರಿತ ಸಂಖ್ಯೆಯ ಅಂದಾಜನ್ನು ಪ್ರಸ್ತುತಪಡಿಸಲಾಗಿದೆ.

'ಭಾರತದಲ್ಲಿ ಚಿರತೆಗಳ ಸ್ಥಿತಿ 2022' ವರದಿಯ ಪ್ರಕಾರ, ಭಾರತದಲ್ಲಿ ಚಿರತೆಗಳ ಸಂಖ್ಯೆ **13,874** ರಷ್ಟಿದೆ.



**ಗುಜರಾತ್ ನ ಕಚ್ ನಲ್ಲಿ ಸುಮಾರು ಒಂದು ದಶಕದ ನಂತರ 'ಗ್ರೇಟ್ ಇಂಡಿಯನ್ ಬಸ್ಟರ್ಡ್' (GIB / ಹೊಲಗೌಜ ಪಕ್ಷಿ) ಪಕ್ಷಿಯ ಮರಿಯೊಂದು ಮೊಟ್ಟೆಯಿಂದ ಹೊರಬಂದಿದೆ. ಒಂದು ವರ್ಷದ ಹಿಂದೆ ಯೋಜಿಸಲಾಗಿದ್ದ 'ಜಂಪ್ ಸ್ಟಾರ್ಟ್ ಅಪ್ರೋಚ್' ಎಂಬ ನವೀನ ಸಂರಕ್ಷಣಾ ಕ್ರಮದ ಮೂಲಕ ಈ ಸಾಧನೆ ಸಾಧ್ಯವಾಗಿದೆ. ಗುಜರಾತ್ ಸೇರಿದಂತೆ ದೇಶದ ನೈಸರ್ಗಿಕ ಆವಾಸಸ್ಥಾನಗಳಲ್ಲಿ ಗ್ರೇಟ್ ಇಂಡಿಯನ್ ಬಸ್ಟರ್ಡ್ ಪಕ್ಷಿಗಳ ಸಂರಕ್ಷಣೆಗಾಗಿ ಪ್ರಧಾನಿ ಮೋದಿಯವರು 2011 ರಲ್ಲಿ 'ಪ್ರಾಜೆಕ್ಟ್ ಜಿಐಬಿ' ಅನ್ನು ಕಲ್ಪಿಸಿದ್ದರು.**

**ದೇಶದಲ್ಲಿ ಪ್ರಾಜೆಕ್ಟ್ ಟೈಗರ್ (ಹುಲಿ ಯೋಜನೆ), ಪ್ರಾಜೆಕ್ಟ್ ಎಲಿಫೆಂಟ್ (ಆನೆ ಯೋಜನೆ), ಪ್ರಾಜೆಕ್ಟ್ ಲಯನ್ (ಸಿಂಹ ಯೋಜನೆ), ಪ್ರಾಜೆಕ್ಟ್ ಸ್ನೋ ಲೆಪರ್ಡ್ (ಹಿಮ ಚಿರತೆ ಯೋಜನೆ) ಮತ್ತು ಪ್ರಾಜೆಕ್ಟ್ ಡಾಲ್ಫಿನ್ನಂತಹ ಉಪಕ್ರಮಗಳ ಮೂಲಕ ಪ್ರಮುಖ ವನ್ಯಜೀವಿ ಪ್ರಭೇದಗಳ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಕಡಲ ಆಮೆಗಳು ಸೇರಿದಂತೆ ಅಳಿವಿನ ಅಂಚಿನಲ್ಲಿರುವ 24 ಪ್ರಭೇದಗಳ ಮೇಲೆ ಕೇಂದ್ರೀಕರಿಸಿದ ಸಂರಕ್ಷಣಾ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ.**



## ವನ್ಯಜೀವಿಗಳಿಗಾಗಿ ಉಪಕ್ರಮಗಳು

ದೇಶದಲ್ಲಿ ವನ್ಯಜೀವಿಗಳ ಸುರಕ್ಷತೆ, ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಮೀಸಲಾದ ಸಂರಕ್ಷಿತ ಪ್ರದೇಶಗಳ ಸಂಖ್ಯೆಯು 2020 ರಲ್ಲಿದ್ದ 921 ರಿಂದ 2025 ರ ವೇಳೆಗೆ **1,134** ಕ್ಕೆ ಹೆಚ್ಚಳವಾಗಿದೆ.

2014 ರಲ್ಲಿ 48 ರಷ್ಟಿದ್ದ ದೇಶದ ಹುಲಿ ಸಂರಕ್ಷಿತ ಪ್ರದೇಶಗಳ ಸಂಖ್ಯೆಯು 2025 ರ ವೇಳೆಗೆ 58 ಕ್ಕೆ ತಲುಪಿದೆ. ಅದೇ ರೀತಿ, ಆನೆ ಸಂರಕ್ಷಿತ ಪ್ರದೇಶಗಳ ಸಂಖ್ಯೆಯು 2020 ಮತ್ತು 2025ರ ನಡುವೆ 31 ರಿಂದ 33 ಕ್ಕೆ ಹೆಚ್ಚಳವಾಗಿದೆ.





- ರಾಷ್ಟ್ರೀಯ ವನ್ಯಜೀವಿ ಮಂಡಳಿಯ 7ನೇ ಸಭೆಯಲ್ಲಿ ಘರಿಯಾಲ್ ಗಳ (ಮೊಸಳೆ ತಳಿ) ಸಂರಕ್ಷಣೆ ಮತ್ತು ಅವುಗಳ ಉಳಿವಿಗಿರುವ ಭೀತಿಗಳನ್ನು ಎದುರಿಸಲು ಹೊಸ ಉಪಕ್ರಮವೊಂದಕ್ಕೆ ಅನುಮೋದನೆ ನೀಡಲಾಗಿದೆ. ಘರಿಯಾಲ್ ಅನ್ನು ಈಗ ಕೇಂದ್ರ ಸರ್ಕಾರದ 'ವನ್ಯಜೀವಿ ಆವಾಸಸ್ಥಾನಗಳ ಸಮಗ್ರ ಅಭಿವೃದ್ಧಿ' ಯೋಜನೆಯಡಿ 'ಪ್ರಭೇದಗಳ ಮರುಪಡೆಯುವಿಕೆ ಕಾರ್ಯಕ್ರಮ'ಕ್ಕೆ ಸೇರಿಸಲಾಗಿದೆ.
- ಮಾನಸ್-ಪೊಬಿಟೋರಾ-ನಾಮೇರಿ-ಕಾಜಿರಂಗ-ದಿಬ್ರು ಸೈಖೋವಾ ವನ್ಯಜೀವಿ ಸರ್ಕ್ಯೂಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ.
- ಪನ್ನಾ-ಮುಕುಂದ್‌ಪುರ-ಸಂಜಯ್ ದುಬ್ರಿ-ಬಾಂಧವಗಢ್-ಕನ್ಹಾ-ಮುಕ್ಕಿ-ಪೆಂಚ್ ಭೂದೃಶ್ಯದಾದ್ಯಂತ ವನ್ಯಜೀವಿ ಸರ್ಕ್ಯೂಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

> **ವಿಶ್ವದ ಅತ್ಯಂತ ಭವ್ಯವಾದ ವನ್ಯಜೀವಿಗಳಿಗೆ ಭಾರತವು ಆವಾಸ ಸ್ಥಾನವಾಗಿದೆ ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಜಗತ್ತಿನ ಒಟ್ಟು ಹುಲಿಗಳ ಜನಸಂಖ್ಯೆಯಲ್ಲಿ ಶೇಕಡಾ 70 ಕ್ಕಿಂತ ಹೆಚ್ಚು ಹುಲಿಗಳು ನಮ್ಮಲ್ಲಿವೆ. ಇದರೊಂದಿಗೆ, ಜಗತ್ತಿನಲ್ಲೇ ಅತಿ ಹೆಚ್ಚು ಏಕ-ಕೊಂಬಿನ ಖಡ್ಗಮೃಗಗಳು ಮತ್ತು ಅತಿ ಹೆಚ್ಚಿನ ಸಂಖ್ಯೆಯ ಏಷ್ಯನ್ ಆನೆಗಳು ನಮ್ಮಲ್ಲಿವೆ. 'ಕಾಡಿನ ರಾಜ' ಎಂದೇ ಕರೆಯಲ್ಪಡುವ ಏಷ್ಯಾಟಿಕ್ ಸಿಂಹಗಳು ಅಭಿವೃದ್ಧಿ ಹೊಂದುತ್ತಿರುವ ವಿಶ್ವದ ಏಕೈಕ ಸ್ಥಳ ಭಾರತವಾಗಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*





ಆರ್ಟ್ ಆಫ್ ಲಿವಿಂಗ್ ನ ಸಂಸ್ಥಾಪನಾ ದಿನ ಆಚರಣೆ

# ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದ ಬೆಂಗಳೂರು

***ಸಾಫ್ಟ್ ವೇರ್ ಮತ್ತು ಸೇವೆಗಳಿಗೆ ಜಾಗತಿಕವಾಗಿ ಹೆಸರುವಾಸಿಯಾಗಿರುವ ಬೆಂಗಳೂರು, ಭಾರತದ ಸಾಂಸ್ಕೃತಿಕ ಗುರುತಾದ ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನೂ ಹೊಸ ಎತ್ತರಕ್ಕೆ ಕೊಂಡೊಯ್ದಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕರ್ನಾಟಕದ ಬೆಂಗಳೂರಿನಲ್ಲಿ ಮೇ 10 ರಂದು ನಡೆದ ಆರ್ಟ್ ಆಫ್ ಲಿವಿಂಗ್ ನ 45ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿ, ಸ್ಪಷ್ಟ ಸಂಕಲ್ಪದೊಂದಿಗೆ ಸೇವಾ ಮನೋಭಾವದಿಂದ ಕೆಲಸವನ್ನು ಕೈಗೆತ್ತಿಕೊಂಡಾಗ, ಪ್ರತಿಯೊಂದು ಪ್ರಯತ್ನವೂ ಸಕಾರಾತ್ಮಕ ಫಲಿತಾಂಶಗಳನ್ನು ನೀಡಲಿದೆ ಎಂದು ಹೇಳಿದರು.***

ಶ್ರೀ ಶ್ರೀ ರವಿಶಂಕರ್ ಅವರು 45 ವರ್ಷಗಳ ಹಿಂದೆ ಆರ್ಟ್ ಆಫ್ ಲಿವಿಂಗ್ ಬೀಜವನ್ನು ಬಿತ್ತಿದ್ದು, ಇಂದು ಅದು ಬೃಹತ್ ಆಲದ ಮರವಾಗಿ ಅರಳಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಆರ್ಟ್ ಆಫ್ ಲಿವಿಂಗ್ ನ ಸಂಸ್ಥಾಪನಾ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ಇದು ಇಂದು ನಮ್ಮ ಮುಂದೆ ಬೃಹತ್ ಆಲದ ಮರವಾಗಿ ನಿಂತಿದ್ದು, ಪ್ರಪಂಚದಾದ್ಯಂತದ ಅಸಂಖ್ಯಾತ ಜನರ ಜೀವನವನ್ನು ಸಂಪರ್ಕಿಸುವ ಸಾವಿರಾರು ಶಾಖೆಗಳನ್ನು ಹೊಂದಿದೆ" ಎಂದು ಬಣ್ಣಿಸಿದರು. ಭಾರತವು ಭಾಷೆಗಳು, ಸಂಪ್ರದಾಯಗಳು, ಪದ್ಧತಿಗಳು ಮತ್ತು ಪೂಜಾ ವಿಧಾನಗಳ ಶ್ರೀಮಂತ ವೈವಿಧ್ಯತೆಯನ್ನು ಹೊಂದಿದೆ. ಈ ಸುಂದರ ವೈವಿಧ್ಯತೆಗಳನ್ನು ಒಟ್ಟಾಗಿ ಬೆಸೆದಿರುವ ಬಂಧ ಯಾವುದು? ಇದಕ್ಕೆ ಉತ್ತರವು, ಭಾರತದ ಮೌಲ್ಯಗಳಲ್ಲಿ ಆಳವಾಗಿ ಬೇರೂರಿರುವ ಯೋಗ, ಧ್ಯಾನ ಮತ್ತು ಪ್ರಾಣಾಯಾಮದ ಪರಂಪರೆ ಹಾಗೂ ತನಗಾಗಿ ಮಾತ್ರವಲ್ಲ, ಇತರರಿಗಾಗಿ ಬದುಕುವ ಭಾವದಲ್ಲಿ ಅಡಗಿದೆ. ಪ್ರಪಂಚದಾದ್ಯಂತದ ಜನರು ಪ್ರಸ್ತುತ ಭಾರತದ ಆಧ್ಯಾತ್ಮಿಕ ಮೌಲ್ಯಗಳಿಂದ ಪ್ರೇರಿತರಾಗಿದ್ದಾರೆ ಮತ್ತು ಈ ಪ್ರಾಚೀನ ಮೌಲ್ಯಗಳೇ ಭಾರತದಾದ್ಯಂತ ಅನೇಕ ಸಂಸ್ಥೆಗಳಿಗೆ ಸ್ಫೂರ್ತಿಯ ಸೆಲೆಯಾಗಿ ಮುಂದುವರಿದಿವೆ ಎಂದು ಪ್ರಧಾನಮಂತ್ರಿ ಮೋದಿ ಅವರು ಒತ್ತಿ ಹೇಳಿದ್ದಾರೆ. ಪುರಾಣಗಳಲ್ಲಿ ಕಂಡುಬರುವ ಪ್ರಾಚೀನ ಬೋಧನೆಗಳು ಇತರರ ಸೇವೆಯು ಪುಣ್ಯದ ಕಾರ್ಯವೆಂದೂ, ಇತರರಿಗೆ ನೋವುಂಟು ಮಾಡುವುದು ಪಾಪವೆಂದೂ ತಿಳಿಸಿವೆ. ಸೇವೆಯು ಭಾರತೀಯ ಸಮಾಜದಲ್ಲಿನ ಅಂತರ್ಗತ ಲಕ್ಷಣವಾಗಿದೆ. ಭಾರತದಲ್ಲಿ ಅನೇಕ ಆಧ್ಯಾತ್ಮಿಕ ಚಳುವಳಿಗಳು ಅಂತಿಮವಾಗಿ ಮಾನವೀಯತೆಯ ಸೇವೆಯ ಮೂಲಕ ಪ್ರಕಟಗೊಂಡಿವೆ. ಆರ್ಟ್ ಆಫ್ ಲಿವಿಂಗ್ ಕೈಗೊಳ್ಳುವ ಪ್ರತಿ ಪ್ರಯತ್ನದಲ್ಲಿಯೂ ಈ ಮನೋಭಾವ ಸ್ಪಷ್ಟವಾಗಿದೆ. ಭಾರತದ ಸಮಗ್ರ ಅಭಿವೃದ್ಧಿಯನ್ನು ಮುನ್ನಡೆಸುವಲ್ಲಿ ಆರ್ಟ್ ಆಫ್ ಲಿವಿಂಗ್ ನಂತಹ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದ್ದಾರೆ. ರೈತರನ್ನು ನೈಸರ್ಗಿಕ ಕೃಷಿ ಪದ್ಧತಿಗಳೊಂದಿಗೆ ಸಂಪರ್ಕಿಸುವತ್ತ ಗಮನಹರಿಸುವಂತೆ ಮನವಿ ಮಾಡುತ್ತಾ, ಸುಸ್ಥಿರ ಕೃಷಿಯು ಸ್ವತಃ "ಜೀವನ ಕಲೆಯ (ಆರ್ಟ್ ಆಫ್ ಲಿವಿಂಗ್)" ನ ಅಭಿವ್ಯಕ್ತಿಯಾಗಿದೆ ಹಾಗೂ ರಾಸಾಯನಿಕಗಳಿಂದ ಭೂಮಿ ತಾಯಿಯನ್ನು ರಕ್ಷಿಸುವುದು ಆಧ್ಯಾತ್ಮಿಕ ಅಭ್ಯಾಸ ಮತ್ತು ಪರಿಸರ ಸಂರಕ್ಷಣೆ ಎರಡರ ಸಂಕೇತವೂ ಆಗಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವುದು ಮತ್ತು ರಾಸಾಯನಿಕಗಳಿಂದ ಭೂಮಿ ತಾಯಿಯನ್ನು ರಕ್ಷಿಸುವುದು ಕೂಡ ಜೀವನ ಕಲೆಯೇ ಹೌದು.

"ಪ್ರತಿ ಹನಿ, ಹೆಚ್ಚುವರಿ ಬೆಳೆ" ಉಪಕ್ರಮವನ್ನು ವಿವರಿಸುತ್ತಾ, ರೈತರು ಸುಧಾರಿತ ನೀರು ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಪ್ರಧಾನಮಂತ್ರಿ ಮೋದಿ ಅವರು ಒತ್ತಿ ಹೇಳಿದ್ದಾರೆ. ಸಮಾಜದ ಸಹಕಾರವಿದ್ದಲ್ಲಿ ಈ ದಿಸೆಯಲ್ಲಿ ಇನ್ನೂ ಉತ್ತಮ ಫಲಿತಾಂಶಗಳನ್ನು ಸಾಧಿಸಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮಳೆಗಾಲ ಸಮೀಪಿಸುತ್ತಿದ್ದು, ಈ ಕಾರ್ಯ ತುರ್ತು ಅಗತ್ಯ ಎಂದು ಅವರು ಒತ್ತಿ ಹೇಳಿದ್ದಾರೆ. ಜಲ ಸಂರಕ್ಷಣೆಯ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಲು ಇದು ಸೂಕ್ತ ಸಮಯ ಎಂದು ಹೇಳಿರುವ ಅವರು, ಪ್ರತಿ ಹನಿ ನೀರನ್ನು ಉಳಿಸುವುದು ಕೂಡ ಜೀವನ ಕಲೆ ಎಂದು ತಿಳಿಸಿದ್ದಾರೆ.

> **ಬೆಂಗಳೂರಿನ ವಾತಾವರಣ... ಇಲ್ಲಿನ ಪರಿಸರ... ನಿಜಕ್ಕೂ ವಿಶಿಷ್ಟವಾಗಿದೆ. ಈ ನಗರವು ಸಾಫ್ಟ್ ವೇರ್ ಮತ್ತು ಸೇವಾ ವಲಯಗಳಿಗೆ ಜಾಗತಿಕವಾಗಿ ಹೆಸರುವಾಸಿಯಾಗಿದೆ. ಅದರೊಂದಿಗೆ ಭಾರತದ ಸಾಂಸ್ಕೃತಿಕ ಗುರುತಾದ ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನೂ ಹೊಸ ಎತ್ತರಕ್ಕೆ ಕೊಂಡೊಯ್ದಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಪ್ರಧಾನಮಂತ್ರಿಯವರ ಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

# ಸುಧಾರಣಾ ಎಕ್ಸ್‌ಪ್ರೆಸ್‌ನಲ್ಲಿ ಭಾರತದ ಸವಾರಿ

*ಭಾರತವು 'ಸುಧಾರಣಾ ಎಕ್ಸ್ ಪ್ರೆಸ್' ಗೆ ವೇಗ ನೀಡುತ್ತಾ, ತನ್ನ ವಿಶ್ವ ದರ್ಜೆಯ ರಸ್ತೆ, ರೈಲು, ವಾಯು ಮತ್ತು ಇಂಧನ ಸಂಪರ್ಕ ಮೂಲಸೌಕರ್ಯವನ್ನು ಕ್ಷಿಪ್ರವಾಗಿ ವಿಸ್ತರಿಸುತ್ತಿದೆ. 'ಪಿಎಂ ಮಿತ್ರ ಪಾರ್ಕ್ ಗಳ' ನೆರವಿನೊಂದಿಗೆ, ಜವಳಿ ಉದ್ಯಮದಲ್ಲಿ ಭಾರತದ ಶ್ರೀಮಂತ ಪರಂಪರೆಯನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ ಮತ್ತು ಬಲಪಡಿಸಲಾಗುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಈ ಆವೇಗವನ್ನು ಮುಂದುವರೆಸುತ್ತಾ ಮೇ 10 ರಂದು ತೆಲಂಗಾಣದ ಹೈದರಾಬಾದ್ ನಲ್ಲಿ ಸುಮಾರು ₹9,400 ಕೋಟಿ ಮೌಲ್ಯದ ಹಲವು ಯೋಜನೆಗಳ ಶಂಕುಸ್ಥಾಪನೆ ಮತ್ತು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ನೆರವೇರಿಸಿದರು...*



**ಈ ಹಿಂದೆ, ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆಗಳ ಪೈಕಿ ಒಂದಾಗಿದ್ದಾಗ, ನಮ್ಮ ಜವಳಿ ಉದ್ಯಮವು ಪ್ರಮುಖ ಪಾತ್ರ ವಹಿಸಿತ್ತು. ನಾವು ಈಗ ಆ ಪರಂಪರೆಯನ್ನು ಪುನರುಜ್ಜೀವನಗೊಳಿಸುತ್ತಿದ್ದೇವೆ. ವಾರಂಗಲ್ ನಲ್ಲಿರುವ ಪಿಎಂ ಮಿತ್ರ ಪಾರ್ಕ್ ದೇಶಾದ್ಯಂತ ಜವಳಿ ಕ್ರಾಂತಿಗೆ ವೇಗ ತುಂಬಲಿದೆ.**

*ನರೇಂದ್ರ ಮೋದಿ, ಪ್ರಧಾನಮಂತ್ರಿ*

ತೆಲಂಗಾಣ ಜನರ ಜೀವನವನ್ನು ಸುಲಭಗೊಳಿಸಲು ಮತ್ತು ಯುವಕರಿಗೆ ಹೊಸ ಉದ್ಯೋಗಾವಕಾಶಗಳು ತೆರೆಯುವಂತಾಗಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇ 10 ರಂದು ರಾಜ್ಯದಲ್ಲಿ ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಈ ಯೋಜನೆಗಳು ಈ ವಲಯದಲ್ಲಿ ಸ್ಥಾಪನೆಯಾಗಲಿರುವ ಆಹಾರ ಸಂಸ್ಕರಣಾ ಕೈಗಾರಿಕೆಗಳು ಸೇರಿದಂತೆ ಇಡೀ ಕೈಗಾರಿಕಾ ವಲಯದ ಅಭಿವೃದ್ಧಿಗೆ ಉತ್ತೇಜನ ನೀಡಲಿದೆ. ಜೊತೆಗೆ ಈ ಪ್ರದೇಶದಲ್ಲಿ ಮುಂದಿನ ಪೀಳಿಗೆಯ ವಾಹನಗಳು ಮತ್ತು ಯಂತ್ರೋಪಕರಣಗಳ ಉತ್ಪಾದನೆಗೂ ಉತ್ತೇಜನ ಸಿಗಲಿದೆ. ಈ ಉಪಕ್ರಮಗಳ ಅನುಕೂಲಗಳು ಸಾಮಾನ್ಯ ಜನರಿಗೆ ಮಾತ್ರವಲ್ಲದೆ ತೆಲಂಗಾಣದ ಕಾರ್ಮಿಕರು ಮತ್ತು ರೈತರಿಗೂ ಸಿಗಲಿವೆ.

ಸೈಬರಾಬಾದ್, ತೆಲಂಗಾಣದ ಹೈದರಾಬಾದ್ ನಗರದೊಳಗಿನ ಒಂದು ಪ್ರಮುಖ ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ವ್ಯಾಪಾರ ಕೇಂದ್ರವಾಗಿದೆ. ಹೀಗಾಗಿ ಸೈಬರಾಬಾದ್ ನಿಂದ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಇಂದು ಭಾರತವು 'ಸುಧಾರಣಾ ಎಕ್ಸ್ ಪ್ರೆಸ್' ಮೇಲೆ ಸವಾರಿ ಮಾಡುತ್ತಿದೆ. ಅದೇ ಸಮಯದಲ್ಲಿ, ಆಧುನಿಕ ಭಾರತವು ಅತ್ಯಾಧುನಿಕ ಮೂಲಸೌಕರ್ಯವನ್ನು ಸಕ್ರಿಯವಾಗಿ ನಿರ್ಮಿಸುತ್ತಿದೆ. ಜಹೀರಾಬಾದ್ ಕೈಗಾರಿಕಾ ಪ್ರದೇಶದ ಅಭಿವೃದ್ಧಿಯು ಕೂಡ ಇದೇ ಉದ್ದೇಶದಿಂದ ಕೂಡಿದೆ. ಈ ಕೈಗಾರಿಕಾ ವಲಯವು ಭಾರತ ಸರ್ಕಾರದ ಕೈಗಾರಿಕಾ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವ ರಾಷ್ಟ್ರೀಯ ಅಭಿಯಾನದ ಅವಿಭಾಜ್ಯ ಅಂಗವಾಗಿದೆ. ಇದು ವಿಶ್ವದರ್ಜೆಯ ಮೂಲಸೌಕರ್ಯ ಮತ್ತು ನಿರಂತರ ವಿದ್ಯುತ್ ಪೂರೈಕೆಯನ್ನು ಹೊಂದಿರಲಿದ್ದು; ವಾಸ್ತವದಲ್ಲಿ, ಕೈಗಾರಿಕಾ ಕಾರ್ಯಾಚರಣೆಗಳಿಗೆ ಅಗತ್ಯವಾದ ಪ್ರತಿಯೊಂದು ಸೌಲಭ್ಯವನ್ನು ಜಗತ್ತಿನಾದ್ಯಂತದ ಹೂಡಿಕೆದಾರರಿಗೆ ಇಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ. ವಾರಂಗಲ್ ನಲ್ಲಿ ಸ್ಥಾಪಿಸಲಾಗಿರುವ 'ಪಿಎಂ ಮಿತ್ರ ಪಾರ್ಕ್' ದೇಶದೊಳಗೆ ಜವಳಿ ಕ್ರಾಂತಿಗೆ ವೇಗ ನೀಡಲಿದೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದ್ದಾರೆ. ಇಲ್ಲಿ ಕಾರ್ಯಾಚರಣೆ ಮಾಡುವ ಘಟಕಗಳು ಉತ್ಪಾದನೆ ಸಂಬಂಧಿತ ಪ್ರೋತ್ಸಾಹ (ಪಿಎಲ್ಐ) ಯೋಜನೆ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಅರ್ಹವಾಗಿರಲಿವೆ. ಅಲ್ಲದೇ, ಫಲಾನುಭವಿ ಉದ್ಯಮಗಳು ಈಗಾಗಲೇ ಪಿ ಎಲ್ ಐ ಯೋಜನೆಯ ಪ್ರಯೋಜನಗಳನ್ನು ಪಡೆಯಲು ಪ್ರಾರಂಭಿಸಿವೆ. ಈ ಜವಳಿ ಪಾರ್ಕ್, ಹೆಚ್ಚಿನ ಸಂಖ್ಯೆಯ ಉದ್ಯೋಗಾವಕಾಶಗಳನ್ನು, ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗಾವಕಾಶ ಸೃಜಿಸಲು ಸಜ್ಜಾಗಿದೆ. ಭಾರತ ಸರ್ಕಾರವು ಕಳೆದ 12 ವರ್ಷಗಳಲ್ಲಿ ರಸ್ತೆ, ರೈಲ್ವೆ ಮತ್ತು ವಿಮಾನ ನಿಲ್ದಾಣಗಳನ್ನು ಒಳಗೊಂಡ ಆಧುನಿಕ ಸಂಪರ್ಕ ಮೂಲಸೌಕರ್ಯದಲ್ಲಿ ಅಭೂತಪೂರ್ವ ಹೂಡಿಕೆಗಳನ್ನು ಮಾಡಿದೆ ಎಂದು ಪ್ರಧಾನಮಂತ್ರಿ ಮೋದಿ ವಿವರಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗಾಗಿ ಸುಮಾರು ₹1.75 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ರಾಜ್ಯದ ರಾಷ್ಟ್ರೀಯ ಹೆದ್ದಾರಿ ಜಾಲವು 12 ವರ್ಷಗಳಲ್ಲಿ ದ್ವಿಗುಣಗೊಂಡಿದೆ. 2014 ಕ್ಕಿಂತ ಮುನ್ನ, ಅವಿಭಜಿತ ಆಂಧ್ರಪ್ರದೇಶದ ರೈಲ್ವೆ ಬಜೆಟ್ ₹1,000 ಕೋಟಿಗಿಂತ ಕಡಿಮೆಯಿತ್ತು; ಇದಕ್ಕೆ ತದ್ವಿರುದ್ಧವಾಗಿ, ತೆಲಂಗಾಣದ ಪ್ರಸ್ತುತ ವಾರ್ಷಿಕ ರೈಲ್ವೆ ಆಯವ್ಯಯ ಹಂಚಿಕೆಯು ₹5,500 ಕೋಟಿ ಮೀರಿದೆ. ಸರಿಸುಮಾರು ₹50,000 ಕೋಟಿ ಮೌಲ್ಯದ ರೈಲ್ವೆ ಯೋಜನೆಗಳು ಪ್ರಸ್ತುತ ಪ್ರಗತಿಯಲ್ಲಿವೆ. ಇದಲ್ಲದೆ, ತೆಲಂಗಾಣದಲ್ಲಿ ಐದು 'ವಂದೇ ಭಾರತ್' ಮತ್ತು ಆರು 'ಅಮೃತ ಭಾರತ್' ರೈಲು ಸೇವೆಯನ್ನು ಪ್ರಾರಂಭಿಸಲಾಗಿದೆ. 21ನೇ ಶತಮಾನದ ಜಾಗತಿಕ ಸನ್ನಿವೇಶದಲ್ಲಿ ಇಂಧನ ಭದ್ರತೆಯ ನಿರ್ಣಾಯಕ ಪ್ರಾಮುಖ್ಯತೆಯ




## ಪಿಎಂ ಮಿತ್ರ ಪಾರ್ಕ್ ಉದ್ಘಾಟನೆ

ವಾರಂಗಲ್ ನಲ್ಲಿ ₹ 1,700 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿರುವ ಪ್ರಧಾನಮಂತ್ರಿ ಬೃಹತ್ ಸಮಗ್ರ ಜವಳಿ ಪ್ರದೇಶ ಮತ್ತು ವಸ್ತ್ರ (ಪಿ ಎಂ – ಎಂ ಐ ಟಿ ಆರ್ ಎ - ಮಿತ್ರ) ಪಾರ್ಕ್ ಉದ್ಘಾಟನೆಯಾಗಿದೆ. ಕಾಕತೀಯ ಬೃಹತ್ ಜವಳಿ ಪಾರ್ಕ್ ಎಂದೂ ಕರೆಯಲ್ಪಡುವ ಈ ಸೌಲಭ್ಯವು ಭಾರತದ ಮೊದಲ ಸಂಪೂರ್ಣ ಕಾರ್ಯಾಚರಣೆಯ ಪಿ ಎಂ ಮಿತ್ರ ಪಾರ್ಕ್ ಆಗಿದೆ. ಇದು ಪ್ರಸ್ತಾವಿತ ನಾಗ್ಪುರ-ವಿಜಯವಾಡ ಗ್ರೀನ್ ಫೀಲ್ಡ್ ಎಕ್ಸ್ ಪ್ರೆಸ್ ವೇ (ರಾಷ್ಟ್ರೀಯ ಹೆದ್ದಾರಿ-163ಜಿ) ಮತ್ತು ರಾಷ್ಟ್ರೀಯ ಹೆದ್ದಾರಿ-163 ರ ಸಮೀಪದಲ್ಲಿದೆ. ಇದು ಪ್ರಮುಖ ರೈಲ್ವೆ ಜಾಲಗಳು ಮತ್ತು ಬಂದರುಗಳಿಗೆ ಅತ್ಯುತ್ತಮ ಬಹುಮಾದರಿ ಸಂಪರ್ಕವನ್ನು ಒದಗಿಸಲಿದೆ.

## ಕ್ಯಾನ್ಸರ್ ರೋಗಿಗಳಿಗೆ ಸೌಲಭ್ಯಗಳು

ಹೈದರಾಬಾದ್ ಮೂಲದ ಸಿಂಧು ಆಸ್ಪತ್ರೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಈ ಆಸ್ಪತ್ರೆಯು ಕ್ಯಾನ್ಸರ್ ಚಿಕಿತ್ಸೆಗೆ ಮೀಸಲಾಗಿರುವ ಅತ್ಯಾಧುನಿಕ, ಮಲ್ಟಿ ಸೂಪರ್-ಸ್ಪೆಷಾಲಿಟಿ ಸಂಸ್ಥೆಯಾಗಿದೆ. ಆಸ್ಪತ್ರೆಯು 18 ಮಹಡಿಗಳನ್ನು ವ್ಯಾಪಿಸಿದ್ದು 1,500 ಹಾಸಿಗೆಗಳು, 150 ವೈದ್ಯರ ಸಮಾಲೋಚನೆ ಕೊಠಡಿಗಳು ಮತ್ತು 29 ಸುಧಾರಿತ ಆಪರೇಷನ್ ಥಿಯೇಟರ್ ಗಳನ್ನು ಒಳಗೊಂಡಿದೆ. ಕಿಮೊಥೆರಪಿ, ವಿಕಿರಣ ಚಿಕಿತ್ಸೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಮೂಳೆ ಮಜ್ಜೆಯ ಕಸಿ, ಆಧುನಿಕ ತೀವ್ರ ನಿಗಾ ಮತ್ತು 33 ಕ್ಕೂ ಹೆಚ್ಚು ವೈದ್ಯಕೀಯ ವಿಶೇಷತಾ ಸೇವೆಗಳನ್ನು ಒಳಗೊಂಡಿದ್ದು, ಈ ಸೌಲಭ್ಯವು ಸಮಗ್ರ ಆರೈಕೆಯನ್ನು ಒದಗಿಸುತ್ತದೆ.



## ಯೋಜನೆಗಳು ಅಭಿವೃದ್ಧಿಗೆ ವೇಗ ನೀಡಲಿವೆ...

ಹೈದರಾಬಾದ್-ಪಣಜಿ ಆರ್ಥಿಕ ಕಾರಿಡಾರ್ ನಲ್ಲಿ

**3,175** ಕೋಟಿ ರೂ. ವೆಚ್ಚದ ಗುಡೆಬೆಳ್ಳೂರಿನಿಂದ ಮಹಬೂಬ್ ನಗರದವರೆಗಿನ 4-ಪಥದ ರಾಷ್ಟ್ರೀಯ ಹೆದ್ದಾರಿ (ಎನ್ ಎಚ್ -167) ಗೆ ಶಂಕುಸ್ಥಾಪನೆ.

ಇದು ಪ್ರಯಾಣದ ಸಮಯವನ್ನು ಸುಮಾರು 1 ಗಂಟೆ 30 ನಿಮಿಷಗಳ ಕಾಲ ತಗ್ಗಿಸಲಿದೆ.

- ರಂಗಾ ರೆಡ್ಡಿ ಜಿಲ್ಲೆಯಲ್ಲಿ ಹೈದರಾಬಾದ್-ನಾಗ್ಪುರ ಕೈಗಾರಿಕಾ ಕಾರಿಡಾರ್ (ಹೆಚ್ ಎನ್ ಐ ಸಿ) ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಜಹೀರಾಬಾದ್ ಕೈಗಾರಿಕಾ ಪ್ರದೇಶಕ್ಕೆ ಶಿಲಾನ್ಯಾಸ ನೆರವೇರಿಸಲಾಗಿದೆ. 3,245 ಎಕರೆ ವಿಸ್ತೀರ್ಣದ ಈ ಪ್ರದೇಶವನ್ನು ಒಟ್ಟು ₹2,350 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.
- ಜಹೀರಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಲಾಗುವ ಯೋಜನೆಗಳು ಸರಿಸುಮಾರು ₹10,000 ಕೋಟಿ ಹೂಡಿಕೆಯನ್ನು ಆಕರ್ಷಿಸುವ ಮತ್ತು ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಜಿಸುವ ನಿರೀಕ್ಷೆಯಿದೆ.

**ಸುಮಾರು ₹1,535 ಕೋಟಿ ಮೌಲ್ಯದ ರೈಲ್ವೆ ಮೂಲಸೌಕರ್ಯ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ.**

**ಇವುಗಳು 118 ಕಿಲೋಮೀಟರ್ ವ್ಯಾಪಿಸಿದ್ದು ಕಾಜಿಪೇಟೆ-ವಿಜಯವಾಡ ಬಹು-ಹಳಿ ಯೋಜನೆಯ ಹಲವು ವಿಭಾಗಗಳನ್ನು ಒಳಗೊಂಡಿವೆ.**

- ಹೈದರಾಬಾದ್ ನಲ್ಲಿ ₹600 ಕೋಟಿಗೂ ಅಧಿಕ ವೆಚ್ಚದಲ್ಲಿ ಇಂಡಿಯನ್ ಆಯಿಲ್ ಅಭಿವೃದ್ಧಿಪಡಿಸಿರುವ ಮಲ್ಕಾಪುರ ಟರ್ಮಿನಲ್ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಈ ಟರ್ಮಿನಲ್ ಒಟ್ಟು 165,000 ಕಿಲೋಲೀಟರ್ ಟ್ಯಾಂಕ್ ಸಾಮರ್ಥ್ಯವನ್ನು ಹೊಂದಿದೆ.

*ವಿದೇಶಿ ವಿನಿಮಯವನ್ನು ಸಂರಕ್ಷಿಸಲು ಮತ್ತು ಸಂಘರ್ಷಗಳಿಂದ ಉದ್ಭವಿಸುವ ಬಿಕ್ಕಟ್ಟುಗಳ ದುಷ್ಪರಿಣಾಮಗಳನ್ನು ತಗ್ಗಿಸಲು ಅಗತ್ಯವಿರುವಷ್ಟು ಇಂಧನವನ್ನು ಮಾತ್ರ ಬಳಸಲು ನಾವು ಶ್ರಮಿಸಬೇಕು ಎಂದು ಪ್ರಧಾನಮಂತ್ರಿ ಮೋದಿ ಕರೆ ನೀಡಿದ್ದಾರೆ.*

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ*

ಬಗ್ಗೆ ಮಾತನಾಡಿರುವ ಪ್ರಧಾನಮಂತ್ರಿ ಮೋದಿ ಅವರು, ಇಂಧನ ಪೂರೈಕೆಯಲ್ಲಿ ಯಾವುದೇ ಅಡ್ಡಿಯು ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬಹುದಾಗಿದೆ ಎಂದು ಒತ್ತಿ ಹೇಳಿದ್ದಾರೆ. ಈ ಕಾರಣಕ್ಕಾಗಿಯೇ ಭಾರತ ಸರ್ಕಾರವು ರಾಷ್ಟ್ರದ ಇಂಧನ ಭದ್ರತೆಯನ್ನು ಹೆಚ್ಚಿಸಲು ಅಪಾರವಾಗಿ ಹೂಡಿಕೆ ಮಾಡುತ್ತಿದೆ. ಮಲ್ಕಾಪುರದಲ್ಲಿ ಹೊಸ ಇಂಡಿಯನ್ ಆಯಿಲ್ ಟರ್ಮಿನಲ್ ಉದ್ಘಾಟನೆಯು ಮಹತ್ವದ ಕಾರ್ಯತಂತ್ರದ ಹೆಜ್ಜೆ ಎಂದು ಬಣ್ಣಿಸಿರುವ ಪ್ರಧಾನಮಂತ್ರಿಗಳು, ಈ ಟರ್ಮಿನಲ್ ತೆಲಂಗಾಣದ ಬೆಳೆಯುತ್ತಿರುವ ಇಂಧನ ಅಗತ್ಯಗಳನ್ನು ಪೂರೈಸಲಿದೆ ಮತ್ತು ಪೂರೈಕೆ ಸರಪಳಿಯನ್ನು ಬಲಪಡಿಸಲಿದೆ ಎಂದು ಹೇಳಿದ್ದಾರೆ. ●

**ಸೋಮನಾಥ ದೇವಾಲಯದ ಜೀರ್ಣೋದ್ಧಾರದ 75 ವರ್ಷಗಳು**

# ಸೋಮನಾಥ ಅಮೃತ ಮಹೋತ್ಸವ

## ಭಾರತದ ಅಚಲವಾದ ಚೈತನ್ಯದ ಸಂಭ್ರಮ

***ಸೋಮನಾಥ ಕೇವಲ ದೇವಾಲಯವಲ್ಲ; ಇದು ಸನಾತನ ನಂಬಿಕೆಯ ಅಮರ ಜ್ವಾಲೆಯ ಸಂಕೇತವಾಗಿದೆ. ಅವಶೇಷಗಳಿಂದ ಪುನರ್ ನಿರ್ಮಾಣದವರೆಗಿನ ಅದರ ಪಯಣವು ಭಾರತದ ಅಜೇಯ ಪರಂಪರೆ ಮತ್ತು ಅದರ ಅದಮ್ಯ ಸಂಕಲ್ಪವನ್ನು ಪ್ರತಿಬಿಂಬಿಸಿದೆ. ಗುಜರಾತ್ ನ ಸೋಮನಾಥ ದೇಗುಲವನ್ನು ಜೀರ್ಣೋದ್ಧಾರಗೊಳಿಸಿ 75 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಆಯೋಜಿಸಲಾದ ಸೋಮನಾಥ ಅಮೃತ ಮಹೋತ್ಸವದಲ್ಲಿ ಭಾಗವಹಿಸುವ ಮುನ್ನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂಪಾದಕೀಯ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ, ಅವರು ಸೋಮನಾಥ ವಿಷಯವಾಗಿ ಮೇ 11ರ ನಿರಂತರ ಮಹತ್ವವನ್ನು ಮತ್ತು ಭಾರತದ ನಾಗರಿಕತೆಯ ಹಿರಿಮೆಯನ್ನು ಚರ್ಚಿಸಿದ್ದಾರೆ. ಹಾಗೆಯೇ, ಗುಜರಾತ್ ಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ವಡೋದರದಲ್ಲಿ ಸರ್ದಾರ್ ಧಾಮ್ ಹಾಸ್ಟೆಲ್ ಅನ್ನು ಸಹ ಉದ್ಘಾಟಿಸಿದ್ದಾರೆ....***

ನಮ್ಮ ಪ್ರಾಚೀನ ಗ್ರಂಥಗಳಲ್ಲಿ "ಪ್ರಭಾಸಂ ಚ ಪರಿಕ್ರಮ್ಯ ಪೃಥಿವೀಕ್ರಮಸಂಭವಮ್" ಎಂದಿದೆ. ಅಂದರೆ ದೈವಿಕ ಪ್ರಭಾಸ (ಸೋಮನಾಥ ದೇಗುಲ)ಕ್ಕೆ ಪ್ರದಕ್ಷಿಣೆ ಹಾಕಿದರೆ, ಅದು ಇಡೀ ಭೂಮಿಯ ಪ್ರದಕ್ಷಿಣೆ (ಪರಿಕ್ರಮ) ಮಾಡುವುದಕ್ಕೆ ಸಮನಾಗಿರಲಿದೆ!. ಭಕ್ತರು ದರ್ಶನಕ್ಕಾಗಿ ಇಲ್ಲಿಗೆ ಬಂದಾಗ, ಎಂದಿಗೂ ನಂದಿಸದ ನಾಗರಿಕತೆಯ ಅದ್ಭುತ ನಿರಂತರತೆಯ ಜ್ವಾಲೆಯ ಅನುಭವವನ್ನು ಅವರು ಪಡೆಯುತ್ತಾರೆ. ಅನೇಕ ಸಾಮ್ರಾಜ್ಯಗಳು ಉದಯಿಸಿದವು ಮತ್ತು ನಶಿಸಿದವು, ಸಮಯ ಬದಲಾಯಿತು ಮತ್ತು ಇತಿಹಾಸವು ಅಸಂಖ್ಯಾತ ವಿಪತ್ತುಗಳಿಗೆ ಸಾಕ್ಷಿಯಾಯಿತು; ಆದರೂ, ಸೋಮನಾಥ, ದೇಶದ ಪ್ರಜೆಗಳ ಹೃದಯದಲ್ಲಿ ಸದಾ ನೆಲೆಸಿದ್ದಾನೆ.

ಸೋಮನಾಥ ದೇಗುಲದ ಜೀರ್ಣೋದ್ಧಾರದ 75 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ದಾದಾ ಸೋಮನಾಥನ ಕಟ್ಟಾ ಭಕ್ತನಾಗಿ ನಾನು ಅನೇಕ ಬಾರಿ ಅವನ ಮುಂದೆ ನಮಸ್ಕರಿಸಿದ್ದೇನೆ, ಆದರೆ ಇಂದು, ನಾನು ಇಲ್ಲಿಗೆ ಬರುವಾಗ, ಪ್ರಯಾಣದ ಸಮಯವಿಡೀ ನನಗೆ ಸಂತೋಷಕರ ಅನುಭವ ನೀಡಿದೆ. ನಾನು ಈ ತಾಣಕ್ಕೆ ಕೆಲವೇ ತಿಂಗಳುಗಳ ಹಿಂದೆ ಭೇಟಿ ನೀಡಿದ್ದೆ, ಆ ಸಮಯದಲ್ಲಿ ನಾವು ಸೋಮನಾಥ ಸ್ವಾಭಿಮಾನ ಪರ್ವವನ್ನು ಆಚರಿಸುತ್ತಿದ್ದೆವು. ಸೋಮನಾಥ ದೇಗುಲದ ಮೊದಲ ವಿನಾಶದ 1000 ವರ್ಷಗಳ ನಂತರವೂ ಅವಿನಾಶಿಯಾಗಿರುವ ಹೆಮ್ಮೆ ಇದೆ ಮತ್ತು ಇಂದು, ಈ ಆಧುನಿಕ ರೂಪದ ಪ್ರಾಣಪ್ರತಿಷ್ಠೆಯ 75 ವರ್ಷಗಳ ನಂತರ, ನಾವು ಸಾವಿರ ವರ್ಷಗಳ ಅಮರ ಪಯಣದ ಅನುಭೂತಿ ಪಡೆಯುವ ಅವಕಾಶವನ್ನು ಪಡೆದಿದ್ದೇವೆ.

ಎಪ್ಪತ್ತೈದು ವರ್ಷಗಳ ಹಿಂದೆ, ಮೇ 11ರಂದು, ಸೋಮನಾಥ ದೇವಾಲಯದ ಪ್ರತಿಷ್ಠಾಪನೆಯು ಸಾಮಾನ್ಯ ಸನ್ನಿವೇಶವಾಗಿರಲಿಲ್ಲ. 1947ರಲ್ಲಿ ಭಾರತ ಸ್ವತಂತ್ರವಾದರೆ, 1951ರಲ್ಲಿ ಸೋಮನಾಥನ ಪ್ರಾಣಪ್ರತಿಷ್ಠೆಯು ಭಾರತದ ಸ್ವಾತಂತ್ರ್ಯ ಪ್ರಜ್ಞೆಯನ್ನು ಸಾರಿತು. ಸ್ವಾತಂತ್ರ್ಯದ ಸಮಯದಲ್ಲಿ, ಸರ್ದಾರ್ ಸಾಹಿಬ್ 500ಕ್ಕೂ ಹೆಚ್ಚು ರಾಜಪ್ರಭುತ್ವದ ರಾಜ್ಯಗಳನ್ನು ಸಂಯೋಜಿಸುವ ಮೂಲಕ ಏಕೀಕೃತ ಭಾರತದ ಆಧುನಿಕ ಬಾಹ್ಯರೇಖೆಗಳನ್ನು ರೂಪಿಸಿದರು. ರಾಷ್ಟ್ರವು ವಿದೇಶಿ ಸಂಕೋಲೆಗಳಿಂದ ಮುಕ್ತವಾದ ನಂತರ ಸೋಮನಾಥನ ಪುನರ್



*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ*


*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ*

## ವಡೋದರಾದಲ್ಲಿ ಸರ್ದಾರ್ ಧಾಮ್ ಹಾಸ್ಟೆಲ್ ಉದ್ಘಾಟನೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಡೋದರಾದಲ್ಲಿ ಸರ್ದಾರ್ ಧಾಮ್ ಹಾಸ್ಟೆಲ್ ಅನ್ನು ಉದ್ಘಾಟಿಸಿದರು. ಈ ಯೋಜನೆಯು ಊಟದ ಹಜಾರ, ಗ್ರಂಥಾಲಯ ಮತ್ತು ಸಭಾಂಗಣದಂತಹ ಸೌಲಭ್ಯಗಳು ಹಾಗೂ 1,000 ಬಾಲಕರು ಮತ್ತು 1,000 ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒಳಗೊಂಡಿದೆ. ಇವುಗಳ ಜೊತೆಗೆ ಸ್ವಾಗತ ಕೊಠಡಿ, ನಾಗರಿಕ ಸೌಲಭ್ಯಗಳು, ಊಟದ ಸ್ಥಳ, ಇ-ಲೈಬ್ರರಿ ಸೇರಿದಂತೆ ಸರ್ದಾರ್ ಧಾಮ್ ಸಂಕೀರ್ಣದೊಳಗಿನ ವಿವಿಧ ಸೌಲಭ್ಯಗಳನ್ನು ಅವರು ವೀಕ್ಷಿಸಿದರು.




> ಸ್ಥಳೀಯರಿಗೆ ದನಿ ಉಪಕ್ರಮವನ್ನು ಸಾಮೂಹಿಕ ಚಳುವಳಿಯಾಗಿ ಪರಿವರ್ತಿಸುವುದು ಇಂದಿನ ಅಗತ್ಯವಾಗಿದೆ. ವಿದೇಶಿ ಉತ್ಪನ್ನಗಳ ಬದಲಿಗೆ... ಸ್ಥಳೀಯ ಉತ್ಪನ್ನಗಳನ್ನು ಅವಲಂಬಿಸೋಣ. ನಮ್ಮ ಹಳ್ಳಿಗಳು, ನಮ್ಮ ನಗರಗಳು ಮತ್ತು ನಮ್ಮ ದೇಶದ ಉದ್ಯಮಿಗಳನ್ನು ಸಬಲೀಕರಣಗೊಳಿಸೋಣ.
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*



### ಸೋಮನಾಥ ದೇಗುಲಕ್ಕೆ ಸಂಬಂಧಿಸಿದ ಆಸಕ್ತಿದಾಯಕ ಸಂಗತಿಗಳು

- ಪ್ರತಿ ವರ್ಷ ಸುಮಾರು 10 ದಶಲಕ್ಷ ಭಕ್ತರು ಸೋಮನಾಥಕ್ಕೆ ಭೇಟಿ ನೀಡುತ್ತಾರೆ. 2025 ರಲ್ಲಿ ಮಹಾಶಿವರಾತ್ರಿಯ ಶುಭ ಸಂದರ್ಭದಲ್ಲಿ, ಒಂದೇ ದಿನ 356,000 ಕ್ಕೂ ಹೆಚ್ಚು ಭಕ್ತರು ಪ್ರಾರ್ಥನೆ ಸಲ್ಲಿಸಿ, ಶಿವ ದೇವರ ದರ್ಶನ ಪಡೆದರು.
- ಸೋಮನಾಥ ಟ್ರಸ್ಟ್ ಪ್ರತಿ ವರ್ಷ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಒದಗಿಸುವ ಮೂಲಕ ನೂರಾರು ಮಹಿಳೆಯರನ್ನು ಆರ್ಥಿಕ ಸ್ವಾವಲಂಬನೆಯತ್ತ ಸಬಲಗೊಳಿಸುತ್ತಲಿದೆ.
- ಸೋಮನಾಥ ದೇವಾಲಯ ಸಂಕೀರ್ಣದೊಳಗಿರುವ ಪವಿತ್ರ ಬಿಲ್ವ ಅರಣ್ಯವು ಸುಮಾರು 1,700 ಬಿಲ್ವ ಮರಗಳಿಗೆ ನೆಲೆವೀಡಾಗಿದೆ, ಮಹಿಳಾ ಆರೈಕೆದಾರರ ತಂಡವು ಇದನ್ನು ನಿರ್ವಹಿಸುತ್ತಿದೆ ಮತ್ತು ಸಂರಕ್ಷಿಸುತ್ತಿದೆ.
- ಸೋಮನಾಥದ ಮಿಯಾವಾಕಿ ಅರಣ್ಯವು ವಾರ್ಷಿಕವಾಗಿ ಸುಮಾರು 93,000 ಕಿಲೋಗ್ರಾಂಗಳಷ್ಟು ಇಂಗಾಲ ಆಮ್ಲವನ್ನು ಹೀರಿಕೊಳ್ಳುತ್ತದೆ.
- ಸೋಮನಾಥದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ಮರುಬಳಕೆ ಮೂಲಕ ಪ್ರತಿ ತಿಂಗಳು ಸುಮಾರು 4,700 ಟೈಲ್ಸ್ ಗಳನ್ನು ತಯಾರಿಸಲಾಗುತ್ತದೆ. ಈ ಟೈಲ್ ಗಳನ್ನು ದೇವಾಲಯ ಸಂಕೀರ್ಣದೊಳಗಿನ ಮಾರ್ಗಗಳು ಮತ್ತು ನಡಿಗೆ ಮಾರ್ಗಗಳ ನಿರ್ಮಾಣದಲ್ಲಿ ಬಳಸಲಾಗುತ್ತದೆ.

ಸ್ಥಾಪನೆಯು ಭಾರತವು ಕೇವಲ ಸ್ವತಂತ್ರವಾಗಿಲ್ಲ, ತನ್ನ ಪ್ರಾಚೀನ ವೈಭವವನ್ನು ಪುನಃ ಪಡೆದುಕೊಳ್ಳುತ್ತಿದೆ ಎಂಬುದನ್ನು ಜಗತ್ತಿಗೆ ಏಕಕಾಲದಲ್ಲಿ ಘೋಷಿಸಿತು.

ಪ್ರಧಾನಮಂತ್ರಿಗಳು, "ಸೋಮನಾಥನು ಈಡೇರಿಸಿದ ವಿನಾಶದಲ್ಲಿನ ಸೃಷ್ಟಿಯ ಸಂಕಲ್ಪವನ್ನು ನಾನು ಇಲ್ಲಿ ನೋಡುತ್ತಿದ್ದೇನೆ" ಎಂದು ಹೇಳುತ್ತಾ, ತಾವು ಕೇವಲ 75 ವರ್ಷಗಳ ಹಿಂದಿನ ಅವಲೋಕನ ವೀಕ್ಷಿಸುತ್ತಿಲ್ಲ ಎಂದರು. ಪವಿತ್ರ ಆವರಣದಲ್ಲಿ ಸುಳ್ಳಿನ ವಿರುದ್ಧ ಸತ್ಯದ ಅಮರದ ವಿಜಯದ ಗ್ರಹಿಕೆಯನ್ನು ಅವರು ವಿವರಿಸಿದರು. ಸಾರ್ವತ್ರಿಕ ಕಲ್ಯಾಣದ ಪಾಠಗಳನ್ನು ನೀಡಿರುವ ಸಹಸ್ರಾರು ವರ್ಷಗಳ ಆಧ್ಯಾತ್ಮಿಕ ಪ್ರಜ್ಞೆಯನ್ನು ವೀಕ್ಷಿಸುವ ಬಗ್ಗೆ ಪ್ರಧಾನಮಂತ್ರಿ ಮಾತನಾಡಿದರು. ಸಂಕಷ್ಟಗಳನ್ನೆದುರಿಸಿ ದೃಢವಾಗಿ ನಿಂತಿರುವ ಸೋಮನಾಥನಲ್ಲಿ ಸಾಕಾರಗೊಂಡಿರುವ ಭಾರತದ ವಿನಾಶವಾಗದ ಸಾರದ

## ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಭಾವಪೂರ್ಣ ನಮನ

ಗುಜರಾತ್ ನ ಸೋಮನಾಥದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಪ್ರಧಾನಮಂತ್ರಿ ಮೋದಿ ಅವರು ಭಾವಪೂರ್ಣ ಗೌರವ ನಮನ ಸಲ್ಲಿಸಿದರು. ಸೋಮನಾಥ ದೇವಾಲಯದ ಪುನರ್ನಿರ್ಮಾಣದಲ್ಲಿ ಸರ್ದಾರ್ ಪಟೇಲ್ ಅವರ ದೂರದೃಷ್ಟಿ ಮತ್ತು ಅಚಲ ಸಂಕಲ್ಪ ನಿರ್ಣಾಯಕ ಪಾತ್ರ ವಹಿಸಿತ್ತು ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಭಾರತದ ನಾಗರಿಕತೆಯ ಹೆಮ್ಮೆ ಮತ್ತು ಆಧ್ಯಾತ್ಮಿಕ ನಿರಂತರತೆಯ ಸಂಕೇತವಾಗಿ ನಿಂತಿರುವ ಸೋಮನಾಥನು, ಸಂಪೂರ್ಣ ವೈಭವಕ್ಕೆ ಪುನಃಸ್ಥಾಪಿತವಾಗುವುದನ್ನು ನೋಡುವುದು ಸರ್ದಾರ್ ಪಟೇಲ್ ಅವರ ಕನಸಾಗಿತ್ತು ಎಂದು ಅವರು ವಿವರಿಸಿದ್ದಾರೆ. ಸರ್ದಾರ್ ಪಟೇಲ್ ಅವರ ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು ರಾಷ್ಟ್ರವು ಸದಾ ಬದ್ಧವಾಗಿರಲಿದೆ ಎಂದು ಅವರು ಭರವಸೆ ನೀಡಿದ್ದಾರೆ.



## ಮಂತ್ರಮುಗ್ಧಗೊಳಿಸಿದ ಹಾರಾಟಕ್ಕೆ ಸಾಕ್ಷಿ

ಸೋಮನಾಥ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ, ಪ್ರಧಾನಮಂತ್ರಿ ಮೋದಿ ಅವರು ಭಾರತೀಯ ವಾಯುಪಡೆಯ 'ಸೂರ್ಯಕಿರಣ್' ಏರೋಬ್ಯಾಟಿಕ್ ತಂಡ ಪ್ರದರ್ಶಿಸಿದ ರೋಮಾಂಚಕ ಹಾರಾಟವನ್ನು ವೀಕ್ಷಿಸಿದರು. ಆಗಸದಲ್ಲಿ ವೈಭವ ಮತ್ತು ಶೌರ್ಯದ ಈ ಭವ್ಯ ಸಂಗಮವು ಸೋಮನಾಥ ದೇವಾಲಯದ ಮೇಲೆ ಕೇಸರಿ ಮತ್ತು ತ್ರಿವರ್ಣ ಧ್ವಜದ ಕಾಂತಿಯುತ ಹೊಳಪನ್ನು ಬೀರಿತು ಎಂದು ಅವರು ಬಣ್ಣಿಸಿದರು. ಈ ಮೋಹಕ ದೃಶ್ಯ ಹಾಗೂ ಭಕ್ತಿ ಮತ್ತು ಶಕ್ತಿಯ ಚೈತನ್ಯವು ಪ್ರತಿಯೊಂದು ಹೃದಯವನ್ನೂ ಅಗಾಧ ಸಂತೋಷದಿಂದ ತುಂಬಿದೆ ಮತ್ತು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡುವಂತೆ ಮಾಡಿದೆ.

ಬಗೆಗಿನ ತಮ್ಮ ದೃಷ್ಟಿಕೋನವನ್ನು ಅವರು ವ್ಯಕ್ತಪಡಿಸಿದರು. "ಶತಮಾನಗಳ ದುಷ್ಟ ಪ್ರಯತ್ನಗಳಿಂದ ಅಳಿಸಲಾಗದ, ಮಣಿಸಲು ಸಾಧ್ಯವಾಗದ ಭಾರತದ ಅವಿನಾಶವಾದ ರೂಪವನ್ನು ನಾನು ಇಲ್ಲಿ ನೋಡುತ್ತಿದ್ದೇನೆ" ಎಂದು ಪ್ರಧಾನಮಂತ್ರಿ ಮೋದಿ ಪ್ರತಿಪಾದಿಸಿದರು. "ಇದು ಕೇವಲ ಭೂತಕಾಲದ ಆಚರಣೆಯಲ್ಲ; ಇದು ಮುಂದಿನ ಸಾವಿರ ವರ್ಷಗಳ ಕಾಲ ಭಾರತದ ಸ್ಫೂರ್ತಿಯೂ ಆಗಿದೆ" ಎಂದು ಹೇಳುತ್ತಾ, ಸೋಮನಾಥ ಅಮೃತ ಮಹೋತ್ಸವವು ಸ್ಮರಣಾರ್ಥ ಕಾರ್ಯಕ್ರಮವನ್ನು ಮೀರಿದ್ದು ಎಂದು ಅವರು ವಿವರಿಸಿದ್ದಾರೆ.

### ಸೋಮನಾಥ ಅಮೃತ ಮಹೋತ್ಸವದಲ್ಲಿ ಪ್ರಧಾನಮಂತ್ರಿ ಮೋದಿ ಭಾಗಿ

ಭಾರತದ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಹಾಗೂ ದೇಶದ ಅಚಲ ನಂಬಿಕೆ ಮತ್ತು ನಾಗರಿಕ ಪರಂಪರೆಯ ಸಂಕೇತವಾದ ಪವಿತ್ರ ಸೋಮನಾಥ ದೇವಾಲಯದಲ್ಲಿ ನಡೆದ ಸೋಮನಾಥ ಅಮೃತ ಮಹೋತ್ಸವದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಿದರು. ಪುನರ್ ನಿರ್ಮಿಸಲಾದ ದೇವಾಲಯ ಉದ್ಘಾಟನೆಗೊಂಡು 75 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸೋಮನಾಥ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಉತ್ಸವದ ಭಾಗವಾಗಿ ಅವರು, ಅನೇಕ ಶುಭ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು ಮತ್ತು ಧ್ವಜಾರೋಹಣ ಸಮಾರಂಭದಲ್ಲಿ ಭಾಗಿಯಾದರು. ಸೋಮನಾಥನ ಶ್ರೀಮಂತ ಪರಂಪರೆ ಮತ್ತು ಆಧ್ಯಾತ್ಮಿಕ ಮಹತ್ವಕ್ಕೆ ಗೌರವಾರ್ಥವಾಗಿ ಈ ಸಂದರ್ಭದಲ್ಲಿ ಸ್ಮರಣಾರ್ಥ ಅಂಚೆ ಚೀಟಿ ಮತ್ತು ನಾಣ್ಯವನ್ನು ಸಹ ಬಿಡುಗಡೆ ಮಾಡಲಾಯಿತು.

### ಸೋಮನಾಥ ದೇಗುಲದಲ್ಲಿ ಮಹಾಪೂಜೆ ಮತ್ತು ಕುಂಭಾಭಿಷೇಕ

ಗುಜರಾತ್ ಭೇಟಿಯ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೋಮನಾಥ ದೇವಾಲಯದಲ್ಲಿ ಮಹಾಪೂಜೆ ಮತ್ತು ಕುಂಭಾಭಿಷೇಕ ವಿಧಿವಿಧಾನಗಳಲ್ಲಿ ಸಹ ಭಾಗಿಯಾದರು. ಇಂತಹ ಅಪಾರ ಅದೃಷ್ಟವನ್ನು ಪಡೆದಿರುವುದು ತಮ್ಮ ಜೀವನದ ಅತ್ಯಂತ ಭಾವನಾತ್ಮಕ ಮತ್ತು ಮರೆಯಲಾಗದ ಕ್ಷಣಗಳಲ್ಲಿ ಒಂದಾಗಿದೆ ಎಂದು ಅವರು ಬಣ್ಣಿಸಿದರು. ಪುನರ್ ನಿರ್ಮಿಸಲಾದ ಸೋಮನಾಥ ದೇವಾಲಯದ 75 ನೇ ವಾರ್ಷಿಕೋತ್ಸವದ ಸ್ಮರಣಾರ್ಥದ ಈ ವಿಶೇಷ ಸಂದರ್ಭದಲ್ಲಿ ಮಹಾದೇವನನ್ನು ಪೂಜಿಸುವುದು ನಿಜಕ್ಕೂ ಮರೆಯಲಾಗದ ಅನುಭವವಾಗಿದೆ. ದರ್ಶನ ಮತ್ತು ಪೂಜೆಗಳು ಅಪರಿಮಿತ ಆಧ್ಯಾತ್ಮಿಕ ಶಕ್ತಿಯ ಸೆಲೆಯಾಗಿದೆ ಎಂದೂ ಅವರು ಹೇಳಿದರು.



### ಸೋಮನಾಥನ ಛಾಯಾಚಿತ್ರ ಹಂಚಿಕೊಂಡಿರುವ ಪ್ರಧಾನಮಂತ್ರಿ

ಸೋಮನಾಥದಿಂದ ವಡೋದರಾಗೆ ಪಯಣಿಸುವಾಗ ಸೆರೆಹಿಡಿಯಲಾದ ಸೋಮನಾಥ ದೇಗುಲದ ಛಾಯಾಚಿತ್ರವನ್ನು ಪ್ರಧಾನಮಂತ್ರಿ ಮೋದಿ ಹಂಚಿಕೊಂಡಿದ್ದಾರೆ. ಸೋಮನಾಥ ದೇವಾಲಯವು ಪ್ರಭಾಸ್ ಪಠಾನ್ ತೀರದಲ್ಲಿ, ಭಕ್ತಿ, ಇತಿಹಾಸ ಮತ್ತು ನಾಗರಿಕತೆಯ ಚೈತನ್ಯದ ಉಜ್ವಲ ಸಂಕೇತವಾಗಿ ಎತ್ತರವಾಗಿ ನಿಂತಿದೆ. ಇದು ಅನಾಗರಿಕ ದಾಳಿಗಳು, ಆಕ್ರಮಣಗಳು ಮತ್ತು ಶತಮಾನಗಳ ಗತಿಯನ್ನು ಮೀರಿ ನಿಂತಿದೆ. ಇದು ಅಮರವಾಗಿದೆ. ಸೋಮನಾಥ, ಪ್ರತಿಯೊಬ್ಬ ಭಾರತೀಯರಿಗೂ ಶಕ್ತಿ, ಸ್ಥೈರ್ಯ ಮತ್ತು ಭರವಸೆಯನ್ನು ನೀಡುತ್ತದೆ ಎಂದು ಅವರು ಉದ್ಗರಿಸಿದ್ದಾರೆ. ●

ಪ್ರಧಾನಮಂತ್ರಿಯವರ ಸಂಪೂರ್ಣ ವೇಳಾಪಟ್ಟಿ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



**Narendra Modi**
@narendramodi


देशभर के किसान भाई-बहनों के हितों की रक्षा और उनकी आय में वृद्धि के लिए हम निरंतर महत्वपूर्ण निर्णय ले रहे हैं। इसी दिशा में हमारी सरकार ने वर्ष 2026-27 के मार्केटिंग सीजन के लिए खरीफ फसलों के न्यूनतम समर्थन मूल्य यानि एमएसपी में बढ़ोतरी को मंजूरी दी है। इस फैसले से देश के करोड़ों अन्नदाताओं को जहां उनकी उपज का उचित और लाभकारी मूल्य मिलेगा, वहीं उनके जीवन में और खुशहाली आएगी।



**Rajnath Singh**
@rajnathsingh

महिलाओं का सम्मान हमारी सभ्यता की आत्मा है और कोई समाज बिना इसके प्रगति नहीं कर सकता। प्रधानमंत्री मोदी जी के नेतृत्व में भारत सरकार नारी सशक्तिकरण के साथ-साथ महिला आरक्षण (33%) के लिए भी प्रतिबद्ध रही है।

यह विधेयक केवल कानून नहीं बल्कि हमारी सामूहिक इच्छा का प्रतीक था, जो भले ही पारित न हो सका, लेकिन महिलाओं को राजनीतिक अधिकार दिलाने का संकल्प और मजबूत हुआ है।



**Amit Shah**
@AmitShah

मैं अपनी माता के चरण स्पर्श हर दिन किया करता था और उनके न रहने पर भी हर दिन उनकी तस्वीर के सामने दीप जलाता हूँ। हमारे देश में हर दिन माताओं को समर्पित है।



**Nitin Gadkari**
@nitin_gadkari

Tolling reimagined with Multi Lane Free Flow (MLFF)—a barrier-less system enabling seamless, non-stop travel. Powered by FASTag, AI, and number plate recognition, it ensures zero waiting time, faster journeys, and lower costs. Drive through at speeds of up to 80 km/h and experience the future of smart, efficient toll collection on India's highways.



**Jyotiraditya M. Sc...**
@JM_Scindia

भारत देश में अगर रक्त का संचार कोई हृदय के रूप में करता है तो मेरा @IndiaPostOffice करता है



**Hardeep Singh Puri**
@HardeepSPuri

देश में किसी भी पेट्रोलियम उत्पाद की कमी नहीं...

भारत के पास 60 दिनों का कच्चा तेल, 60 दिनों की LNG और 45 दिनों का एलपीजी भंडार उपलब्ध है।

पश्चिम एशिया में तनाव के बीच निर्बाध आपूर्ति सुनिश्चित करने के लिए भारत ने अपने दैनिक एलपीजी उत्पादन में अभूतपूर्व वृद्धि (35,000 टन से बढ़ाकर 54,000 टन) की है।

# No power can make India bow: PM invokes Pokhran in Somnath

PRESS TRUST OF INDIA
Somnath (Gujarat), May 11

PRIME MINISTER NARENDRA Modi on Monday drew parallels to the 1998 Pokhran nuclear tests, asserting that no power in the world can make India bow or succumb under pressure.

Addressing a gathering here at Somnath Amrut Mahotsav, marking 75 years of the inauguration of the restored temple dedicated to Lord Shiva, he also said that "forces" in the country continue to prioritise appeasement politics over national self-respect. A similar mindset was witnessed during opposition to the construction of the Ram temple in Ayodhya, the PM noted.

May 11 is a significant date as it not only marks the consecration of the Somnath temple



Prime Minister Narendra Modi during the Somnath Amrut Mahotsav, in Veraval, Gir Somnath district on Monday PTI

but also India's nuclear tests in 1998 under the leadership of then Prime Minister Atal Bihari Vajpayee, he said.

"On May 11, 1998, the nation conducted its nuclear tests. Our scientists demonstrated India's capabilities and potential to the entire world," Modi pointed out.

The tests "sent shockwaves across the globe" and triggered angry reactions from several countries, he said.

"Who is India to conduct nuclear tests? The world reacted with anger," Modi said, referring to the international response following the Pokhran tests.

He said global powers then tried to isolate India through sanctions and economic pressure after the tests.

Many countries would have succumbed under such circumstances, but India stood firm, he highlighted.

India went ahead with two more nuclear tests on May 13, 1998, despite mounting pressure from the international community, he noted.

He praised the then Vajpayee-led government for refusing to bow to global pressure.

# India has sufficient stocks of fuel, commodities: govt.

Centre says no reason for panic buying, conservation efforts are only aimed at boosting long-term preparedness; Rajnath asks Ministries, States to implement PM's appeal on responsible use of fuels

Saurabh Trivedi
NEW DELHI

India faces no shortage of petroleum products and commodities despite the escalating conflict in West Asia, the fifth meeting of the Informal Group of Ministers (IGoM), chaired by Defence Minister Rajnath Singh at Kartavya Bhavan in New Delhi, was informed on Monday.

According to the Ministry of Defence, India currently has 60 days of crude oil reserves, 60 days of natural gas and 45 days of LPG rolling stock, ensuring uninterrupted supply across the country.

India's foreign exchange reserves remain strong at $703 billion, while the country continues to meet domestic fuel demand in full despite global disruptions. The Centre highlighted that India was among the few nations where petroleum prices have remained stable even after more than 70 days of conflict-driven international volatility.

In contrast, many countries have witnessed fuel price hikes ranging from 30% to 70%. However, Indian oil marketing companies are reportedly absorbing losses of nearly ₹1,000 crore daily, with under-recoveries touching almost ₹2 lakh crore in the first quarter of 2026, to protect citizens from rising international crude prices.



**Taking stock:** Defence Minister Rajnath Singh and others at the meeting of Informal Group of Ministers in New Delhi on Monday. ANI

**Supply chain stable**

They were told that there was sufficient availability of essential commodities with no reason for public anxiety or panic buying. Supply chains remain stable, and conservation efforts were aimed at strengthening long-term preparedness if the crisis prolongs further, it added.

Mr. Singh directed Ministries and State governments to implement Prime Minister Narendra Modi's appeal for responsible fuel consumption and public participation.

CONTINUED ON » PAGE 10
EDITORIAL » PAGE 6

# 'India-Oman FTA on track for June 1 start even as deal with Chile hit hurdles'

T.C.A. Sharad Raghavan
NEW DELHI

The India-Oman Comprehensive Economic Partnership Agreement (CEPA) will "probably" be implemented on June 1, 2026, Commerce Minister Piyush Goyal said on Tuesday, following a meeting with the negotiating team from Oman.

He added that the India-Chile Free Trade Agreement negotiations have hit some hurdles due to the difference in the sizes of the economies involved.

"I had a very good meeting with the Oman team today and most probably the Oman FTA will come into effect from June 1, 2026," Mr. Goyal told reporters on Tuesday on the sidelines of the CII Annual Business Summit 2026.

**'Productive meeting'**

Earlier in the day, he posted on social media that he had held a "productive" meeting with Pankaj Khimji, Adviser for Foreign Trade and International Cooperation at the Ministry of Commerce, Industry and Investment Promotion in Oman.

"Discussions focused on strengthening India-Oman economic cooperation, enhancing connectivity & logistics linkages, facilitating trade flows, and exploring new avenues for bilateral partnership under the India-Oman CEPA framework," Mr. Goyal had posted. The India-Oman CEPA was signed on December 18, 2025.



Piyush Goyal

However, in contrast, the Commerce Minister indicated that talks with Chile were running into some trouble.

"With regard to Chile, I had a very good meeting with the foreign minister," Mr. Goyal said.

**'Some challenges'**

"There are some challenges, given the very different sizes of the economies and different scales of opportunities that both countries offer to each other."

While he said that the two sides were trying to bridge that gap through "innovative solutions", he also did specify certain things that Chile could offer India to encourage it.

"If we get a good deal on critical minerals and other important concessions, then maybe there is a very good possibility that we should be able to finalise an FTA with Chile too," Mr. Goyal said.

# India set to achieve record exports of $863 bn: Goyal

ADITYA RANGROO
TRIBUNE NEWS SERVICE

NEW DELHI, MAY 12

Union Minister of Commerce and Industry Piyush Goyal on Tuesday said India is set to achieve an all-time high export figure of nearly $863 billion this year, while referring to country's export performance.

Addressing the Confederation of Indian Industry (CII) Annual Summit in New Delhi, Goyal said India remained the fastest-growing large economy and highlighted that the country had nearly 11 months of import cover in foreign exchange reserves.

He highlighted that India's trade deficit in goods and services together was much lower than the country's annual remittances, reflecting strong economic performance.

# Gujarat rail line, Nagpur airport upgrade cleared

HT Correspondent
letters@hindustantimes.com

NEW DELHI: The Cabinet Committee on Economic Affairs, chaired by prime minister Narendra Modi, on Wednesday, approved Ahmedabad (Sarkhej)-Dholera semi high-speed double line project of the Railways ministry at a total cost of approximately ₹20,667 crore, the government said.

It will be Indian Railways' first semi high-speed project, planned with indigenously developed technology, an official release said.

"The project section will ... ing network of Indian Railways by about 134 kms.

**Nagpur airport upgrade**

The Cabinet also approved upgrading the Nagpur International Airport through a public-private partnership (PPP) model. It cleared the extension of the lease period of the Airports Authority of India's (AAI) land allotted to MIHAN India Ltd (MIL) beyond August 6, 2039, enabling MIL to license the airport to GMR Nagpur International Airport Ltd (GNIAL), the government said.

# India backs two-state solution for Palestine issue, says Jaishankar at BRICS meeting

Kallol Bhattacherjee
NEW DELHI

Highlighting India's traditional approach to the Israel-Palestinian conflict, External Affairs Minister S. Jaishankar on Thursday presented the "National Statement" at the BRICS ministerial, reiterating India's call for a "two-state solution" to the issue and calling for an end to "risks to maritime traffic, and disruptions to energy infrastructure" in the Gulf region.

Supporting the need for dialogue and diplomacy to resolve conflicts in the region and in North Africa, Mr. Jaishankar sought "coordinated diplomatic efforts" to deal with the situations in Lebanon, Syria, Sudan and also in Libya.



**Multilateral engagement:** Prime Minister Narendra Modi with the Foreign Ministers and Heads of Delegation of BRICS countries during a meeting in New Delhi on Thursday. PTI

...reign Ministers' meeting witnessed several speeches, including one by Iran's Foreign Minister Seyed Abbas Araghchi who said that Iran will defend its sovereignty while "advancing diplomacy", adding that the U.S.-Israel attack against Iran will not have a ...

"The wider region also gives rise to serious concern. The conflict in Gaza has grave humanitarian implications. A sustained ceasefire, humanitarian access, and a credible pathway towards a durable and peaceful resolution remain essential," Mr. Jaishankar ... two-state solution where the Palestine issue is concerned." Mr. Jaishankar referred to the impact of the U.S.-Israel war on Iran and highlighted the risks that the conflict has posed to shipping and energy infrastructure.

Referring indirectly to ... U.S. against multiple members of the United Nations, Mr. Jaishankar drew attention to the "increasing" tendency towards "unilateral coercive measures and sanctions", terming them "inconsistent with international law".

Earlier, Mr. Jaishankar welcomed the dignitaries that included Mr. Araghchi who made an emphatic call to resist the U.S. Referring to U.S. military and trade practices, Mr. Araghchi said the international community is facing "variations" of the "same repugnant coercion".

At the end of the engagements, visiting dignitaries Mr. Araghchi, Russian Foreign Minister Sergey Lavrov and Brazil's Foreign Minister Mauro Vieira called on Prime Mi...

ಪ್ರಧಾನಮಂತ್ರಿ ನರೇಂದ್ರ ಮೋದಿಯವರ 7 ಮನವಿ



# ಬಲಿಷ್ಠ ಭಾರತಕ್ಕಾಗಿ ಕರೆ

ಭಾರತವು 'ಅಭಿವೃದ್ಧಿ ಹೊಂದಿದ ದೇಶ'ವಾಗುವತ್ತ ಮುನ್ನಡೆಯುತ್ತಿದ್ದು, ಈಗಾಗಲೇ ಸಮರ್ಥ, ಸ್ಪರ್ಧಾತ್ಮಕ ಮತ್ತು ಸಬಲೀಕೃತ ಸ್ತಂಭಗಳ ಮೇಲೆ ಅಡಿಪಾಯವನ್ನು ನಿರ್ಮಿಸಿದೆ. ರಾಷ್ಟ್ರವು ತನ್ನ ಅಭಿವೃದ್ಧಿಯ ಪಯಣದುದ್ದಕ್ಕೂ, ಈ ರೂಪಾಂತರದಲ್ಲಿ ಪ್ರತಿಯೊಬ್ಬ ಭಾರತೀಯನನ್ನು ಒಂದು ಪ್ರೇರಕ ಶಕ್ತಿಯಾಗಿ ತೊಡಗಿಸಿಕೊಂಡಿದೆ. ಸಾರ್ವಜನಿಕ ಸಹಭಾಗಿತ್ವವು ಈ ಪ್ರಯತ್ನದ ತಳಹದಿಯಾಗಿ ಕಾರ್ಯನಿರ್ವಹಿಸುತ್ತದೆ. ಇದೇ ಕಾರಣಕ್ಕಾಗಿಯೇ, ಜಾಗತಿಕ ಸವಾಲುಗಳ ನಡುವೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದೊಂದಿಗೆ 7 ಮಹತ್ವದ ಮನವಿ ಮಾಡಿದ್ದಾರೆ. ಕಳೆದ ದಶಕಗಳಲ್ಲಿ, ರಾಷ್ಟ್ರವು ಯುದ್ಧ ಅಥವಾ ಇತರ ಪ್ರಮುಖ ಬಿಕ್ಕಟ್ಟುಗಳನ್ನು ಎದುರಿಸಿದಾಗಲೆಲ್ಲಾ, ಪ್ರತಿಯೊಬ್ಬ ಪ್ರಜೆಯೂ ಸಂದರ್ಭ ಎದುರಿಸಿ ಸರ್ಕಾರದ ಕರೆಗೆ ಸ್ಪಂದಿಸಿ ತಮ್ಮ ಕರ್ತವ್ಯವನ್ನು ಪೂರೈಸಿದ್ದಾರೆ. ಹೆಚ್ಚಿನ ಬದಲಾವಣೆ ತರಲು 1.4 ಶತಕೋಟಿ ಭಾರತೀಯರು ಒಗ್ಗೂಡಿದಾಗ, ರಾಷ್ಟ್ರವನ್ನು ಸ್ವಾವಲಂಬಿ ಮತ್ತು ಸಬಲಗೊಳಿಸುವಲ್ಲಿ ಯಾವುದೂ ಅಡ್ಡಿಯಾಗುವುದಿಲ್ಲ...

**1.4** ಶತಕೋಟಿ ಜನರ ಸಾಮೂಹಿಕ ಪ್ರಯತ್ನಗಳು ಭಾರತದ ದೊಡ್ಡ ಶಕ್ತಿಯಾಗಿದೆ. ನಿಮ್ಮ ಸಣ್ಣ ಜವಾಬ್ದಾರಿಗಳನ್ನು ನಿಭಾಯಿಸಿ...

## ಬನ್ನಿ, ಭಾರತವನ್ನು ಇನ್ನಷ್ಟು ಬಲಿಷ್ಠಗೊಳಿಸೋಣ...

**7 ಮನವಿಗಳು**

1. ಸಾಧ್ಯವಾದಲ್ಲೆಲ್ಲಾ ಮನೆಯಿಂದಲೇ ಕೆಲಸ ಮಾಡಲು ಆದ್ಯತೆ ನೀಡಿರಿ.
2. ಮುಂದಿನ ಒಂದು ವರ್ಷದವರೆಗೆ ಚಿನ್ನ ಖರೀದಿಯಿಂದ ದೂರವಿರಿ.
3. ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಕಡಿಮೆ ಮಾಡಲು ಮೆಟ್ರೋ ಮತ್ತು ಸಾರ್ವಜನಿಕ ಸಾರಿಗೆಯನ್ನು ಅವಲಂಬಿಸಿರಿ.
4. ಅಡುಗೆ ಎಣ್ಣೆಯನ್ನು ಮಿತವಾಗಿ ಬಳಸಿ ಮತ್ತು ಅನಗತ್ಯ ಬಳಕೆಯನ್ನು ಕಡಿಮೆ ಮಾಡಿ.
5. ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ತಗ್ಗಿಸಿ ಮತ್ತು ನೈಸರ್ಗಿಕ ಕೃಷಿಯನ್ನು ಉತ್ತೇಜಿಸಿರಿ.
6. ವಿದೇಶಿ ಬ್ರ್ಯಾಂಡ್ ಉತ್ಪನ್ನಗಳ ಬಳಕೆ ಕಡಿಮೆ ಮಾಡಿ ಮತ್ತು ಸ್ಥಳೀಯ ಪರ್ಯಾಯಗಳನ್ನು ಬಳಸಿರಿ.
7. ಮುಂದಿನ ಒಂದು ವರ್ಷದವರೆಗೆ ಸಾಧ್ಯವಾದಷ್ಟೂ ಅಂತಾರಾಷ್ಟ್ರೀಯ ಪ್ರಯಾಣ ಮಾಡದಿರಿ.

NEW INDIA
SAMACHAR
FORTNIGHTLY

RNI NO.: DELENG/2020/78811 JUNE 01-15, 2026
RNI Registered No DELENG/2020/78811 (Publishing Date: May 19, 2026 Pages: 78)

EDITOR IN CHIEF
Dhirendra Ojha
Principal Director General
Press Information Bureau, New Delhi

PUBLISHER:
Kanchan Prasad
Director General, on behalf of
Central Bureau Of Communication

PUBLISHED FROM:
Room No–278, Central Bureau Of Communication, 2nd Floor, Soochna Bhawan, New Delhi -110003